Hon'ble Speaker of Karnataka Legislative Assembly, Hon'be Chairman of Karnataka Legislature Council and Hon'ble members of the Legislature,

Regarding the resignation of Justice N. Santosh Hegde to the post of Karnataka Lokayukta I had sent a message to both the Houses of Karnataka Legislature on 3.7.2010 urging the members of both the Houses to unanimously appeal to Justice Santosh Hegde to reconsider his decision and withdraw his resignation. This afternoon Justice Santosh Hegde has submitted a letter withdrawing his resignation. I have agreed to the withdrawal and consequently his resignation stands withdrawn. I am happy at the outcome. I am satisfied that the purpose of my message to both the Houses of Legislature has already been served.

H.R. Bharadwaj

ಅಧ್ಯಕ್ಷರು: ಮಾನ್ಯ ರೇವಣ್ಣನವರು ಚರ್ಚೆಯನ್ನು ಮುಂದುವರೆಸಬೇಕು.

7. ನಿಯಮ 69ರ ಅಡಿಯಲ್ಲಿ ಮುಂದುವರೆದ ಚರ್ಚೆ

ವಿಷಯ: ಸನ್ಮಾನ್ಯ ಲೋಕಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಗ್ಗೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅದಿರು ಮಾಫಿಯಾದವರಿಂದ ಸುಮರು 2,500 ಕೋಟಿ ರೂಪಾಯಿಗಳ ಅದಿರನ್ನು ದಾಖಲೆ ಸಮೇತ ಪತ್ತೆ ಹಚ್ಚಿರುವಂಥದ್ದು ಮತ್ತು 250 ಕೋಟಿ ರೂಪಾಯಿಗಳ ಪದಾರ್ಥಗಳು ನಾಪತ್ತೆಯಾಗಿರುವ ಬಗ್ಗೆ ನಾನು ನಿಯಮ 60 ಅಡಿಯಲ್ಲಿ ಕೊಟ್ಟಿದ್ದೆ. ಅದನ್ನು ತಾವು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವಂತೆ ಆದೇಶ ಮಾಡಿದ್ದೀರಿ. ಅದಕ್ಕೆ ನಾನು ತಮಗೆ ವಂದನೆಯನ್ನು ಸಲ್ಲಿಸುತ್ತೇನೆ. ಈ ರಾಜ್ಯದಲ್ಲಿ 2001 ರಿಂದ 2010ರವರೆಗೆ ಗಣಿ ಅದಿರಿನಲ್ಲಿ ಹಲವಾರು ಅಕ್ರಮಗಳು ನಡೆದಿವೆಯೆಂದು ಸಭಾ ನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಯವರೆ, ಮೊನ್ನೆ ಹೇಳಿದ್ದಾರೆ. ಅವರು ಅಧಿಕಾರಕ್ಕೆ ಬಂದಮೇಲೆ ಲೋಕಾಯುಕ್ತರಿಗೆ ತನಿಖೆ ಮಾಡುವುದಕ್ಕೆ ಒಂದು ಆದೇಶವನ್ನು ಕೊಟ್ಟಿದ್ದು, ಅವರು ಮೊದಲನೇ ವರದಿಯನ್ನು ಸಲ್ಲಿಸಿದ್ದಾರೆ. ಅದು ಈಗ

ಸಭಾನಾಯಕರ ಕೈಯಲ್ಲಿದೆ. ಮಾನ್ಯ ಕುಮಾರಸ್ವಾಮಿಯವರು ಕೊಟ್ಟಂಥ 2000 ರಿಂದ 2007ರವರೆಗೆ ಎಂದು ಇತ್ತು. ಅದು ಆದ ಮೇಲೆ ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ಸಭೆಯಲ್ಲಿ 2010ರವರಗೆ ಆಗಿರುವಂಥದ್ದರ ಬಗ್ಗೆ ಚರ್ಚೆ ಮಾಡೋಣವೆಂದು ಹೇಳಿದರು. ಅದು ಒಂದು ದಿವಸವಾಗಲಿ, ಎರಡು ದಿವಸವಾಗಲಿ, ಮೂರು ದಿವಸಗಳಾಗಲಿ, ನಾಲ್ಕು ದಿವಸಗಳವರೆಗೆ ಆದರೂ ನಾನು ಚರ್ಚೆ ಮಾಡುವುದಕ್ಕೆ ಸಿದ್ಧನಿದ್ದೇನೆಂಬ ಮಾತನ್ನು ಹೇಳಿದ್ದಾರೆ. ಇದರ ಜೊತೆಗೆ ಲೋಕಾಯುಕ್ತರು ಯಾವ ಕಾರಣಕ್ಕಾಗಿ ರಾಜೀನಾಮೆಯನ್ನು ಕೊಟ್ಟರೆನ್ನುವ ಬಗ್ಗೆ ಚರ್ಚೆಯಗಿ ಅದರಲ್ಲೂ ಎಲ್ಲಾ ಪಕ್ಷದ ಮುಖಂಡರು ಅದು ಕಾಂಗ್ರೆಸ್ ಪಕ್ಷವಿರಬಹುದು, ಬಿ.ಜೆ.ಪಿ. ಇರಬಹುದು, ಜೆ.ಡಿ.ಎಸ್. ಇರಬಹುದು ಮತ್ತು ನಮ್ಮ ರಾಜ್ಯದ ಆರು ಕೋಟಿ ಜನರು ಇವತ್ತು ಲೋಕಾಯುಕ್ತರು ಯಾವ ಉದ್ದೇಶಕ್ಕಾಗಿ ರಾಜೀನಾಮೆಯನ್ನು ಕೊಟ್ಟರು, ಇದಕ್ಕೆ ಕಾರಣ ಏನು? ಎನ್ನುವ ಬಗ್ಗೆ ಕಳೆದ ಹತ್ತಾರು ದಿವಸಗಳಿಂದ ಚರ್ಚೆ ಆಗಿ, ಅಂತಿಮವಾಗಿ ಈಗ ಮಾನ್ಯ ರಾಜ್ಯಪಾಲರಿಂದ ಬಂದಂಥ ಸಂದೇಶವನ್ನು ಎರಡು ಸದನದ ಗಮನಕ್ಕೆ ತಂದಿದ್ದೀರಿ. ಇವತ್ತು ಲೋಕಾಯುಕ್ತರು ರಾಜೀನಾಮೆಯನ್ನು ವಾಪಸ್ಸು ಪಡೆದಿದ್ದಾರೆನ್ನುವ ಬಗ್ಗೆ ನಾವು ಮತ್ತು ರಾಜ್ಯದ ಐದು ಕೋಟಿ ಜನರು ಮತ್ತು ರಾಜ್ಯ ಸರ್ಕಾರ ಈ ಬಗ್ಗೆ ಒಂದು ನಿರ್ಣಯ ಮಾಡಿ, ಅವರು ರಾಜೀನಾಮೆಯನ್ನು ವಾಪಸ್ಸು ಪಡೆಯಲು ರಾಜ್ಯ ಸರ್ಕಾರವು ಖುದ್ದಾಗಿ ಹೋಗಿ ಅವರನ್ನು ಭೇಟಿ ಮಾಡಿದ್ದಕ್ಕೆ ಮೊದಲನೆಯದಾಗಿ ನಾನು ರಾಜ್ಯ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಇವತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಎರಡು ಸದನದ ವಿರೋಧಪಕ್ಷದ ನಾಯಕರುಗಳನ್ನು ಕರೆದು ಲೋಕಾಯುಕ್ತರಿಗೆ ಏನು ಅಧಿಕಾರ ಕೊಡಬೇಕು. ಈ ರಾಜ್ಯದಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕೆನ್ನುವ ಬಗ್ಗೆ ಅದು ಗಣಿ ಇರಬಹುದು, ಇನ್ನಿತರೆ ಯಾವುದೇ ವಿಷಯಗಳಾಗಿರಬಹುದು. ಅದಕ್ಕೆ ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಸಭೆಯನ್ನು ಕರೆದು ವಿರೋಧಪಕ್ಷದ ನಾಯಕರುಗಳ ಅಭಿಪ್ರಾಯವನ್ನು ಕೇಳಿರುವಂಥದ್ದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. 1984 ರಲ್ಲಿ ಅಂದು ಜನತಾ ಸರ್ಕಾರ ಇದ್ದಾಗ ಮಾನ್ಯ ರಾಮಕೃಷ್ಣ ಹೆಗ್ಡೆಯವರು ಇದ್ದಂಥ ಕಾಲದಲ್ಲಿ ಲೋಕಾಯುಕ್ತರಿಗೆ ಪೂರ್ಣ ಅಧಿಕಾರವನ್ನು ಕೊಟ್ಟು ಅಂದಿನ ಮುಖ್ಯಮಂತ್ರಿಯವರಿಂದ ಹಿಡಿದು, ಮಂತ್ರಿಗಳು ಮತ್ತು ಶಾಸಕರು ಮತ್ತು ಸರ್ಕಾರದ ಎಲ್ಲಾ ಹಿರಿಯ ಅಧಿಕಾರಿಗಳು ಒಳಪಟ್ಟಂತೆ ಒಂದು ಕಾಯಿದೆಯನ್ನು ತಂದು ಅವರಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದರು. ಅದು ಆದ ಮೇಲೆ 1986ರಲ್ಲಿ ಆ ಅಧಿಕಾರವನ್ನು ವಾಪಸ್ಸು ಪಡೆದಿರುವಂಥ ವಿಚಾರ ತಮಗೆಲ್ಲಾ ಗೊತ್ತಿರುವಂಥ ವಿಚಾರವಾಗಿದೆ.

ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬಯಸುವುದೇನೆಂದರೆ, 1986ರಲ್ಲಿ ಯಾವ ಉದ್ದೇಶಕ್ಕಾಗಿ ಹಿಂದಕ್ಕೆ ತೆಗೆದುಕೊಂಡರು, ಅದಕ್ಕೆ ಕಾರಣ ಏನು? ಕಳೆದ ಹತ್ತಾರು ವರ್ಷಗಳಲ್ಲಿ ಯಾರ್‍ಯಾರು ಇದ್ದರು? ಎನ್ನುವ ಬಗ್ಗೆ ಅವರು ಉತ್ತರ ಕೊಡುವ ಸಂದರ್ಭದಲ್ಲಿ ಸದನದ ಗಮನಕ್ಕೆ ತರಬೇಕಾಗುತ್ತದೆ. 1984ರಲ್ಲಿ ಕೊಟ್ಟಂಥ ಅಧಿಕಾರ ಏನು, ಆ ವ್ಯಾಪ್ತಿಯಲ್ಲಿ ಯಾರ್‍ಯಾರು ಇದ್ದರು? 1986 ರಲ್ಲಿ ಯಾವ ಕಾರಣದಿಂದ ಅದನ್ನು ವಾಪಸ್ಸು ತೆಗೆದುಕೊಂಡರು. ಅದರಲ್ಲಿ ಯಾರ್‍ಯಾರನ್ನು ಕೈಬಿಟ್ಟರು, ಮತ್ತೆ ಹಿಂದಿನ ಮುಖ್ಯಮಂತಿಗಳು ಯಾರ್‍ಯಾರು ಇದ್ದರು, ಅವರ ಅಧಿಕಾರದ ಅವಧಿಯಲ್ಲಿ ಅದು ಸನ್ಮಾನ್ಯ ದೇವೇಗೌಡರು ಇರಬಹುದು, ಮಾನ್ಯ ಜೆ. ಹೆಚ್. ಪಟೇಲ್‌ರವರು ಇರಬಹುದು, ಮಾನ್ಯ ಬಂಗಾರಪ್ಪನವರು ಇರಬಹುದು, ಮಾನ್ಯ ಎಸ್.ಎಂ. ಕೃಷ್ಣರವರು ಇರಬಹುದು, ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮತ್ತು ಮಾನ್ಯ ಯಡಿಯೂರಪ್ಪನವರ ನೇತೃತ್ವದಲ್ಲಿ 20 ತಿಂಗಳುಗಳ ಆಡಳಿತವಿದ್ದಾಗ ಏನು ನಿರ್ಣಯವಾಯಿತು, ಇದೆಲ್ಲಾ ವಿಚಾರಗಳ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಉತ್ತರ ಕೊಡಬೇಕೆಂದು ನಾನು ಬಯಸುತ್ತೇನೆ. ಇವತ್ತು ಎರಡೂ ಸದನದ ಎಲ್ಲಾ ಪಕ್ಷದ ನಾಯಕರುಗಳು ಲೋಕಾಯುಕ್ತರ ಪ್ರಾಮಾಣಿಕತನಕ್ಕೆ ಅದು ಕಾಂಗ್ರೆಸ್ ಪಕ್ಷವಿರಬಹುದು, ಜೆ.ಡಿ.ಎಸ್. ಇರಬಹುದು, ಅದರಲ್ಲೂ ಬಿ.ಜೆ.ಪಿ. ಪಕ್ಷದ ರಾಷ್ಟ್ರೀಯ ನಾಯಕರಾದಂಥ ಮಾನ್ಯ ಗಡ್ಕರಿಯವರು ಮತ್ತು ಮುಖ್ಯಮಂತ್ರಿಯವರು ಲೋಕಾಯುಕ್ತರ ಮನೆಗೆ ಹೋಗಿ ರಾಜೀನಾಮೆಯನ್ನು ವಾಪಸ್ಸು ಪಡೆಯುವಂತೆ ಮನವಿ ಮಾಡಿದ್ದು, ಮತ್ತೆ ನಮ್ಮ ರಾಷ್ಟ್ರದ ಮಾಜಿ ಗೃಹ ಸಚಿವರು ಆಗಿರುವಂಥ ಮಾನ್ಯ ಅಡ್ವಾಣಿಯವರಿಂದ ಸಂದೇಶ ಬಂತು ಎನ್ನುವ ವಿಷಯವನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಇವತ್ತು ರಾಜ್ಯ ಸರ್ಕಾರ ಒಂದು ಒಳ್ಳೆಯ ನಿರ್ಣಯವನ್ನು ಮಾಡಿದೆ. ಲೋಕಾಯುಕ್ತರಿಗೆ ಅಧಿಕಾರವನ್ನು ಕೊಡುವ ಬಗ್ಗೆ ಏನು ಮಾಡಬೇಕೆಂಬ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಸವಿಸ್ತಾರವಾಗಿ ಮಾತನಾಡಿ ಸಭಾನಾಯಕರ ಗಮನಕ್ಕೆ ತಂದಿದ್ದಾರೆ. ವಿಧಾನ ಪರಿಷತ್ತಿನಲ್ಲಿ ವಿರೋಧಪಕ್ಷದ ನಾಯಕಿಯಾಗಿರುವ ಶ್ರೀಮತಿ ಮೋಟಮ್ಮನವರು ಮಾನ್ಯ ನಾಣಯ್ಯನವರು, ನಾನು ಸಹ ಹೇಳಿದ್ದೇನೆ. ಈ ರಾಜ್ಯದ ಮುಖ್ಯಸ್ಥರಾದ ಈ ಮನೆಯ ಸಭಾನಾಯಕರಾಗಿರುವ ಮುಖ್ಯಮಂತ್ರಿಯವರಿಂದ ಪ್ರಾರಂಭವಾಗಿ, ಅದು ವಿರೋಧಪಕ್ಷದ ನಾಯಕರಿರಬಹುದು, ವಿರೋಧಪಕ್ಷದ ಸದಸ್ಯರು ಇರಬಹುದು, ಮಂತ್ರಿಗಳು ಇರಬಹುದು. ಮಾನ್ಯ ಕುಮಾರಸ್ವಾಮಿಯವರ ಅಧಿಕಾರದ ಅವಧಿಯಲ್ಲಿ ಸರ್ಕಾರಿ ಅಧಿಕಾರಿಗಳು ಲೋಕಾಯುಕ್ತರ ವ್ಯಾಪ್ತಿಯಲ್ಲಿ ಬರಬೇಕೆಂದು ನಿರ್ಣಯವಾಗಿ, ಅದು ಎರಡು ವರ್ಷ cold storege ನಲ್ಲಿ ಬಿದ್ದಿತ್ತು. ಅದಕ್ಕೆ ಈಗ ಚಾಲನೆ ಸಿಗುವಂಥ ಸಂದರ್ಭ ಬಂದಿದೆ. ನಾವು ರಾಜಕಾರಣಿಗಳು

ಪ್ರಾಮಾಣಿಕವಾಗಿ ಇದ್ದಾಗ, ಈ ರಾಜ್ಯದಲ್ಲಿ ಸರ್ಕಾರದ ಅಧಿಕಾರಿಗಳು ಪ್ರಾಮಾಣಿಕವಾಗಿ ಎದೆ ಗುಂದದೇ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಸಭಾನಾಯಕನಲ್ಲಿ ನಾನು ಮನವಿ ಮಾಡುವುದೇನೆಂದರೆ, ಅವರು ಈ ಸದನದಲ್ಲಿ ಉತ್ತರ ಕೊಡುವಂಥ ಸಂದರ್ಭದಲ್ಲಿ ಅವರು ಇವತ್ತು ಲೋಕಾಯುಕ್ತರ ಮನೆಗೆ ಹೋಗಿ ಅವರ ಮನವೊಲಿಸಿದ್ದಾರೆ. ಅವರು ರಾಜೀನಾಮೆ ಹಿಂದಕ್ಕೆ ಪಡೆಯುವಂತೆ ಲೋಕಾಯುಕ್ತರ ಮನವೊಲಿಸಿದ್ದಾರೆ, ರಾಜ್ಯಪಾಲರ ಮನವೊಲಿಸಿದ್ದಾರೆ, ಕೇಂದ್ರದ ಬಿ.ಜೆ.ಪಿ. ಯುವ ನಾಯಕರ ಮನವೊಲಿಸಿದ್ದಾರೆ. ಅದರ ಪ್ರತಿಫಲವಾಗಿ ಈ ರಾಜ್ಯದ ಜನತೆಗೆ, ಎರಡೂ ಸದನಕ್ಕೆ ಲೋಕಾಯುಕ್ತರಿಗೆ ಪೂರ್ಣ ಅಧಿಕಾರ ಕೊಡುವ ಬಗ್ಗೆ ತಮ್ಮಿಂದ ಪ್ರಾರಂಭ ಆಗಲಿ ಎಂಬ ದಿಟ್ಟ ನಿಲುವನ್ನು ಮಾನ್ಯ ಮುಖ್ಯಮಂತ್ರಿಯವರು ತೋರಿಸಿದರೆ, ಆಗ ಲೋಕಾಯುಕ್ತರು ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದಕ್ಕೂ ಸಾರ್ಥಕವಾಗುತ್ತದೆನ್ನುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತಿದ್ದೆ. ಇವತ್ತು ಲೋಕಾಯುಕ್ತ ಸಂತೋಷ್ ಹೆಗ್ಡೆಯವರು ಮತ್ತು ಅವರ ತಂದೆಯವರ ಬಗ್ಗೆ ಹೇಳುವುದಾದರೆ ಈ ರಾಜ್ಯ ಮತ್ತು ಈ ರಾಷ್ಟದಲ್ಲಿ ಪ್ರಾಮಾಣಿಕ ನ್ಯಾಯಾಧೀಶರು ಎಂದರೆ ಇವರು ಮೊದಲಿಗರು ಎಂದು ನಾವು ಪಕ್ಷ ಭೇದವನ್ನು ಮರೆತು ಇವತ್ತು ರಾಜ್ಯದ ಜನತೆ ಮತ್ತು ಎಲ್ಲಾ ಪಕ್ಷದ ಮುಖಂಡರು ಹೇಳಿದ್ದಾರೆ. ಅವರು ಲೋಕಾಯುಕ್ತ ಅಧಿಕಾರವನ್ನು ವಹಿಸಿಕೊಂಡ ಮೇಲೆ ಈ ರಾಜ್ಯದಲ್ಲಿ ಸುಮಾರು 206 ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ. ಅದರಲ್ಲಿ ಸುಮಾರು 320 ಕೋಟಿ ರೂಪಾಯಿಗಳನ್ನು ಯಾರು ಭ್ರಷ್ಟ ಅಧಿಕಾರಿಗಳು ಇದ್ದಾರೆ. ಅಂಥವರಿಂದ ವಸೂಲು ಮಾಡಿದ್ದಾರೆ.

ಇವತ್ತು ಭ್ರಷ್ಟಾಚಾರದಿಂದ ಅಧಿಕಾರಿಗಳು ಮುಕ್ತರಾಗುತ್ತಿದ್ದಾರೆ. ಆದರೆ ರಾಜಕಾರಣಿಗಳು ಯಾರ್‍ಯಾರು ಏನೇನು ಮಾಡಿದ್ದಾರೆ ಎನ್ನುವುದೂ ಈಚೆಗೆ ಬರಬೇಕಲ್ಲವೇ? 1984ರಲ್ಲಿ ಲೋಕಾಯುಕ್ತ ಕಾಯಿದೆ ಬಂದ ಮೇಲೆ ಯಾರಾದರೂ ಒಬ್ಬ ರಾಜಕಾರಣ ಲೋಕಾಯುಕ್ತರ ಮುಂದೆ ತನಿಖೆಗೆ ಒಳಪಟ್ಟಿದ್ದಾರೆ ಎಂದರೆ ಅವರು ದೇವೇಗೌಡರು. ಅವರನ್ನು ಬಿಟ್ಟರೆ ಬೇರೆ ಯಾರೂ ಲೋಕಾಯುಕ್ತರಿಂದ ತನಿಖೆಗೆ ಒಳಪಟ್ಟಿಲ್ಲ. ದೇವೇಗೌಡರು 1984ರಲ್ಲಿ ಲೋಕಾಯುಕ್ತರ ಮುಂದೆ ಹೋಗಿ ಅವರು ಏನೇನು ತನಿಖೆ ಮಾಡಿದರು, ಅದಕ್ಕೆಲ್ಲಾ ಉತ್ತರ ಕೊಟ್ಟರು. ಅದಾದ ಮೇಲೆ ಇವತ್ತಿನವರೆಗೆ ಯಾವ ರಾಜಕಾರಣಿಯ ಮೇಲೂ ಚಕಾರ ಎತ್ತುವ ಪರಿಸ್ಥಿತಿ ಇಲ್ಲ. ಈ ಸದನದಲ್ಲಿ ಎಲ್ಲ ಪಕ್ಷದವರೂ, ಅದು ಕಾಂಗ್ರೆಸ್ ಇರಬಹುದು, ಜೆ.ಡಿ.(ಎಸ್) ಇರಬಹುದು, ಎಲ್ಲ ಮುಖಂಡರೂ ಲೋಕಾಯುಕ್ತರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಲೋಕಾಯುಕ್ತರು ಬರೀ ಅಧಿಕಾರಿಗಳನ್ನು ಮಟ್ಟ ಹಾಕುವುದಲ್ಲ, ರಾಜಕಾರಣಿಗಳು ಯಾರೇ ಇರಬಹುದು, ಅವರು ತಪ್ಪು ಮಾಡಿದರೆ

ಅವರನ್ನೂ ಮಟ್ಟ ಹಾಕಬೇಕಾಗುತ್ತದೆ. ಅಂಥ ಒಂದು ಅಧಿಕಾರವನ್ನು ಲೋಕಾಯುಕ್ತರಿಗೆ ಸರ್ವಾನುಮತದಿಂದ ಈ ಸದನ ಕೊಡಬೇಕು ಎಂದು ನಾನು ಮಾನ್ಯ ಸಭಾ ನಾಯಕರನ್ನು ಮನವಿ ಮಾಡುತ್ತಿದ್ದೇನೆ. ಅವರು ಕೇವಲ ಎರಡೂವರೆ ವರ್ಷಗಳ ಅವಧಿಯಲ್ಲಿ 206 ಪ್ರಕರಣಗಳನ್ನು ಪತ್ತೆ ಹಚ್ಚಿ, ಅದರಲ್ಲಿ 320 ಕೋಟಿ ರೂಪಾಯಿಗಳನ್ನು ಜಪ್ತಿ ಮಾಡಿದ್ದಾರೆ ಎಂದರೆ ಯಾವ ರೀತಿ ಸರ್ಕಾರದ ಹಣ ಹೋಗುತ್ತಿದೆ ಎಂದು ತಿಳಿಯಬಹುದು. ಲೋಕಾಯುಕ್ತರ ಬಗ್ಗೆ ಎಲ್ಲರಿಗೂ ಅಪಾರವಾದಂಥ ಗೌರವವಿದೆ. ಗಣಿ ವಿಷಯವನ್ನು ಹೇಳಬೇಕಾದರೆ, ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಟೀಕೆ ಟಿಪ್ಪಣಿ ಮಾಡುವ ಅವಶ್ಯಕತೆ ಇಲ್ಲ. 2000 ಇಸವಿಯಿಂದ ಯಾರಯಾರ ಕಾಲದಲ್ಲಿ ಏನಾಗಿದೆ ಎಂದು ನಾಲ್ಕು ದಿನ ಈ ಸದನದಲ್ಲಿ ಚರ್ಚೆ ಮಾಡೋಣ ಎನ್ನುವ ಮಾತನ್ನು ಮಾನ್ಯ ಸಭಾನಾಯಕರು ಹೇಳಿದರು. ಅದು ಕುಮಾರಸ್ವಾಮಿಯವರ ಕಾಲ ಇರಬಹುದು, ಧರಂಸಿಂಗ್ ರವರ ಕಾಲ ಇರಬಹುದು, ಯಾರ ಕಾಲದಲ್ಲಿ ನಡೆದಿದೆ ಎಂದು ಹೇಳಿ, ತನಿಖೆ ಮಾಡಲಿ. ಅದಕ್ಕೆ ಈ ಸರ್ಕಾರ ಏಕೆ ಹೆದರಬೇಕು? ಏಕೆಂದರೆ, ಸಭಾನಾಯಕರು ಈ ಯಾವುದೇ ಆಪಾದನೆಗೆ ಒಳಪಟ್ಟಿಲ್ಲ. ಇದು 2000ದಿಂದ ನಡೆದುಕೊಂಡು ಬಂದಿರುವಂಥ ಒಂದು ವ್ಯವಹಾರ. ಅದರಲ್ಲಿ ಯಾರ್ಯಾರು ಭಾಗಿಯಾಗಿದ್ದರು ಎಂದು ಈ ಸರ್ಕಾರವಾದರೂ ಪತ್ತೆ ಹಚ್ಚಲಿ ಎಂದು ನಾನು ಈ ರಾಜ್ಯದ ಜನತೆಯ ಪರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಮನವಿ ಮಾಡುತ್ತೇನೆ. ಯಾವಯಾವ ಸರ್ಕಾರದಲ್ಲಿ, ಎಷ್ಟೆಷ್ಟು ಅದಿರು ಹೊರದೇಶಕ್ಕೆ ರಫ್ತಾಗಿದೆ ಮತ್ತು ಎಷ್ಟು ಅದಿರು ಮಾರಾಟವಾಗಿದೆ, ಅದು ಕಬ್ಬಿಣದ ಕಾರ್ಖಾನೆಗಳಿಗೆ ಇರಬಹುದು, ಹೊರದೇಶಗಳಿಗೆ ಇರಬಹುದು ಎನ್ನುವುದು ಗೊತ್ತಾಗುತ್ತದೆ. ಹಿಂದೆ 2001 ರಲ್ಲಿ ಒಂದು ಕಾಲದಲ್ಲಿ ಅದಿರು ತೆಗೆದುಕೊಳ್ಳುವವರೇ ದಿಕ್ಕಿಲ್ಲ. ಎನ್ನುವ ಪರಿಸ್ಥಿತಿ ಇತ್ತು. ಚೈನಾ ದೇಶದಲ್ಲಿ ತಮ್ಮಲ್ಲಿಯೇ ಅದಿರು ಇದ್ದರೂ ಸಹ ಅವರು ಹೊರಗಡೆಯಿಂದ ಏಕೆ ಅದಿರನ್ನು ತೆಗೆದುಕೊಂಡರು ಎನ್ನುವುದನ್ನು ರಾಜ್ಯ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಚೈನಾ ದೇಶದಲ್ಲಿ ಸಾಕಷ್ಟು ಅದಿರು ಇದ್ದರೂ ಅವರು ಹೊರಗಡೆಯಿಂದ ಅದಿರನ್ನು ತೆಗೆದುಕೊಂಡು ಆ ರಾಷ್ಟ್ರದ ಅದಿರನ್ನು ಯಾವ ರೀತಿ ರಕ್ಷಣೆ ಮಾಡಿದ್ದಾರೆ ಎನ್ನುವ ಬಗ್ಗೆ ಕೇಂದ್ರ ಸರ್ಕಾರವೂ ಚಿಂತನೆ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರವೂ ಚಿಂತನೆ ಮಾಡಬೇಕಾಗುತ್ತದೆ. ಯಾವಯಾವ ವರ್ಷ, ಯಾವಯಾವ ಗುತ್ತಿಗೆದಾರನ ಕಡೆಯಿಂದ ಎಷ್ಟೆಷ್ಟು ಅದಿರು ಹೊರದೇಶಕ್ಕೆ ಹೋಗಿದೆ ಎನ್ನುವುದನ್ನು ರಾಜ್ಯ ಸರ್ಕಾರ ಪತ್ತೆ ಹಚ್ಚಲು ಆಗುವುದಿಲ್ಲ. ಕೇಂದ್ರ ಸರ್ಕಾರವೇ ಅದನ್ನು ಮಾಡಬೇಕು. ಅದಿರಿಗೆ ಚೈನಾ ದೇಶದಲ್ಲಿ ಎಷ್ಟು ರೇಟ್ ಇದೆ, ಮಲೇಷಿಯಾ ದೇಶದಲ್ಲಿ ಎಷ್ಟು ರೇಟ್ ಇದೆ, ಇಂಡೋನೇಷಿಯಾ ದೇಶದಲ್ಲಿ

ಎಷ್ಟು ರೇಟ್ ಇದೆ ಎನ್ನುವುದನ್ನು ನೋಡಿಕೊಂಡು ಕೆಲವರು ಮಲೇಷಿಯಾ, ಇಂಡೋನೇಷಿಯಾಗಳಿಗೆ ಕಳುಹಿಸಿ ನಂತರ ಅದೇ ಕಂಪನಿಯವರು ಚೈನಾಗೆ ಕಳುಹಿಸಿ, ಅದರಿಂದ ಕೇಂದ್ರ ಸರ್ಕಾರಕ್ಕೆ ಬರುವಂಥ ತೆರಿಗೆಗೂ ಧಕ್ಕೆಯಾಗಿದೆ. ಹೀಗಾಗಿ ಹಲವಾರು ವಿಷಯಗಳಲ್ಲಿ violation ಆಗಿದೆ ಎನ್ನುವುದು ತಿಳಿದು ಬಂದಿದೆ. ಲೋಕಾಯುಕ್ತರು ವರದಿ ಕೊಟ್ಟು ಎರಡು ವರ್ಷವಾಯಿತು. ಎರಡು ವರ್ಷವಾದರೂ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಇದರ ಮೇಲೆ ಕ್ರಮ ತೆಗೆದುಕೊಳ್ಳಲು ಸರ್ಕಾರ ಏಕೆ ಹೆದರಬೇಕು? ಲೋಕಾಯುಕ್ತರು 2001 ರಿಂದ ತನಿಖೆ ಮಾಡಿ ಮೊದಲನೇ ವರದಿಯನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಅದು 2007 ರವರೆಗೆ ಮಾಡಿದ್ದಾರೋ, 2010ರವರೆಗೆ ತನಿಖೆ ಮಾಡಿದ್ದಾರೋ ಗೊತ್ತಿಲ್ಲ. ಎರಡನೇ ವರದಿಯನ್ನು ಆಗಸ್ಟ್ 31ರೊಳಗೆ, ನಾನು ರಾಜೀನಾಮೆ ಕೊಡುವುದರೊಳಗೆ ಕೊಡುತ್ತೇನೆ ಎಂದು ಅವರು ಹೇಳಿದ್ದರು. ಈಗ ಅವರು ಅದಕ್ಕೆ ಬದ್ಧರಾಗಿರುತ್ತಾರೋ, ಇಲ್ಲವೋ ಗೊತ್ತಿಲ್ಲ. ಏಕೆಂದರೆ, ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಹಿರಿಯ ಮುಖಂಡರು, ಬಿ.ಜೆ.ಪಿಯ ರಾಷ್ಟ್ರೀಯ ಅಧ್ಯಕ್ಷರು ಮತ್ತು ಬಿ.ಜೆ.ಪಿಯ ಹಿರಿಯ ನಾಯಕರಾದಂಥ ಅಡ್ವಾಣಿಯವರೆಲ್ಲ ಅವರ ಮನವೊಲಿಸಿರುವಾಗ, ಅವರು soft corner ತೋರಿಸಿ, ಇದು ಇನ್ನೊಂದು ಸ್ವಲ್ಪ ದಿವಸ ಜೀವಂತವಿರಲಿ ಎಂದು ಇದನ್ನು ಮುಂದಕ್ಕೆ ಹಾಕುತ್ತಾರೋ ಅಥವಾ ಆಗಸ್ಟ್ 31ನೇ ತಾರೀಖಿನೊಳಗೆ ಎರಡನೇ ವರದಿಯನ್ನು ಕೊಡುತ್ತೇನೆ, ನಾನು ಯಾವುದೇ ಪಕ್ಷಕ್ಕೆ ಸೇರಿದವನಲ್ಲ, ನಾನು ಯಾವುದಾದರೂ ಪಕ್ಷವನ್ನು ವಹಿಸಿಕೊಂಡು ಹೋದರೆ ನನಗೆ ಕಲ್ಲು ತೂರಿ ಎನ್ನುವುದನ್ನು ಲೋಕಾಯುಕ್ತರು ಈ ರಾಜ್ಯದ ಜನತೆಗೆ electronic media ಮುಖಾಂತರ ಮತ್ತು ಸುದ್ದಿ ಮಾಧ್ಯಮದ ಮುಖಾಂತರ ಏನು ಹೇಳಿದ್ದಾರೆ ಅದಕ್ಕೆ ಬದ್ಧರಾಗಿರುತ್ತಾರೋ ಗೊತ್ತಿಲ್ಲ. ಅವರು ಆಗಸ್ಟ್ 31ರೊಳಗೆ ಎರಡನೇ ವರದಿಯನ್ನು ಬಿಡುಗಡೆ ಮಾಡಬೇಕೆಂದು ನಾನು ಈ ಸದನದ ಮುಖೇನ ಲೋಕಾಯುಕ್ತರನ್ನು ಮನವಿ ಮಾಡುತ್ತೇನೆ. ಈ ಬಗ್ಗೆ ಸದನದ ಎಲ್ಲ ಪಕ್ಷದವರೂ ಒಕ್ಕೊರಲಿನಿಂದ ಒತ್ತಾಯಿಸಬೇಕು. ಅದು ಯಾರ ಕಾಲದ್ದಾದರೂ ಆಗಿರಲಿ. ಕುಮಾರಸ್ವಾಮಿಯವರು ತಪ್ಪು ಮಾಡಿದ್ದರೆ. ಅವರನ್ನೂ ಒಳಕ್ಕೆ ಹಾಕಲಿ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆಗಸ್ಟ್ 31ರೊಳಗೆ ಎರಡನೇ ವರದಿಯನ್ನು ಕೊಡುತ್ತೇನೆ. ಎಂದು ರಾಜ್ಯದ ಜನತೆಗೆ ಕೊಟ್ಟಂಥ ವಚನದಿಂದ ಲೋಕಾಯುಕ್ತರು ಹಿಂದೆ ಸರಿಯಬಾರದು ಎಂದು ನಾನು ಅವರಿಗೆ ಈ ಸದನದ ಮುಖೇನ ಮನವಿ ಮಾಡುತ್ತಿದ್ದೇನೆ. ಅವರು ರಾಜೀನಾಮೆ ಕೊಡುವಂಥ ಸಂದರ್ಭದಲ್ಲಿ ರಾಜ್ಯದ ಪ್ರಮುಖ ದಿನಪತ್ರಿಕೆಯಾದ "ಪ್ರಜಾವಾಣಿ"ಯಲ್ಲಿ ಒಂದು ಹೇಳಿಕೆಯನ್ನು ಮನನೊಂದು ಕೊಡುತ್ತಾರೆ. ಅವರು ಏನು

ಹೇಳಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. "ಸರ್ಕಾರದ ಅಸಹಕಾರಕ್ಕೆ ಆಕ್ರೋಶ, ಆಗಸ್ಟ್ 31ರಿಂದ ರಾಜೀನಾಮೆ ಜಾರಿ, ಸಾಕಷ್ಟು ಮನನೊಂದಿದ್ದೇನೆ, ಕೆಲಸಕ್ಕೆ ನ್ಯಾಯ ಒದಗಿಸಲಾಗುತ್ತಿಲ್ಲ. ಪ್ರಾಮಾಣಿಕ ಅಧಿಕಾರಿಗಳಿಗೆ ಕಿರುಕುಳದ ಆರೋಪ, ರಾಜೀನಾಮೆ ಬೆದರಿಕೆಯಲ್ಲ" ಎಂದು ಹೇಳಿದ್ದಾರೆ. ಅಂದರೆ ನಾನು ರಾಜೀನಾಮೆ ಕೊಡುತ್ತಿರುವುದು ಬೆದರಿಕೆಯಲ್ಲ, ಸರ್ಕಾರದ ಅಧಿಕಾರಿಗಳಿಗೆ ಕಿರುಕುಳವಾಗುತ್ತಿದೆ, ಸರ್ಕಾರದ ಅಸಹಕಾರದಿಂದ ನಾನು ಮನನೊಂದು ರಾಜೀನಾಮೆ ಕೊಡುತ್ತಿದ್ದೇನೆ ಎಂದು ಹೇಳಿದ್ದು, "ಪ್ರಜಾವಾಣಿ" ಪತ್ರಿಕೆಯಲ್ಲಿ ಲೋಕಾಯುಕ್ತರ ನಿರ್ಗಮನ ಎಂದು ಬಂದಿದೆ. ಮತ್ತೆ, ಅದೇ ಪತ್ರಿಕೆಯಲ್ಲಿ "ಅದಿರು ಮಾಫಿಯಾ: ಮಾಯ-ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರಿ ಮತ್ತು ಕಾರವಾರ ಬಂದರುಗಳ ಮೂಲಕ ನಡೆಯುತ್ತಿದ್ದ ಅಕ್ರಮ ಅದಿರು ಸಾಗಣೆ ವಿರುದ್ಧ ತನಿಖೆಯಲ್ಲಿ ನಿರತರಾಗಿದ್ದ ಕಾರವಾರದ ಉಪ ಅರಣ್ಯ ಸಂರಕ್ಷಣಾಧಿಕಾರಿ ಗೋಕುಲ್ ಅವರನ್ನು ಕ್ಷುಲ್ಲಕ ಕಾರಣಕ್ಕಾಗಿ ಅಮಾನತ್ತು ಮಾಡಲು ಸರ್ಕಾರ ಸಿದ್ಧತೆ ನಡೆಸಿರುವ ಕಾರಣ, ಎರಡನೆಯದಾಗಿ, ತಾವು ಕರೆದ ಸಭೆಗೆ ಹಾಜರಾಗಿಲ್ಲ ಎಂಬ ಕಾರಣ ಆಧರಿಸಿ ಈ ಅಧಿಕಾರಿಯನ್ನು ಅಮಾನತ್ತು ಮಾಡುವಂತೆ ಸಚಿವ ಜೆ. ಕೃಷ್ಣಪಾಲೇಮಾರ್ ರವರು ಇತ್ತೀಚೆಗೆ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದರು. ಅದನ್ನು ಆಧಾರವಾಗಿಟ್ಟುಕೊಂಡು, ಗೋಕುಲ್ ಅವರನ್ನು ಅಮಾನತ್ತು ಮಾಡಲು ಸರ್ಕಾರ ನಿರ್ಧರಿಸಿತ್ತು. ಇದರಿಂದ ಕೆಂಡಾಮಂಡಲವಾದ ಲೋಕಾಯುಕ್ತರು ರಾಜೀನಾಮೆ ಮೂಲಕ ಸರ್ಕಾರವನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿದ್ದಾರೆ." ಇದು ಒಂದು ಕಡೆಯಾದರೆ, ಎರಡನೇ ಪ್ಯಾರಾದಲ್ಲಿ, ಇಡೀ ಪ್ರಕರಣವನ್ನು ಗಂಭೀರವಾಗಿ ಸ್ವೀಕರಿಸಿದ ಗೋಕುಲ್ ಅವರು ಹೈಕೋರ್ಟ್‌ನಲ್ಲಿ ಸಮರ್ಥವಾದ ಮಂಡನೆಗೆ ಕಾರಣವಾಗಿದ್ದರೂ, ಇವರಿಂದ ವಶಪಡಿಸಿಕೊಂಡ ಅದಿರನ್ನು ವಾಪಸ್ಸು ಪಡೆಯುವ ಪ್ರಯತ್ನದಲ್ಲಿ ಕಂಪನಿಗಳಿಗೆ ಜಯ ದೊರೆಯಲಿಲ್ಲ." ಅಂದರೆ ಸುಮಾರು 250 ಕೋಟಿ ರೂಪಾಯಿಗಳನ್ನೊಳಗೊಂಡಿದ್ದ ಅದಿರು ಕಂಪನಿಯವರು ಹೈಕೋರ್ಟಿಗೆ ಹೋದರು. ಹೈಕೋರ್ಟಿನಲ್ಲಿ ಗೋಕುಲ್‌ರವರಿಗೆ ಜಯ ಸಿಕ್ಕಿದೆ ಎನ್ನುವುದನ್ನೂ ಹೇಳಿದ್ದಾರೆ. ಮತ್ತು ಅದಿರು ಕಳ್ಳತನ ನಡೆದಿರುವ ಬಗ್ಗೆ ಬಂದರು ಅಧಿಕಾರಿಗಳು ಮತ್ತು 11 ಕಂಪನಿಗಳ ವಿರುದ್ಧ D.C.F. ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿದ್ದರು. ಪ್ರಕರಣವನ್ನು ಬೆನ್ನು ಹತ್ತಿದ ಅಧಿಕಾರಿ ಸುಮಾರು 2,500 ಕೋಟಿ ರೂಪಾಯಿ ಅದಿರು ಕಳ್ಳಸಾಗಣೆ ನಡೆದಿರುವ ಬಗ್ಗೆ ದಾಖಲೆ ಸಂಗ್ರಹಿಸಿದ್ದಾರೆ ಎಂದು ಇದೆ. ಪತ್ರಿಕೆಯಲ್ಲಿ ಬಂದಿರುವ ಈ ವರದಿಯಲ್ಲಿ question mark ಇಲ್ಲ. question mark ಇದ್ದರೆ ಅನುಮಾನವಿರುತ್ತಿತ್ತು. ಹಾಗಾಗಿ, ದಾಖಲೆ ಸಮೇತ ಪತ್ರಿಕೆಯಲ್ಲಿ

ಬರೆದಿದ್ದಾರೆ ಎಂದು ನಾವು ಭಾವಿಸಬೇಕಾಗುತ್ತದೆ. ಅವರು ಸಭೆಗೆ ಗೈರುಹಾಜರಾದುದಕ್ಕಾಗಿ ಸಚಿವರು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು, ನಾನು ಕರೆದ ಸಭೆಗೆ ಅಧಿಕಾರಿ ಗೈರು ಹಾಜರಾದುದು ಭ್ರಷ್ಟಾಚಾರಕ್ಕಿಂತ ದೊಡ್ಡ ಅಪರಾಧ, ಅದರಿಂದ ಈಗ ಅವರನ್ನು ಸೇವೆಯಿಂದ ಅಮಾನತ್ತು ಮಾಡಿ ಎಂದು ಹೇಳುತ್ತಾರೆ. "ಬೇಲೆಕೇರಿ ಬಂದರಿನಲ್ಲಿ ಅಕ್ರಮವಾಗಿ ದಾಸ್ತಾನು ಇಟ್ಟಿದ್ದ ಸುಮಾರು 150 ಕೋಟಿ ರೂ.ಗಳ 5 ಲಕ್ಷ metric tonne ಕಬ್ಬಿಣದ ಅದಿರಿನ ಬಗ್ಗೆ ಅರಣ್ಯ ಸಂರಕ್ಷಣಾಧಿಕಾರಿ ದಿ:20.3.2010ರಲ್ಲಿ complaint ಕೊಟ್ಟರು. Case register ಆಯಿತು. ಇದಾದ ಮೇಲೆ 1963, 1969ರ ಅರಣ್ಯ ಕಾಯಿದೆ ಉಲ್ಲಂಘನೆ ಆಗಿರುವ ಬಗ್ಗೆ ಕೋರ್ಟ್ ಮಾಡುತ್ತಾರೆ. ಅದರ ಜೊತೆಗೆ ಲೋಕಾಯುಕ್ತರು ಒಬ್ಬ ಹಿರಿಗು ಅಧಿಕಾರಿಯನ್ನು ಕಳುಹಿಸಿಕೊಡುತ್ತಾರೆ. ಆ ಹಿರಿಯ ಅಧಿಕಾರಿ ಜನವರಿ ತಿಂಗಳ ಮೊದಲ ವಾರದಲ್ಲಿ ಅರಣ್ಯ ಇಲಾಖೆಯ ಒಬ್ಬ ಪ್ರಾಮಾಣಿಕ ಅಧಿಕಾರಿಯಾದ ಯು.ವಿ. ಸಿಂಗ್ ರವರು ಆ ಬಂದರಿಗೆ ಹೋಗಿ ಪರಿಶೀಲಿಸಿದಾಗ ಆಂಧ್ರಪ್ರದೇಶ ಮುಂತಾದ ಕಡೆಯಿಂದ ತಂದಂಥ ಸುಮಾರು ಮೂಟೆ ಗಟ್ಟಲೆ ಇದ್ದ duplicate permit ಅನ್ನು entire ದಾಖಲಾತಿಯೊಂದಿಗೆ seize ಮಾಡಿ ಲೋಕಾಯುಕ್ತ ಕಛೇರಿಗೆ ತಂದು ಹಾಕಿದರು. ಇವತ್ತು ಸಭಾನಾಯಕರು ಗಣಿ, ಅರಣ್ಯ, ಹಣಕಾಸು, Commercial Tax ಇಲಾಖಾ ಹೊಣೆಯೂ ಸೇರಿದಂತೆ ಮೂರು ಖಾತೆಗಳು ಅವರ ಬಳಿಯೇ ಇದೆ. 2500 ಕೋಟಿ ರೂ. ಗಳಲ್ಲ ರಾಜ್ಯದ 50 ಲಕ್ಷ ಕೋಟಿ ರೂಪಾಯಿ, 50 ಸಾವಿರ ಕೋಟಿ ರೂಪಾಯಿಗಳಷ್ಟು ಹೋಗಿದ್ದರೂ ಆಶ್ಚರ್ಯ ಪಡಬೇಕಾಗಿಲ್ಲ. 50 ರಿಂದ 1 ಲಕ್ಷ ಕೋಟಿ ರೂ. ಎಂದು ಕೆಲವು ಪ್ರಾಮಾಣಿಕ ಅಧಿಕಾರಿಗಳು ಹೇಳುತ್ತಾರೆ. ಇದನ್ನು ನಾನು ಹೇಳುತ್ತಿಲ್ಲ. ಅಧಿಕಾರಿಗಳು ಹೇಳಿರುವುದು. 2500 ಕೋಟಿ ರೂ. ಎಂದು ನಾನು ಹೇಳಿದ್ದೇನೆಯೇ? 250 ಕೋಟಿ ರೂಪಾಯಿಗಳೆಂದು court ಮುಂದೆ ನಾನು affidavit ಹಾಕಿದ್ದೇನೆಯೇ? ಮೊನ್ನೆ High court ಮುಂದೆ ರಾಜ್ಯ ಸರ್ಕಾರದ ಅಧಿಕಾರಿಗಳು 250 ಕೋಟಿ ರೂ. ಗಳ ಕಬ್ಬಿಣದ ಅದಿರು ಕಳವು ಆಗಿದೆ ಎಂದು ಹೇಳಿದ್ದಾರೆ. High Court ಮುಂದೆ ಹಾಕಿರುವ affidavit copy ವಾಪಸ್ಸು ತೆಗೆದುಕೊಳ್ಳುವುದು ಇವೆಲ್ಲ ನಾನು ಹೇಳುತ್ತಿಲ್ಲ. ನಾನು ಸಭಾನಾಯಕರ ಗಮನಕ್ಕೆ ತರುವುದೇನೆಂದರೆ, ಅವರ ಸಚಿವ ಸಂಪುಟದ ಸಹೋದ್ಯೋಗಿಯೇ ದಿನಾಂಕ: 10-6-2010ರಂದು ಈ ಟಿಪ್ಪಣಿಯನ್ನು ಬರೆದಿದ್ದು ಅದನ್ನು ಓದುತ್ತೇನೆ. "ದಿನಾಂಕ 8.6.2010ರ ಪ್ರಜಾವಾಣಿ ಪತ್ರಿಕೆಯಲ್ಲಿ ಬೇಲೆಕೇರಿ ಬಂದರಿನಲ್ಲಿ ಅರಣ್ಯ ಇಲಾಖೆ ವಶಪಡಿಸಿಕೊಂಡಿದ್ದ ಕಬ್ಬಿಣದ ಅದಿರು ಕಳುವಾಗಿರುವ ಪ್ರಕರಣವಾಗಿರುತ್ತದೆ. ದಿನಾಂಕ: 8.6.2010ರಂದು

ಕಾರವಾರ ಪ್ರವಾಸದಲ್ಲಿದ್ದಾಗ ಅರಣ್ಯ ಅಧಿಕಾರಿಗಳು ವಶಪಡಿಸಿಕೊಂಡಿದ್ದ 200 ಕೋಟಿ ರೂ.ಗಳ ಮೌಲ್ಯದ 6 ಲಕ್ಷ metric tonne ಕಬ್ಬಿಣದ ಅದಿರು ನಾಪತ್ತೆಯಾಗಿರುವ ಗಂಭೀರ ಪ್ರಕರಣಕ್ಕೆ ಸಂಬಂಧಿಸಿದಂತೆ ಚರ್ಚಿಸಿ ಮಾಹಿತಿ ಪಡೆಯಲು ಉಪ ಅರಣ್ಯ ಸಂರಕ್ಷಣಾಧಿಕಾರಿಯಾದ ಗೋಕುಲ್‌ರವರನ್ನು ಕರೆದಾಗ, ಸದರಿ ಅಧಿಕಾರಿ ಚರ್ಚೆಗೆ ಬಾರದೆ ಉದಾಸೀನ ವ್ಯಕ್ತಪಡಿಸಿ ಕರ್ತವ್ಯಚ್ಯುತಿ ಎಸಗಿದ್ದಾರೆ. ಇದರಿಂದ ಮೇಲ್ಕಂಡ ಪ್ರಕರಣದಲ್ಲಿ ಇವರು ಸಹ ಭಾಗಿಯಾಗಿರಬಹುದೆಂಬ ಸಂಶಯ ವ್ಯಕ್ತವಾಗುತ್ತಿದೆ. ಆದ್ದರಿಂದ, ಸದರಿ ಅಧಿಕಾರಿಯನ್ನು ಕೂಡಲೇ ವಿಚಾರಣೆ ಬಾಕಿ ಇಟ್ಟು ಅಮಾನತ್ತಿನಲ್ಲಿಡಲು ಕೋರಿದೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ವಿವರವಾದ ವರದಿಯನ್ನು ಕೊಡುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಮಾನ್ಯ ಸಭಾನಾಯಕರ ಸಚಿವ ಸಂಪುಟದಲ್ಲಿದ್ದ ಒಬ್ಬ ಮಂತ್ರಿಯವರು ಪತ್ರ ಬರೆಯುತ್ತಾರೆ." ಅವರ ಸಚಿವ ಸಂಪುಟದ ಸಹೋದ್ಯೋಗಿಯೊಬ್ಬರು ಸಭೆಯನ್ನು ಎಲ್ಲಿ ಕರೆದರು ? ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ಕರೆದರೇ? ಅಥವಾ Forest office ನಲ್ಲಿ ಏನಾದರೂ ಸಭೆ ಕರೆದರೇ? ಇಲ್ಲ. ಅವರು ಹೋಟೆಲ್‌ನಲ್ಲಿ ಸಭೆಯನ್ನು ಕರೆಯುತ್ತಾರೆ. ಆ ಸಭೆಗೆ 250 ಕೋಟಿ ರೂಪಾಯಿಗಳ ಅದಿರು ಕಳ್ಳತನ ಮಾಡಿದ್ದಾರೆನ್ನುವ ಅವರ ಹೆಸರಿನಲ್ಲಿದೆ, ಅಂಥವರನ್ನು ಕೂರಿಸಿಕೊಂಡು ಆ ಮಂತ್ರಿಯವರು ಸಭೆ ಕರೆದರು. ಆ ಸಭೆಗೆ ಆ ಅಧಿಕಾರಿ ಹೋಗುವುದಕ್ಕಾಗುತ್ತದೆಯೇ? ಕಳ್ಳರನ್ನೇ ಕೂರಿಸಿಕೊಂಡು 200 ಕೋಟಿ ರೂ. ಎಂದು ಅವರ ಸಚಿವ ಸಂಪುಟದ ಸಹೋದ್ಯೋಗಿಯೇ ಮುಖ್ಯಮಂತ್ರಿಯವರು ನಿರ್ವಹಿಸುವ ಖಾತೆಯ ಮೇಲೆ ಮುಖ್ಯ ಕಾರ್ಯದರ್ಶಿಯವರಿಗೆ ಬರೆಯುತ್ತಾರೆ. ಮುಖ್ಯ ಕಾರ್ಯದರ್ಶಿಯವರು ಆ ಬಗ್ಗೆ ಏನು ವರದಿ ಕೊಟಿದ್ದಾರೆ? ಅಧಿಕಾರಿಯನ್ನೇನಾದರೂ ಅಮಾನತ್ತು ಮಾಡಿದ್ದಾರೆಯೇ? ಅದರ ಮೇಲೆ ಮುಖ್ಯ ಕಾರ್ಯದರ್ಶಿಯವರು ಏನು ವರದಿ ಕೊಟ್ಟರು? ಸಭಾನಾಯಕರು ಉತ್ತರ ಕೊಡುವ ಸಂದರ್ಭದಲ್ಲಿ ಈ ಬಗ್ಗೆ ತಿಳಿಸಬೇಕು. ಒಂದು ಕಡೆ ಅವರ ಸಚಿವ ಸಂಪುಟದ ಮಂತ್ರಿಯವರು 200 ಕೋಟಿ ರೂಪಾಯಿಗಳು ಇದರಲ್ಲಿ ಭಾಗಿಯಾಗಿದ್ದಾರೆನ್ನುತ್ತಾರೆ. ಮೊನ್ನೆ ಮುಖ್ಯಮಂತ್ರಿಯವರು ಆ ಸದನದಲ್ಲಿ ಉತ್ತರ ಕೊಡುವ ಸಂದರ್ಭದಲ್ಲಿ ಆ ಅಧಿಕಾರಿಗೆ ಒಂದು ಪ್ರಶಸ್ತಿ ಕೊಡುತ್ತೇವೆ ಎನ್ನುತ್ತಾರೆ. ಒಂದು ಕಡೆ ಅವರ ಸಚಿವ ಸಂಪುಟದ ಸಹೋದ್ಯೋಗಿಗಳೇ ಕಳ್ಳರು ಎನ್ನುತ್ತಾರೆ. 200 ಕೋಟಿ ರೂಪಾಯಿಗಳ ಅದಿರು ಹೋಗಿದೆ ಎಂದು ಹೇಳುತ್ತಾರೆ. ಈಗ ನಾವು ಯಾರನ್ನು ನಂಬಬೇಕು ಹೇಳಿ. ಇಲ್ಲಿ 200 ಕೋಟಿ ರೂಪಾಯಿಗಳ ಅಕ್ರಮದಲ್ಲಿ ಆ DFO ಕೂಡ ಭಾಗಿಯಾಗಿದ್ದಾರೆಂದು ಹೇಳುತ್ತಾರೆ. ಇನ್ನೊಂದು ಕಡೆ ಲೋಕಾಯುಕ್ತರು ನಾನು 2500 ಕೋಟಿ ರೂಪಾಯಿಗಳ ಕಳ್ಳತನದ ಅದಿರು ಸಂಗ್ರಹ ಮಾಡಿದ್ದೆ. ಅದಕ್ಕೋಸ್ಕರ, ಆ

ಅಧಿಕಾರಿಯನ್ನು Suspend ಮಾಡುವುದಕ್ಕೋಸ್ಕರ ಪ್ರಯತ್ನ ನಡೆದಿದ್ದಕ್ಕೆ ನಾನು ರಾಜೀನಾಮೆ ಕೊಡುವ ಹಂತ ತಲುಪಬೇಕಾಯಿತು ಎಂದು ಅವರು ಹೇಳಿಕೆ ಕೊಡುತ್ತಾರೆ. ಈಗ ನಾವು ಮುಖ್ಯಮಂತ್ರಿಯವರು ಆ ಅಧಿಕಾರಿಗೆ ಪ್ರಶಸ್ತಿ ಕೊಡುತ್ತೇವೆಂದು ಹೇಳಿದ್ದರ ಬಗ್ಗೆ ಮಾತನಾಡಬೇಕೋ, ಲೋಕಾಯುಕ್ತರು 2500 ಕೋಟಿ ರೂ.ಗಳ ಪ್ರಾಮಾಣಿಕವಾಗಿ ಕಳ್ಳತನವನ್ನು ಕಂಡುಹಿಡಿದಿದ್ದೇವೆಂದು ಹೇಳಿದ್ದನ್ನು ಹೇಳಬೇಕೋ, ಅಥವಾ 200 ಕೋಟಿ ರೂಪಾಯಿಗಳ ಅಕ್ರಮದ ಬಗ್ಗೆ ವರದಿ ಕೊಡಿ ಎಂದು ಮಂತ್ರಿಯವರು ಮುಖ್ಯ ಕಾರ್ಯದರ್ಶಿಯವರಿಗೆ ಕೇಳಿದ್ದಾರೆ. ಮುಖ್ಯ ಕಾರ್ಯದರ್ಶಿಯವರು ಏನು ವರದಿ ಕೊಟ್ಟಿದ್ದಾರೆ ಅದನ್ನು ಸದನಕ್ಕೆ ಕೊಡಬೇಕು. ಇದನ್ನು ಸದನಕ್ಕೆ ಸಭಾನಾಯಕರು ತಿಳಿಸಬೇಕು. ಆ ಅಧಿಕಾರಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ CVC ಗೆ ದಿನಾಂಕ 2.6.2010ರಲ್ಲಿ ಪತ್ರ ಬರೆಯಬೇಕಾದರೆ ಅದು ಎಂಥ ಪ್ರಕರಣ ಎಂದು ನೋಡಬೇಕಾಗಿದೆ. Chief Vigilance Commissioner, Central Vigilance Commission of India, Shakti Bhavan, A Block, OPO Complex, New Delhi ಅಲ್ಲಿಗೆ ಪತ್ರ ಬರೆದು ಯಾವ್ಯಾವ ವಿದ್ಯಾಮಾನ ನಡೆದಿದೆ, ಏನೇನು ನಡೆದಿದೆ ಎಂದು date-wise ಮಾಹಿತಿಯನ್ನು ಗೋಕುಲ್ ಎನ್ನುವ ಅಧಿಕಾರಿ ಕೊಟ್ಟಿದ್ದಾರೆ. ಅವರು ಅದರ ಒಂದು ಕಾಫಿಯನ್ನು ಲೋಕಾಯುಕ್ತಕ್ಕೆ ಕಳುಹಿಸುತ್ತಾರೆ, ಅದರ ಜೊತೆಗೆ Chief Secretary ಯವರಿಗೆ, Principal Secretary, Forest, Ecology ರವರಿಗೆ, Principal Chief Conservator of Forest ರವರಿಗೆ Copy ಹಾಕುತ್ತಾರೆ, ರಾಜ್ಯದ ಹಿರಿಯ ಎಲ್ಲಾ ಅಧಿಕಾರಿಗಳ ಗಮನಕ್ಕೆ, ಲೋಕಾಯುಕ್ತರ ಗಮನಕ್ಕೆ ತರುತ್ತಾರೆ. ಕೇಂದ್ರ ಸರ್ಕಾರದ ಅಧೀನದಲ್ಲಿರುವ Chief Vigilance Commissioner ಗೆ ರಾಜ್ಯಸರ್ಕಾರದ ಒಬ್ಬ ಅಧಿಕಾರಿ ಪತ್ರ ಬರೆಯಬೇಕಾಗಿದ್ದರೆ ಇದು ಎಂಥ ಪ್ರಕರಣ ಎನ್ನುವುದನ್ನು ಸಭಾನಾಯಕರು ತಿಳಿದುಕೊಳ್ಳಬೇಕಾಗುತ್ತದೆ. ಏಕೆಂದರೆ, ಒಂದು ಕಡೆ ಮಂತ್ರಿ ಈ ಅಧಿಕಾರಿ ಸಭೆಗೆ ಬಂದಿಲ್ಲ. ಆತನನ್ನು Suspend ಮಾಡಬೇಕೆಂದು ಹೇಳುತ್ತಾರೆ, ಇನ್ನೊಂದು ಕಡೆ ಆ ಅಧಿಕಾರಿಗೆ ಪ್ರಶಸ್ತಿ ಕೊಡುತ್ತೇವೆ ಎಂದು ಹೇಳುತ್ತಾರೆ. ಇವರು Chief Vigilance Commission ಗೆ ಏನೇನು ನಡೆದಿದೆ ಆ ಎಲ್ಲಾ ವಿದ್ಯಾಮಾನಗಳನ್ನು ಬರೆದಿದ್ದಾರೆ. ಅದರಲ್ಲಿರುವ 2-3 ಅಂಶಗಳನ್ನು ಮಾನ್ಯ ಅಧ್ಯಕ್ಷರೆ ತಮ್ಮ ಗಮನಕ್ಕೆ ತರುತ್ತೇನೆ. "ದಿನಾಂಕ 15-03-2010- ಬೇಲೆಕೇರಿ ಬಂದರಿನಲ್ಲಿ ಅಕ್ರಮ ದಾಸ್ತಾನು ಇತ್ತು. ಅಂದಾಜು ಸುಮಾರು 150 ಕೋಟಿ ರೂಪಾಯಿಗಳ ಮೌಲ್ಯದ 5 ಲಕ್ಷ metric ಟನ್ ಕಬ್ಬಿಣದ ಅದಿರನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ಇವರು

ಜಪ್ತಿ ಮಾಡಿ ದಿನಾಂಕ 20-03-2010ರಂದು ಬಂದರು ಸಂರಕ್ಷಣಾಧಿಕಾರಿ ಬೇಲೆಕೇರಿ ಅವರಿಗೆ ಹಸ್ತಾಂತರಿಸಿ ಮಾನ್ಯ ಘನ ನ್ಯಾಯಾಲಯದ ಅನುಮತಿ ಪಡೆಯಲಾಗಿದೆ." ಇದು ಮೊದಲನೆಯ ಅಂಶ. 2ನೆಯ ಅಂಶ ಏನೆಂದರೆ, "ಈ ಕಬ್ಬಿಣದ ಅದಿರಿನ ಜಪ್ತಿಯ ಬಗ್ಗೆ ದಿನಾಂಕ 15-03-2010 ಪೊಲೀಸ್ ಠಾಣೆಯಲ್ಲಿ FIR ಸಂಖ್ಯೆ 17/2009-10, ಅರಣ್ಯ ಇಲಾಖೆಯಿಂದ ಬಂದರು ಅಧಿಕಾರಿಗಳ ವಿರುದ್ಧ ದೂರು ದಾಖಲು ಮಾಡಲಾಗಿರುತ್ತದೆ. ಈ ದೂರಿನಲ್ಲಿ ಬಂದರು ಅಧಿಕಾರಿಗಳು ಕರ್ನಾಟಕ ಅರಣ್ಯ ಕಾಯಿದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮಾವಳಿಗಳು 1969 ಉಲ್ಲಂಘನೆ ಮಾಡಿ ಕಾನೂನುಬಾಹಿರವಾಗಿ ಕಬ್ಬಿಣದ ಅದಿರನ್ನು ರಫ್ತು ಮಾಡಲು ಅನುವು ಮಾಡಿಕೊಟ್ಟಿರುತ್ತಾರೆಂದು ದೂರಲಾಗಿರುತ್ತದೆ." Vigilance Commissioner ಗೆ ಬರೆಯುವಂಥ ಪತ್ರದಲ್ಲಿ '1963 ಅರಣ್ಯ ಕಾಯಿದೆ, 1969 ಅರಣ್ಯ ಕಾಯಿದೆ, ಅದಿರನ್ನು ರಫ್ತು ಮಾಡುವುದಕ್ಕೆ ಅನುವು ಮಾಡಿಕೊಟ್ಟಿರುತ್ತಾರೆ' ಯಾರು ಅಂದರೆ ಕೆಲವರು ಗಣಿ ಇಲಾಖೆಯವರು ಇರಬಹುದು, ಸಂಭಂಧಪಟ್ಟ ಯಾರ್‍ಯಾರು ಎಂಬುದನ್ನು ಸರ್ಕಾರ ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬೇಕೆಂದು ನಾನು ಬಯಸುತ್ತೇನೆ.

ದಿನಾಂಕ: 20-03-2010ರಂದು ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರಿ ಬಂದರಿನಲ್ಲಿ ವಿವಿಧ ಗಣಿ ಉದ್ಯಮಿಗಳು ಅಕ್ರಮವಾಗಿ ಗಣಿಗಾರಿಕೆ ನಡೆಸಿ ಸುಮಾರು 250 ಕೋಟಿ ರೂಪಾಯಿಗಳ ಮೌಲ್ಯದ 8.06 ಲಕ್ಷ metric tonne ಕಬ್ಬಿಣದ ಅದಿರನ್ನು ರಫ್ತು ಮಾಡಲು ದಾಸ್ತಾನು ಇಡಲಾಗಿತ್ತು. ಬಂದರು ಸಂರಕ್ಷಣಾಧಿಕಾರಿ ಕಛೇರಿ ಪತ್ರ ದಿನಾಂಕ: 6.5.2010ರಂದು ಆ ಪ್ರಕಾರ ವರದಿ ಮಾಡಿರುತ್ತಾರೆ. 250 ಕೋಟಿ ರೂಪಾಯಿಗಳ ಸುಮಾರು 8 ಲಕ್ಷ metric tonne ಕಬ್ಬಿಣದ ಅದಿರನ್ನು ಹೊರದೇಶಕ್ಕೆ ರಫ್ತು ಮಾಡುವುದಕ್ಕೆಂದು ಅಲ್ಲಿ ಇಡಲಾಗಿತ್ತು. ಅದೆಲ್ಲ ನಾಪತ್ತೆಯಾಗಿದೆ. ಅದು ಯಾವ ದೇಶಕ್ಕೆ ಹೋಯಿತು? ಯಾವ್ಯಾವ ಕಂಪನಿಗಳವರು ಮಾಡಿದರು? "ಸಹಾಯಕ ಸಂರಕ್ಷಣಾಧಿಕಾರಿ ದಿ: 20.3.2010ರಂದು ಬೇಲೆಕೇರಿ ಬಂದರಿನಲ್ಲಿ ಜಪ್ತಿ ಮಾಡಲಾದ ಸುಮಾರು 8.06 ಲಕ್ಷ metric tonne ಕಬ್ಬಿಣದ ಅದಿರನ್ನು ಸಂರಕ್ಷಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಿಳಿಸಿ ಬೇಲೆಕೇರಿ ಬಂದರು ಸಂರಕ್ಷಣಾಧಿಕಾರಿಗಳು ಹಾಗೂ ಬೇಲೆಕೇರಿ Central Custom ಅಧಿಕಾರಿಗಳಿಗೆ ತಿಳಿಸಿರುತ್ತಾರೆ." ಅಂದರೆ ಬಂದರು ಅಧಿಕಾರಿಗಳು ಮತ್ತು ಕೇಂದ್ರ ಸರ್ಕಾರದ Custom ಅಧಿಕಾರಿಗಳಿಗೆ ದಿನಾಂಕ: 20-03-2010ರಲ್ಲಿ DFO ರವರು ಪತ್ರ ಬರೆಯುತ್ತಾರೆ. ದಿನಾಂಕ 2.6.2010ರ ದಿನಪತ್ರಿಕೆಯಲ್ಲಿ ವರದಿಯಾದಂತೆ ಸುಮಾರು 8.06 ಲಕ್ಷ metric tonne ಕಬ್ಬಿಣದ ಅದಿರು ನಾಪತ್ತೆಯಾಗಿದೆ. ಅದು

ಎಲ್ಲಿಗೆ ಹೋಯಿತು? ಯಾವ ದೇಶಕ್ಕೆ ಹೋಯಿತು ಅಥವಾ ಅದು ಮಂಗಮಾಯವಾಯಿತೇ? ಗೊತ್ತಿಲ್ಲ. ಏನಾದರೂ ವಾಪಸ್ಸು ತೆಗೆದುಕೊಂಡು ಹೋಗಿ ಅಲ್ಲೇ ಏನಾದರೂ ಹಾಕಿದ್ದಾರೋ ಗೊತ್ತಿಲ್ಲ. ಎಲ್ಲಿಗೆ ಹಾಕಿದ್ದಾರೆಂಬುದು ತನಿಖೆಯಿಂದ ಗೊತ್ತಾಗಬೇಕು. ತನಿಖೆ ಮಾಡಿ ಇದನ್ನು ಲೋಕಾಯುಕ್ತರು ಹೇಳಬೇಕು ಇಲ್ಲಾ ಸಭಾನಾಯಕರು ಹೇಳಬೇಕು. ಇದನ್ನು ಯಾವ ತನಿಖೆಗೆ ಕೊಡುತ್ತಾರೋ ಗೊತ್ತಿಲ್ಲ. ಆದರೆ, ಇದು ರಫ್ತು ಆಗಿರುವುದು ನಿಜ. Central Vigilance Commission ಗೆ letter ಬರೆದವರು ಯಾರು? ಮುಖ್ಯಮಂತ್ರಿಯವರು letter ಬರೆದರೂ ಒಂದೇ, ಸರ್ಕಾರದ ಒಬ್ಬ ಅಧಿಕಾರಿ ಬರೆದರೂ ಒಂದೇ. ಸರ್ಕಾರ ಎಂದರೆ ಮುಖ್ಯಮಂತ್ರಿಯವರು ಕಳ್ಳತನ ಎಂದು letter ಬರೆದರೂ ಅದು ಸರ್ಕಾರವೇ. ಅವರ ಕೆಳಗಡೆ ಇರುವ ಅಧಿಕಾರಿ ಇದು ತನಿಖೆಯಾಗಬೇಕೆಂದು District Forest Officer ಬರೆಯುತ್ತಾರೆ. ಇದು ಸುಮಾರು 250 ಕೋಟಿ ರೂಪಾಯಿಗಳ ಹಗರಣ. ಇದು ಹೊರದೇಶಕ್ಕೆ ರಫ್ತು ಆಗಿದೆ ಎನ್ನುವುದನ್ನು ಮುಖ್ಯಮಂತ್ರಿಯವರ, ಸರ್ಕಾರದ ಒಬ್ಬ ಹಿರಿಯ ಅಧಿಕಾರಿ ಪತ್ರ ಬರೆದಾಗ ಆ ಖಾತೆಯನ್ನು ಅಂದರೆ ಗಣಿ ಖಾತೆಯನ್ನು ವಹಿಸಿಕೊಂಡಿರುವವರು ಮುಖ್ಯಮಂತ್ರಿಯವರೇ. ಮುಖ್ಯಮಂತ್ರಿಯವರೇ ಅರಣ್ಯ ಖಾತೆಯನ್ನು ಸಹ ವಹಿಸಿಕೊಂಡಿದ್ದಾರೆ. 1963, 1969 Forest Act violation ಆಗಿ ಅಲ್ಲಿ ಅದಿರು ತೆಗೆದಿದ್ದಾರೆ. ಮುಖ್ಯಮಂತ್ರಿಯವರ ಬಳಿಯಲ್ಲಿರುವ ಅರಣ್ಯ ಮತ್ತು ಗಣಿ ಇಲಾಖೆಗಳಲ್ಲಿ 250 ಕೋಟಿ ರೂಪಾಯಿಗಳ ಅಕ್ರಮ ನಡೆದಿದೆಯೆಂದು CVC ಗೆ ಪತ್ರ ಬರೆಯಬೇಕಾದರೆ ಅವರ ಧೈರ್ಯ ಮೆಚ್ಚಬೇಕಾಗುತ್ತದೆ. ಅಂದರೆ ಮುಖ್ಯಮಂತ್ರಿಯವರ ಮೇಲೆಯೇ ನೇರವಾಗಿ ಪತ್ರ ಬರೆದ ಹಾಗೆ ಆಯಿತು. ಆತ FIR ಹಾಕಿದ ಹಾಗೆ ಆಯಿತು. ಅದನ್ನು ಬೇರೆಯವರ ಮೇಲೆ ಹಾಕಿಲ್ಲ. ನಾನು ಇದನ್ನು ತಮಾಷೆಗೆ ಹೇಳುತ್ತಿಲ್ಲ. ಆ ಅಧಿಕಾರಿಯನ್ನು ನಾವು appreciate ಮಾಡಬೇಕಾಗುತ್ತದೆ. ಬೇಕಾದರೆ, ಆ ಅಧಿಕಾರಿಯನ್ನು Suspend ಮಾಡಿ. ತನಿಖೆ ಆಗುವವರೆಗೆ ಮುಖ್ಯಮಂತ್ರಿಯವರು ಹೊರಗಡೆ ಇರಬೇಕಾಗುತ್ತದೆ. ಏಕೆಂದರೆ, 250 ಕೋಟಿ ರೂಪಾಯಿಗಳ ಅಕ್ರಮವಾಗಿದೆ ಎಂದು ಪತ್ರ ಬರೆದಾಗ ಇದನ್ನು ನಮ್ಮ ಕಡೆಯ ಅಧಿಕಾರಿಗಳು ಬರೆದಿಲ್ಲ. ಮುಖ್ಯಮಂತ್ರಿಯವರ, ಸರ್ಕಾರದ ಒಬ್ಬ ಅಧಿಕಾರಿ ಜವಾಬ್ದಾರಿಯುತವಾಗಿರುವ DFO ಬರೆದ complaint. Central Vigilance ಗೆ ಪತ್ರ ಬರೆದು ರಾಜ್ಯ ಸರ್ಕಾರ ತನಿಖೆ ಮಾಡುವುದಕ್ಕೆ ವಿಫಲವಾಗಿದೆ ಎಂದು ಹೇಳುತ್ತಾರೆ. 7 Check posts ನಲ್ಲಿಯೂ Commercial Tax ನವರು Check ಮಾಡುವುದಿಲ್ಲ. ಸಾರಿಗೆ ಇಲಾಖೆಯವರು Check ಮಾಡುವುದಿಲ್ಲ. ಗಣಿ ಇಲಾಖೆಯವರು

Check ಮಾಡುವುದಿಲ್ಲ. Forest ಇಲಾಖೆಯವರು Check ಮಾಡುವುದಿಲ್ಲ ಇದರಲ್ಲಿ ಕೇಂದ್ರ ಸರ್ಕಾರದ ಸುಂಕದ ಅಧಿಕಾರಿಗಳು involve ಆಗಿದ್ದಾರೆ. ಬಂದರು ಇಲಾಖಾ ಅಧಿಕಾರಿಗಳು involve ಆಗಿದ್ದಾರೆ. ಈ ಎರಡೂ ಇಲಾಖೆಗಳ ಅಧಿಕಾರಿಗಳು involve ಆಗಿರುವಾಗ ಈ ತನಿಖೆಯನ್ನು ಯಾರ ಕೈಯಲ್ಲಿ ಮಾಡಿಸಬೇಕು? ಕೇಂದ್ರ ಸರ್ಕಾರದ ಅಧಿಕಾರಿ ಮೇಲೆ ರಾಜ್ಯ ಸರ್ಕಾರ ತನಿಖೆ ಮಾಡುವುದಕ್ಕಾಗುತ್ತದೆಯೇ? ನೇರವಾಗಿ ಈ ತರಹ ಪತ್ರ ಬರೆದಿರುವುದು ಗಂಭೀರವಾದ ವಿಷಯ. ನಾನು ದಾಖಲೆ ಸಮೇತ ಹೇಳುತ್ತಿದ್ದೇನೆ. ರಾಜ್ಯ ಸರ್ಕಾರದ ಒಬ್ಬ ಜಿಲ್ಲಾ ಮಟ್ಟದ ಅಧಿಕಾರಿ ಮುಖ್ಯಮಂತ್ರಿಯವರ ಬಳಿಯಲ್ಲಿರುವ ಖಾತೆ ಮೇಲೆ CVC ಗೆ ರಾಜ್ಯ ಸರ್ಕಾರದ ಮೇಲೆ ನಂಬಿಕೆ ಇಲ್ಲ, ಮುಖ್ಯಮಂತ್ರಿಯವರ ಮೇಲೆ ನಂಬಿಕೆ ಇಲ್ಲ, ಒತ್ತಡ ತಂದು ಬಿಡಿಸಬಹುದು, ಒಬ್ಬ ಮಂತ್ರಿ Suspend ಮಾಡಿ ಎಂದು ನನ್ನ ಮೇಲೆ ಪತ್ರ ಬರೆದಿದ್ದಾರೆಂದು ಹೇಳಿದ್ದಾರೆ. ಅವರು CVC ಮೇರೆಗೆ ಮೀರಿ ಹೋಗುವ ಮಟ್ಟಕ್ಕೆ ಸರ್ಕಾರ ವಾಡಿದೆ ಎಂದು ಹೇಳಬೇಕಾಗುತ್ತದೆ. ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. " ಬಂದರು ಅಧಿಕಾರಿ ಅಕ್ರಮ ಗಣಿ ಬಗ್ಗೆ ಕಾನೂನು ಬಾಹಿರವಾಗಿ ರಫ್ತು ಮಾಡಲು ಅನುವು ಮಾಡಿಕೊಟ್ಟಿದ್ದರಿಂದ ರಾಜ್ಯ ಬೊಕ್ಕಸಕ್ಕೆ ಸುಮಾರು 100 ಕೋಟಿ ರೂ. ನಷ್ಟ ಎಂದು ಹೇಳುತ್ತಾರೆ." Seize ಮಾಡಿದ ಅದಿರನ್ನು Forest ನಲ್ಲಿ ತೆಗೆದ ಅದಿರನನು ಕಾಯಿದೆ ಉಲ್ಲಂಘನೆ ಮಾಡಿ ತೆಗೆದ ಅದಿರನ್ನು ಹೊರದೇಶಕ್ಕೆ ರಫ್ತು ಮಾಡಿದ್ದಕ್ಕೆ ಯಾರು ಅವಕಾಶ ಕೊಟ್ಟರು? CVC ಗೆ ಬರೆದ ಪತ್ರದಲ್ಲಿ ಇದನ್ನೆಲ್ಲ ಹೇಳುತ್ತಾರೆ. ಅದಲ್ಲದೆ "Custom ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಅಕ್ರಮ ಅದಿರನ್ನು ಬೇಲೆಕೇರಿ ಬಂದರಿನಿಂದ ಹೊರಗಡೆ ಸಾಗಿಸುವುದನ್ನು ತಡೆಯಲು ವಿಫಲನಾಗಿರುತ್ತೇನೆ" ಎಂದು ತಿಳಿಸಿದ್ದಾರೆ. ಇದೆಲ್ಲ ಯಾರು ಮಾಡಿದರು? ಇದರ ಹಿಂದೆ ಯಾರಿದ್ದಾರೆ? ಹೊರದೇಶಕ್ಕೆ ಈ ಅದಿರನ್ನು ರಫ್ತು ಮಾಡುವುದಕ್ಕೆ ಅಷ್ಟೊಂದು ಒಬ್ಬ ಅಧಿಕಾರಿ ಬರೆಯಬೇಕಾದರೆ ಸುಮ್ಮಸುಮ್ಮನೆ ಬರೆಯುವುದಕ್ಕಾಗುವುದಿಲ್ಲ. ರಾಜ್ಯದ ಮುಖ್ಯಮಂತ್ರಿಯವರು ನಿರ್ವಹಣೆ ಮಾಡುತ್ತಿರುವ ಇಲಾಖೆ ಅಂದರೆ ಅರಣ್ಯ ಇಲಾಖೆಯ ಒಬ್ಬ ಅಧಿಕಾರಿ ಬರೆಯುತ್ತಾರೆ ಅಂದರೆ ಮುಖ್ಯಮಂತ್ರಿಯವರೇ ಹೇಳಿರಬೇಕು. ಪತ್ರ ಬರಿ, ಏನಾಗುತ್ತದೋ ನೋಡೋಣ ಎಂದು. ಏಕೆಂದರೆ ಇದೆಲ್ಲ ಗೊತ್ತಿರಬೇಕು. ಇಲ್ಲದಿದ್ದರೆ ಕೆಲವರನ್ನೆಲ್ಲ control ಮಾಡಬೇಕಾದರೆ ಇಂಥ letter ಗಳನ್ನು ಬರೆಸಿ ಇಟ್ಟುಕೊಂಡಿದ್ದರೆ control ಮಾಡಬಹುದು. ಇದು remote control ಇದ್ದ ಹಾಗೆ. ಅದರಲ್ಲಿ ಅವರಿಗೆ ಆಗದಿದ್ದವರು ಇರುತ್ತಾರೆ. ನಾನು ಉತ್ತರ ಕರ್ನಾಟಕದ ನೆರೆ ಪರಿಸ್ಥಿತಿ ಬಗ್ಗೆ ಚರ್ಚಿಸಲು

ನಿಲುವಳಿ ಸೂಚನೆ ಕೊಡುವವನಿದ್ದೇನೆ. ಮುಖ್ಯಮಂತ್ರಿಯವರು ನಿರ್ವಹಿಸುವಂಥ ಒಂದು ಖಾತೆಯಲ್ಲಿ ಅವರ ಕೆಳಗಡೆಯ ಅಧಿಕಾರಿ ಬರೆಯಬೇಕಾಗಿದ್ದರೆ ಮುಖ್ಯಮಂತ್ರಿಯವರ ಅನುಮತಿ ಇಲ್ಲದೆ ಬರೆಯುವುದಿಲ್ಲ. ಯಾವ ಅಧಿಕಾರಿಗಳೂ ಸಹ ಮುಖ್ಯಮಂತ್ರಿಯವರಿಗೆ ಮಾಹಿತಿ ಕೊಡದೆಯೇ ಲೋಕಾಯುಕ್ತಕ್ಕೆ, Central Vigilance Commission ಗೆ, ಮುಖ್ಯ ಕಾರ್ಯದರ್ಶಿಗಳಿಗೆ ಬರೆಯಬೇಕಾದರೆ ಮುಖ್ಯಮಂತ್ರಿಯವರು ಹಿಂದುಗಡೆಯಿಂದ backing ಕೊಟ್ಟಿದ್ದಾರೆ. ಏಕೆಂದರೆ, ಅವರು ರಾಜಕೀಯ ಸನ್ನಿವೇಶವನ್ನು control ಮಾಡಬೇಕಾದರೆ ಇಂಥ ಅಸ್ತ್ರಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಈ ಅಸ್ತ್ರ ಇಟ್ಟುಕೊಂಡೇ ಪತ್ರ ಬರೆಸಿದ್ದಾರೆ. 250 ಕೋಟಿ ರೂ.ಗಳ ಅಕ್ರಮವನ್ನು ಅಧಿಕಾರಿಯ ಮುಖಾಂತರ ಬರೆಯಿಸುವುದರ ಮೂಲಕ ಇದೊಂದು sample ಕೊಟ್ಟಿದ್ದಾರೆ. ವರದಿಯನ್ನು 31ನೇ ತಾರೀಖಿನೊಳಗೆ ವರದಿ ಕೊಡುತ್ತೇನೆಂದು ಲೋಕಾಯುಕ್ತರು ಹೇಳಿದರು. ಮೂಟೆಗಟ್ಟಲೆ ಆಂಧ್ರ ಮುಂತಾದ ಕಡೆಯ duplicate permit ಅನ್ನು ತುಂಬಿಕೊಂಡು ಬಂದಿದ್ದಾರೆ. Check posts ನಲ್ಲಿ permit ಆಗಿಲ್ಲ. ಆ ಮೂಟೆಯನ್ನು ನಾವು ಬಿಚ್ಚುವುದಕ್ಕೆ ಅಧಿಕಾರವಿಲ್ಲ. ಈಗ ಲೋಕಾಯುಕ್ತರ ಜೊತೆ ವಿಶ್ವಾಸದಲ್ಲಿರುವವರು ಮುಖ್ಯಮಂತ್ರಿಯವರು. ಮೊನ್ನೆಯಿಂದ ಅವರು ಲೋಕಾಯುಕ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ. ರಾಜ್ಯದ ಜನತೆ, ಎರಡೂ ಸದನ ಹೇಳಿದ ಮೇಲೆ ಮುಖ್ಯಮಂತ್ರಿಯವರು ಲೋಕಾಯುಕ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ. ಲೋಕಾಯುಕ್ತರು ರಾಜೀನಾಮೆ ಕೊಟ್ಟಾಗ ಇಲ್ಲ, ಅವರಿಗೆ ಆತ್ಮೀಯವಾಗಿ ಬಿಡುಗಡೆ ಮಾಡುತ್ತೇವೆ, ಒಳ್ಳೆಯ ಕೆಲಸ ಮಾಡಿದ್ದಾರೆ, ಎನ್ನುವ ಮಾತನ್ನು ಮುಖ್ಯಮಂತ್ರಿಯವರು ಹೇಳಿದರು, ಜೊತೆಗೆ, ಸದ್ಯಕ್ಕೆ ಇವರು ಖಾಲಿ ಮಾಡಲಿ ಎನ್ನುವ ಒಂದು ಭಾವನೆಯನ್ನೂ ವ್ಯಕ್ತಪಡಿಸಿದರು. ಆದರೆ, ಅವರ ಪಕ್ಷದ ರಾಜ್ಯಾಧ್ಯಕ್ಷರಾದ ಈಶ್ವರಪ್ಪನವರು ಮತ್ತೆ ಕೆಲವು ಅವರ ಸಹೋದ್ಯೋಗಿ ಮಂತ್ರಿಗಳು ಹೋಗಿ ಕೇಳಿದರೂ ಲೋಕಾಯುಕ್ತರು ಒಪ್ಪಲಿಲ್ಲ. ವಿರೋಧ ಪಕ್ಷದ ನಾಯಕರು ಹೋಗಿ ಹೇಳಿದರೂ ಒಪ್ಪಲಿಲ್ಲ, ನಮ್ಮ ಪಕ್ಷದ ಶಾಸಕರೆಲ್ಲ ಹೋಗಿ ಹೇಳಿದರೂ ಒಪ್ಪಲಿಲ್ಲ. ಒಂದು ಸಲ ನಿರ್ಣಯ ಮಾಡಿದ ಮೇಲೆ ಯಾವುದೇ ಕಾರಣದಿಂದ ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

ನಾವು ಹೋದಾಗ ಅವರೊಂದು ಮಾತು ಹೇಳಿದರು. ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಮೂರ್ತಿಯಾದ ವರ್ಮಾರವರು ಫೋನು ಮಾಡಿ, ಯಾವುದೇ ಕಾರಣಕ್ಕೂ ನೀವು ರಾಜೀನಾಮೆ ವಾಪಸ್ ತೆಗೆದುಕೊಳ್ಳಬೇಡಿ ಎಂದು ಹೇಳಿದ್ದರಂತೆ. ನಮ್ಮ ಪಕ್ಷದ ಶಾಸಕರು ಅವರ ಬಳಿಗೆ ಹೋದಾಗ, ನಾನು ಯಾವುದೇ ಕಾರಣಕ್ಕೂ ವಾಪಸ್

ತೆಗೆದುಕೊಳ್ಳುವುದಿಲ್ಲ, ನನಗೇನು ಎಂದರೆ ರಾಜ್ಯದಲ್ಲಿ ಇಂಥ ಲೂಟಿಯಾಗುವುದನ್ನು ತಪ್ಪಿಸಬೇಕು, ಮುಂದೆ ಬಂದವರು ಇದನ್ನು ಮಾಡಲಿ ಅವರಿಗಾದರೂ ಅಧಿಕಾರ ಕೊಡಲಿ ಎನ್ನುವ ಭಾವನೆ ವ್ಯಕ್ತಪಡಿಸಿದರು. ಮಾನ್ಯ ಕಾನೂನು ಸಚಿವರಿಗೆ ಕಾನೂನು ಬಗ್ಗೆ ಒಳ್ಳೆಯ ಅರಿವು ಇದೆ. ಕೆಲವು ಟೈಂ ಡಿವಿಯೇಷನ್ ಆಗಿಬಿಡುತ್ತಾರೆ. ನಮ್ಮ ಕಾನೂನು ಮಂತ್ರಿಗಳು ಬಾಕಿ ಟೈಂ ನಲ್ಲಿ ಒಳ್ಳೆಯ ಟ್ರ್ಯಾಕ್ ನಲ್ಲಿ ಹೋಗುತ್ತಿರುತ್ತಾರೆ, ಆದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಸಚಿವರ ಪಕ್ಕದಲ್ಲಿ ಕುಳಿತಾಗ ಸ್ವಲ್ಪ ಟ್ರ್ಯಾಕ್ ಚೇಂಜ್ ಮಾಡುತ್ತಾರೆ. ಆದರೂ ಟ್ರ್ಯಾಕ್ ಚೇಂಜ್ ಆಗಬಾರದು. ಅವರೇ ಹೋಗಿ ಲೋಕಾಯುಕ್ತರವರ ಮನವೊಲಿಸಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಕಾನೂನು ಸಚಿವರಿಗೆ ಅಭಿನಂದಿಸಬೇಕಾಗುತ್ತದೆ. ಒಂದು ನಿಮಿಷ ತಾಳ್ಮೆ ತೆಗೆದುಕೊಳ್ಳಿ ಸಾರ್. ನಾವು ಓದಿಲ್ಲ. ಸ್ವಲ್ಪ ಹೇಳುತ್ತೇನೆ ಕೇಳಿ. ನೀವು ಮತ್ತು ಅಶೋಕ್‌ರವರು ಲೋಕಾಯುಕ್ತರವರು ರಾಜೀನಾಮೆ ಕೊಟ್ಟ ನಂತರ ಒಂದು ಹೇಳಿಕೆ ಕೊಟ್ಟರು. 'ಇದು ಸರಿಯಲ್ಲ' ಎಂದು ನಿಜವಾದ ಭಾವನೆ ವ್ಯಕ್ತಪಡಿಸಿದಿರಿ. ಆದರೆ, ಮುಖ್ಯಮಂತ್ರಿಗಳು 'ರಾಜೀನಾಮೆ ಕೊಟ್ಟಿದ್ದು ಒಳ್ಳೆಯದು, ಅವರು ಹೋಗುತ್ತಾರೆಂದರೆ ನಾವೇನು ಮಾಡುವುದು?. ಎಂದು ಹೇಳಿದರು. ಇದಾದ ನಂತರ ಚರ್ಚೆ ಶುರುವಾದ ಮೇಲೆ ನೀವು ಏನು ಹೇಳಿದಿರಿ ಎಂಬುದನ್ನು ಕಡತ ತೆಗಿಸಿ ನೋಡಿ. ನಂತರ ಜನರದ್ದು ಒಂದು ಕಡೆ ಒತ್ತಡ, ಲೋಕಾಯುಕ್ತರಿಂದಲೇ ಈ ಸರ್ಕಾರಕ್ಕೆ ಏನಾದರು ಕುತ್ತು ಬರುತ್ತದೆಯೋ ಎಂದು, ಕೇಂದ್ರದಿಂದ ಒತ್ತಡ, ನಿಮ್ಮ ಗುಪ್ತ ದಳದ ಮಾಹಿತಿ ಎಲ್ಲಾ ತೆಗೆದುಕೊಂಡು ಕೊನೆಗೆ ವಿಧಿಯಿಲ್ಲದೆ ಲೋಕಾಯುಕ್ತರ ಮುಂದೆ ರಾಷ್ಟ್ರೀಯ ನಾಯಕರನ್ನು ಕರೆದುಕೊಂಡು ಹೋಗಿ ಅವರನ್ನು ಒಪ್ಪಿಸಿದಿರಿ. ಮತ್ತೊಂದು ಕಡೆ ಎರಡು ಸದನದ ವಿರೋಧ ಪಕ್ಷಗಳ ಮುಖಂಡರುಗಳನ್ನು ಕರೆಸಿದ್ದೀರಿ. ಮೊದಲು ಮಾನ್ಯ ಸುರೇಶ್‌ಕುಮಾರ್ ರವರ ಮಾತಿಗೆ ಬೆಲೆ ಕೊಡಲಿಲ್ಲ. 50% ಸ್ವಲ್ಪ ಇತ್ತು ನಂತರ ಅಲ್ಲಿಂದ ಫೋನು ಬಂದ ತಕ್ಷಣ 100% ಕ್ಲಿಯರ್ ಆಯಿತು.

ಶ್ರೀ ಎಸ್. ಸುರೇಶ್ ಕುಮಾರ್ : ಏನಾಯಿತು ಎಂದರೆ ಜೂನ್ 23 ನೇ ತಾರೀಖು ಲೋಕಾಯುಕ್ತ ಸಂತೋಷ್ ಹೆಗ್ಡೆಯವರು ರಾಜೀನಾಮೆ ಕೊಟ್ಟ ತಕ್ಷಣ ಇಡೀ ರಾಜ್ಯ ಮತ್ತು ನಾವು ದಿಗ್ಭ್ರಮೆಗೆ ಒಳಗಾದೆವು. it was shock. ಆದರೆ, ನಿಮಗೆ ಈ ಸರ್ಕಾರಕ್ಕೆ ಹೊಡೆಯುವುದಕ್ಕೆ ಒಂದು ಅಸ್ತ್ರ ಸಿಕ್ಕಿತು ಎಂದು ಬಹಳ ಸಂತೋಷವಾಯಿತು. ಮೊನ್ನೆ ಅವರು ವಾಪಸ್ ತೆಗೆದುಕೊಂಡರಲ್ಲ ಇಡೀ ರಾಜ್ಯಕ್ಕೆ ಸಂತೋಷವಾಯಿತು, ನಿಮಗೆ ಇದ್ದ ಒಂದು ಅಸ್ತ್ರ ಹೋಯಿತಲ್ಲ ಎಂದು ದಿಗ್ಭ್ರಮೆಯಾಯಿತು. ಅಷ್ಟೆ ವ್ಯತ್ಯಾಸ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗ ರೋಡ್‌ನಲ್ಲಿ ಹೋಗುವ ಮಾರಿಯನ್ನು ಮನೆಗೆ

ತಂದು ಬಿಟ್ಟುಕೊಂಡಿದ್ದೀರಿ ಹುಷಾರಾಗಿ ಸಾಕಬೇಕು, ಇಲ್ಲದೇ ಹೋದರೆ ಅದು ನಿಮ್ಮ ಮೇಲೆ ಬರುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಹಾಗಾದರೆ ನೀವು ಲೋಕಾಯುಕ್ತರನ್ನು ಮಾರಿ ಎಂದು ಕರೆಯುತ್ತೀರಾ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಲೋಕಾಯುಕ್ತರನ್ನು ಮಾರಿ ಎನ್ನಲಿಲ್ಲ ಸ್ವಾಮಿ. ಮಾರಿನೂ ಒಂದು ದೇವರು ಹುಷಾರಾಗಿ, ನೀವೇನು ಅಧಿಕಾರ ಕೊಡುತ್ತೇವೆಂದು ಹೇಳಿದಿರಿ ಆ ಅಧಿಕಾರ ಎಲ್ಲಾ ಕೊಡಬೇಕು, ಇಲ್ಲಾಂದ್ರೆ ಅದು ನಿಮಗೆ ತಿರುಗಿಕೊಳ್ಳುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಬಾಲಕೃಷ್ಣರವರು ಲೋಕಾಯುಕ್ತರ ಬಗ್ಗೆ ಹೇಳಿದ್ದು, ನಮಗೆ ಅವರ ಬಗ್ಗೆ ಸಣ್ಣದಾಗಿ ಮಾತನಾಡಲಿಕ್ಕೆ ಅಷ್ಟು ವ್ಯಕ್ತಿತ್ವ ಇಲ್ಲ, ನಾವು ಅಷ್ಟು ಎತ್ತರಕ್ಕೆ ಬೆಳೆದಿಲ್ಲ ಆ ಮಟ್ಟಕ್ಕೆ ನಾವು ಬೆಳೆದಿಲ್ಲ. ನೀವು ಹೇಳಿಕೆ ಕೊಟ್ಟಿರುವುದನ್ನು ಓದುತ್ತೇನೆ. ಕನ್ನಡ ಪ್ರಭ ಪತ್ರಿಕೆಯಲ್ಲಿ "ಲೋಕಾಯುಕ್ತರ ರಾಜೀನಾಮೆಯನ್ನು ನಾವು ಯಾರೂ ನಿರೀಕ್ಷಿಸಿರಲಿಲ್ಲ ಇದು ದುರಾದೃಷ್ಟ, ಘಟನೆಯಿಂದ ಬೇಸರಗೊಂಡಿದ್ದು ರಾಜೀನಾಮೆ ನೀಡಿರುವುದು ನಮ್ಮನ್ನು ದಿಗ್ಭ್ರಮೆಗೊಳಿಸಿದೆ" ಎಂದು ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದ್ದಾರೆ. ಇದನ್ನು ನೀವು ಒಪ್ಪಿಕೊಳ್ಳುತ್ತೀರಿ. ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಮತ್ತು ರಾಜ್ಯ ಸರ್ಕಾರದ ಸಂಬಂಧ ಉತ್ತಮವಾಗಿದೆ, ಎಂದು ಅವರು ಹೇಳಿದ ಮೇಲೆ ನೀವು ಮನೆಗೆ ಹೋಗಿ ಎಂದಿರಿ. ಇದು ಒಂದು ಕಡೆ ಇರಲಿ. ನಾನು ನಿಮ್ಮನ್ನು ಇಷ್ಟೇ ಮನವಿ ಮಾಡುವುದು. ಇವತ್ತು ಲೋಕಾಯುಕ್ತರ ಬಗ್ಗೆ ರಾಷ್ಟ್ರೀಯ ನಾಯಕರಾದಂಥ ನಿಮ್ಮ ಪಕ್ಷದ ಅಧ್ಯಕ್ಷರಿಗೆ ಒಂದು ಭಾವನೆ ಇದೆ. ಅವರು ಮತ್ತು ಅಡ್ವಾಣಿಯವರ ಬಗ್ಗೆ ಲೋಕಾಯುಕ್ತರವರು ಒಂದು ಮಾತು ಹೇಳಿದ್ದಾರೆ. ಅವರು ನನ್ನ ತಂದೆಯ ಸಮಾನರು ಎಂದು ಹೇಳಿದ್ದಾರೆ. ಅದಕ್ಕಾದರೂ ನೀವು ಬೆಲೆ ಕೊಡಬೇಕಾಗಿತ್ತು. ರಾಷ್ಟ್ರೀಯ ನಾಯಕರನ್ನು ತಂದೆಯ ಸಮಾನರು ಎಂದು ಗುರುತಿಸುವಂಥ ಈ ರಾಜ್ಯದ ಲೋಕಾಯುಕ್ತರು, ನಾವೇನು ಬಿಡಿ ನಾವೆಲ್ಲಾ ಸರಿಯಿಲ್ಲ, ನಾವು ಯಾರು ಹೇಳಿದರು ಒಪ್ಪಿಕೊಳ್ಳಲಿಲ್ಲ. ನಿಮ್ಮ ಪಕ್ಷದ ಮುಖಂಡರು ಮುತ್ಸದ್ದಿ ರಾಜಕಾರಣಿಯಾಗಿರುವ ಅವರ ಬಗ್ಗೆ ಈ ಸದನದಲ್ಲಿ ನಾನು ಸಣ್ಣದಾಗಿ ಮಾತನಾಡುವುದಕ್ಕೆ ತಯಾರಿಲ್ಲ. ಅಡ್ವಾನಿಯವರು ಬಹು ಎತ್ತರ ಮಟ್ಟದ ನಾಯಕರು. ಅವರ ಬಗ್ಗೆ ನಮಗೆ ಗೌರವ ಇದೆ. ಅಂಥ ಒಬ್ಬ ನಾಯಕರು ಇವತ್ತು ಹೇಳಿ ಲೋಕಾಯುಕ್ತ ಸಂತೋಷ ಹೆಗ್ಡೆಯವರ ರಾಜೀನಾಮೆಯನ್ನು ತಡೆಹಿಡಿಯುವುದರಲ್ಲಿ ಯಶಸ್ವಿಯಾಗಿದೆ ಎಂದು ಎಲೆಕ್ಟ್ರಾನಿಕ್ ಮೀಡಿಯಾದಲ್ಲಿಯೂ ಮತ್ತು ಇತರೆ ಮಾಧ್ಯಮಗಳಲ್ಲಿ ಬಂದಿದೆ. ರಾಜ್ಯಪಾಲರು ಅವರ ಮನೆಯ ಬಾಗಿಲಿಗೆ ಹೋಗುತ್ತೇನೆಂದು ಹೇಳಿದರು

ಇದಕ್ಕೂ ಒಪ್ಪಲಿಲ್ಲ. ರಾಜ್ಯ ಬಿಜೆಪಿ ಅಧ್ಯಕ್ಷರು ಹಾಗೂ ನೀವು ಮಂತ್ರಿಗಳು ಎಲ್ಲಾ ಹೋದಿರಿ ಅದಕ್ಕೂ ಒಪ್ಪಲಿಲ್ಲ. ಕೇಂದ್ರ ಗೃಹ ಸಚಿವರಾದ ಚಿದಂಬರಂರವರು ಫೋನು ಮಾಡಿದರು ಅದಕ್ಕೂ ಒಪ್ಪಲಿಲ್ಲ. ಕೆಲವು ನಿವೃತ್ತ ನ್ಯಾಯಾಧೀಶರುಗಳು ಮನವಿ ಮಾಡಿದರು ಅವರು ಒಪ್ಪಲಿಲ್ಲ. ಸುಮಾರು ಜನ ಹೇಳಿದರು. ಆದರೆ, ನಿಮ್ಮ ಪಕ್ಷದ ರಾಷ್ಟ್ರೀಯ ನಾಯಕರ ಮೇಲೆ ಗೌರವ ಇಟ್ಟು ವಾಪಸ್ ತೆಗೆದುಕೊಂಡು ಸರ್ಕಾರ ಏನಾದರೊಂದು ಭ್ರಷ್ಟಾಚಾರ ತೊಳೆಯುವುದಕ್ಕೆ ಮೊದಲು ಪಂಕ್ತಿ ಹಾಕುತ್ತಾರೆ. ಎನ್ನುವ ಭಾವನೆಯಿಂದ ವಾಪಸ್ ತೆಗೆದುಕೊಂಡಿರಬಹುದೇನೋ ಗೊತ್ತಿಲ್ಲ. ಅಥವಾ ಹಾಳಾಗಿ ಹೋಗಲಿ, ಸ್ವಲ್ಪ ಮೇಯಿಕೊಳ್ಳಲಿ ಎಂದೊ ನಾವು ಸುಮ್ಮನಿದ್ದು ಬಿಡೋಣ ಎನ್ನುವ ಭಾವನೆ ಇದೆಯೋ ನನಗೆ ಗೊತ್ತಿಲ್ಲ. ಬೆಳಗ್ಗೆ ನಮ್ಮ ಸಭಾನಾಯಕರು ಇವತ್ತೇನು ನಮ್ಮ ಅಭಿಪ್ರಾಯ ಕೇಳಿದರು ಅದರಲ್ಲಿ ನಾವು ಹೇಳಿದ್ದೇವೆ. ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದಲ್ಲಿ ಭ್ರಷ್ಟಾಚಾರದ ಬಗ್ಗೆ ಮಾತನಾಡುವಾಗ ಮೂರು ದಿವಸಗಳಾಗಲಿ, ನಾಲ್ಕು ದಿವಸಗಳಾಗಲಿ, ಐದು ದಿವಸಗಳಾಗಲಿ, ಚರ್ಚೆಯಾಗಲಿ ಎಂದು ತಾವು ಘೋಷಣೆ ಮಾಡುತ್ತಿದ್ದೀರಿ. ಅದಕ್ಕೆ ಗಂಡುಗಲಿ ರಾಜಕಾರಣಿ ಯಡಿಯೂರಪ್ಪ ಎನ್ನುವುದು. ಏಕೆಂದರೆ, ಈ ರಾಜ್ಯದಲ್ಲಿ ಏನಾದರೂ ವಿರೋಧ ಪಕ್ಷದವರನ್ನು ಎದುರಿಸುವ ಶಕ್ತಿ ಇರುವುದು ಎಂದರೆ ಅದು ಯಡಿಯೂರಪ್ಪನವರಿಗೆ.

(ಈ ಹಂತದಲ್ಲಿ ಮಾನ್ಯ ಚಂದ್ರಕಾಂತ ಗುರಪ್ಪ ಬೆಲ್ಲದ್‌ರವರು ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದಕ್ಕಾಗಿ ನಾನು ಏನು ಹೇಳುವುದು ಎಂದರೆ, ಈ ರಾಜ್ಯದ ಜನತೆ ಕಳೆದ 20 ತಿಂಗಳಿನಿಂದ ಒಂದೊಂದು ಕಡೆ ಯಾವ್ಯಾವ ಆಪರೇಷನ್ ಮಾಡಬೇಕೋ ಆ ಎಲ್ಲಾ ಆಪರೇಷನ್‌ಗಳಲ್ಲಿ ಸಕ್ಸಸ್ ಆಗಿದ್ದೀರಿ. ಒಂದು ಕಡೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಪರೇಷನ್ ಸಕ್ಸಸ್ ಆಯಿತು. ಶಾಸಕರನ್ನು ಖರೀದಿಸುವಲ್ಲಿ ಸಕ್ಸಸ್ ಆಗಿದ್ದೀರಿ. ವಿರೋಧ ಪಕ್ಷದವರನ್ನು ದಮನ ಮಾಡುವುದರಲ್ಲಿಯೂ ನೀವು ಸಕ್ಸಸ್ ಆಗಿದ್ದೀರಿ. ನಮ್ಮ ಮೇಲೆ ಚಕಾರ ಎತ್ತಲ್ಲ ಎನ್ನುವ ಮಟ್ಟಕ್ಕೆ ತಾವು ಅದರಲ್ಲಿ ಯಶಸ್ಸು ಆಗಿದ್ದೀರಿ. ಅದರೆ, ನಾನು ಒಂದೆ ಕೇಳುವುದು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸಭೆ ಕರೆದಿದ್ದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದೇನೆ. ತಾವೇನು ಸಭೆ ಕರೆದಿದ್ದೀರಿ ಆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಎಂ.ಸಿ. ನಾಣಯ್ಯರವರು, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಎಂಬುದನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಈ ರಾಜ್ಯದಲ್ಲಿ ಇವತ್ತು ಸರ್ಕಾರಕ್ಕೆ ಮತ್ತು ನಮಗೆ ಒಳ್ಳೆಯ ಹೆಸರು ಬರಬೇಕಾದರೆ, ನಮ್ಮ ಮುಖ್ಯಮಂತ್ರಿಗಳಿಂದ ಹಿಡಿದು, ಮಂತ್ರಿಗಳಿಂದ ಹಿಡಿದು, ಶಾಸಕರಿಂದ ಹಿಡಿದು,

ಚುನಾಯಿತ ಪ್ರತಿನಿಧಿಯಿಂದ ಹಿಡಿದು, ಅಧಿಕಾರಿಗಳಿಂದ ಹಿಡಿದು ಪೂರ್ಣ ಅಧಿಕಾರವನ್ನು ಲೋಕಾಯುಕ್ತರವರಿಗೆ ಕೊಡಬೇಕೆನ್ನುವ ಭಾವನೆಯನ್ನು ನಮ್ಮ ಮಾಜಿ ಕಾನೂನು ಸಚಿವರಾಗಿದ್ದಂಥವರು ಹಾಗೂ ವಿರೋಧ ಪಕ್ಷದ ನಮ್ಮ ನಾಯಕರು ಹಾಗೂ ಜೆ.ಡಿ.ಎಸ್. ನಾಯಕರಾದ ಶ್ರೀ ಎಂ.ಸಿ. ನಾಣಯ್ಯನವರು ತಿಳಿಸಿದರು. ಅದೇ ರೀತಿಯಾಗಿ ಮಾನ್ಯ ಸಿದ್ದರಾಮಣ್ಣನವರು ಕೂಡ ಮಾನ್ಯ ನಾಣಯ್ಯನವರೇನು ಹೇಳಿದರು ಅದೇ ರೀತಿ ಅವರು ಹೇಳಿದರು. ನಾನು ಸಹಿತ ಇದೇ ಮಾತನ್ನು ಹೇಳಿದ್ದೇನೆ. ಇವತ್ತು ಲೋಕಾಯುಕ್ತರ ತನಿಖೆಗೆ ಏಕೆ ಹೆದರಿಕೊಳ್ಳಬೇಕು? ನಿಮ್ಮ ಮುಖ್ಯಮಂತ್ರಿಗಳೇ ನನ್ನ ಮೇಲೆ ಸುಮಾರು 20 ತನಿಖೆ ಮಾಡಿದ್ದಾರೆ ನಾನೇನು ಹೆದರಿಕೊಂಡಿದ್ದೇನೆಯೇ? ನಾನೇನು ಅವರ ಮನೆ ಬಾಗಿಲಿಗೆ ಅರ್ಜಿ ಹಿಡಿದುಕೊಂಡು ಹೋಗಿದ್ದೇನೆಯೇ ಕೇಳಿ. ನಾನು ಇವತ್ತಿನವರೆಗೆ ಯಾವುದಾದರೂ ತನಿಖೆಗೆ ಹೆದರಿದ್ದೇನೆಯೇ? ಮಾನ್ಯ ಸವದಿಯವರೇ ಇಲ್ಲಿಯೇ ಇದ್ದಾರೆ..ಇವರು ಕುಮಾರಣ್ಣನವರು ಗಳಸ್ಯ-ಕಂಠಸ್ಯ ಇದ್ದಂಗೆ. ಆದರೂ ನಾನೇನು ಹೇಳುವುದಕ್ಕೆ ಹೋಗಿಲ್ಲ. ಅವರು ತನಿಖೆ ಮಾಡಲಿ. ನಾನು ತಪ್ಪು ಮಾಡಿದ್ದರೆ ನನಗೆ ಶಿಕ್ಷೆ ಮಾಡಿ. ಏಕೆ ಹೆದರಬೇಕು? ನಿಮ್ಮ ಬಗ್ಗೆ ಅಭಿಮಾನವಿದೆ, ತಪ್ಪು ಮಾಡಿದ್ದರೆ ಶಿಕ್ಷೆ ಮಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ರೇವಣ್ಣನವರೆ ಒಂದು ನಿಮಿಷ. ನಾನು ಇದನ್ನು ಕ್ಲಿಯರ್ ಮಾಡುತ್ತೇನೆ. ಮಾನ್ಯ ರೇವಣ್ಣನವರು ನನ್ನ ಬಗ್ಗೆ ಏನು ಬೇಕಾದರೂ ತನಿಖೆ ಮಾಡಲಿ ಆ ತನಿಖೆಗೆ ನಾನು ಸಿದ್ದನಿದ್ದೇನೆ ಎಂದು ಹೇಳಿದರು. ತನಿಖೆ ಮಾಡಬೇಕಾದರೆ ನಾವು ಮೊದಲು ನೋಟೀಸ್ ಕೊಡಬೇಕಾಗುತ್ತದೆ. ಆ ನೋಟೀಸ್ ತೆಗೆದುಕೊಳ್ಳಲಿಕ್ಕೆ ಆರು ತಿಂಗಳು ಮಾಡಿದರು. ಅವರು ಆ ನೋಟೀಸ್ ತೆಗೆದುಕೊಳ್ಳಲಿಕ್ಕೂ ಕೂಡ ಭವಿಷ್ಯ ಕೇಳುತ್ತಾರಂತೆ. ಅವರು ಯಾವ ಸಂದರ್ಭದಲ್ಲಿ ಆ ನೋಟೀಸ್ ರಿಸೀವ್ ಮಾಡಿಕೊಳ್ಳಬೇಕೆಂದು ಆ ಭವಿಷ್ಯಕಾರ ಹೇಳಿದ ಮೇಲೆ ಆ ನೋಟೀಸ್ ತೆಗೆದುಕೊಳ್ಳುತ್ತಾರೆಂದು ಹೇಳಿ ಕಳುಹಿಸುತ್ತಾರೆ. ಏನು ಮಾಡುತ್ತೀರಿ?

ಶ್ರೀ ಹೆಚ್.ಸಿ. ಬಾಲಕೃಷ್ಣ: ಸವದಿಯವರು, ಸರಿಯಾದ ಅಡ್ರೆಸ್‌ಗೆ ಕೊಟ್ಟರೆ ಉತ್ತರ ಸಿಗುತ್ತದೆಂದು ನೋಟೀಸನ್ನು ಬೇಕೆಂದೆ ರಾಂಗ್ ಅಡ್ರೆಸ್‌ಗೆ ಕಳುಹಿಸಿದ್ದಾರೆ.

ಶ್ರೀ ಹೆಚ್.ಡಿ ರೇವಣ್ಣ : ಸವದಿಯವರೆ, ನಿಮಗೆ ವಿಷಯ ಗೊತ್ತಿಲ್ಲ. ಮೊನ್ನೆ ನಡೆದ ಬಿ.ಎ.ಸಿ. ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು. "ರೇವಣ್ಣ" ನಿನಗೆ ಯಾರು ಶಾಸ್ತ್ರ ಹೇಳುತ್ತಾರೋ ಅವರೇ ನನಗೆ ಶಾಸ್ತ್ರ ಹೇಳುವುದು ಎಂದರು. ಅದಕ್ಕಾಗಿ ಮುಖ್ಯಮಂತ್ರಿಗಳಿಗೆ ಕರೆಕ್ಟಾಗಿ ಶಾಸ್ತ್ರ ಹೇಳುತ್ತಾರೆ ಎಂದು ನಾನು ತಿಳಿದುಕೊಂಡು ಸವದಿಯವರ ನೋಟೀಸನ್ನು ತೆಗೆದುಕೊಳ್ಳಬೇಕಾದರೂ ಕೇಳಿ ತೆಗೆದುಕೊಳ್ಳಬೇಕಲ್ಲವೆ?

ನಿಮ್ಮ ನಾಯಕರು ಎಲ್ಲಿ ಶಾಸ್ತ್ರ ಕೇಳುತ್ತಾರೋ ನಾನೂ ಕೂಡ ಅಲ್ಲಿ ಶಾಸ್ತ್ರ ಕೇಳಿ ತೆಗೆದುಕೊಂಡಿರುವುದು. ಬೇರೆ ಕಡೆ ನಾನು ತೆಗೆದುಕೊಂಡಿಲ್ಲ. ಏಕೆಂದರೆ, ನಾನು ಇವತ್ತು ರಾಜಕಾರಣಕ್ಕೆ ಬರಬೇಕಾದರೆ ನಾನು ಹಿಂದಿನ ಬಾಗಿಲಿನಿಂದ ಬಂದಿಲ್ಲ ಸವದಿಯವರೆ, ಈ ರಾಜ್ಯದಲ್ಲಿ ಯಾರಾದರೊಬ್ಬ ರಾಜಕಾರಣಿ ಲೋಕಾಯುಕ್ತರ ತನಿಖೆ ಎದುರಿಸಿದ್ದರೆ ಅದು ದೇವೇಗೌಡರವರು. ಅವತ್ತು ನನ್ನ ಮೇಲೆ ಹೇಳಿದರು. ಈ ರಾಜ್ಯದಲ್ಲಿ ರೇವಣ್ಣ 24 ಸೈಟ್ ಮಾಡಿದ್ದಾನೆ, 24 ಸೈಟ್‌ಗೆ ಅವನೆ ದುಡ್ಡು ಕಟ್ಟಿದ್ದಾನೆ. ಒಂದೇ ಒಂದು ಈ ರಾಜ್ಯದಲ್ಲಿ ನಾನು ಸರ್ಕಾರಿ ಸೈಟ್ ತೆಗೆದುಕೊಂಡಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ: ಬೇರೆಯವರ ಹೆಸರಿನಲ್ಲಿ ಸೈಟ್ ಇಲ್ಲವೆ? ರೇವಣ್ಣನವರ ಹೆಸರಿನಲ್ಲಿ 24 ಸೈಟ್ ಎಲ್ಲಿಯೂ ಇಲ್ಲವೆ?

ಶ್ರೀ ಹೆಚ್.ಡಿ. ರೇವಣ್ಣ : ಬೇರೆ ಸೈಟ್ ನನ್ನ ಹೆಸರಿನಲ್ಲಿದ್ದರೆ. ಒಂದು ನಿಮಿಷ ಹೇಳುತ್ತೇನೆ. ಅದರ ಬಗ್ಗೆ ತನಿಖೆಯಾಯಿತಲ್ಲ ಏನಾಯಿತು?

(ಗೊಂದಲ)

ಶ್ರೀ ಲಕ್ಮಣ್ ಸಂಗಪ್ಪ ಸವದಿ:– ಮಾನ್ಯ ರೇವಣ್ಣರವರೆ, ತಾವೇಕೆ ಇಷ್ಟೊಂದು ಸೀರಿಯಸ್ ಆಗುತ್ತೀರಿ? ಒಂದು ಎಕರೆ ಜಮೀನಿನಲ್ಲಿ 24 ಸೈಟ್ ಮಾಡುವುದಕ್ಕೆ ಆಗುತ್ತದೆ. ಆದ್ದರಿಂದ, ಅದರ ಬಗ್ಗೆ ಏಕೆ ಅಷ್ಟೊಂದು ಸೀರಿಯಸ್ ಆಗಿ ತೆಗೆದುಕೊಳ್ಳುತ್ತೀರಿ? ಆ ವಿಷಯವನ್ನು ಬಿಡಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಲಕ್ಷ್ಮಣ್ ಸಂಗಪ್ಪ ಸವದಿಯವರು ಸಹಕಾರ ಇಲಾಖೆಯ ಸಚಿವರು ಆದ ಮೇಲೆ ಯಾವ್ಯಾವ ಸಹಕಾರ ಸಂಘಗಳಲ್ಲಿ ಎಷ್ಟೆಷ್ಟು ಸೈಟ್‌ಗಳಿವೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ನಾನೇನು ಹಿಂದೆ ಸಹಕಾರ ಇಲಾಖೆಯ ಮಂತ್ರಿಗಳಾಗಿಲ್ಲ. ನಾನು ಕೇವಲ ರಸ್ತೆ ಮತ್ತು ವಿದ್ಯುತ್ ಇಲಾಖೆ ಮಂತ್ರಿಯಾಗಿದ್ದು ನಾನು ಇದ್ದಂಥ ಸಂದರ್ಭದಲ್ಲಿ ಎಲ್ಲವನ್ನು ಕರೆಕ್ಟ್ ಆಗಿ ಇಟ್ಟಿದ್ದೆ. ನಾನೇನು 5 ಸಾವಿರ ಕೋಟಿ ರಾಪಾಯಿ ಸಾಲ ಮಾಡಿರಲಿಲ್ಲ. ಆದರೆ, ಇವತ್ತಿನದಿವಸ ಇರುವ 5 ವಿದ್ಯುತ್ ಕಂಪನಿಗಳಲ್ಲಿ, ಒಂದೊಂದು ಕಂಪನಿಯಲ್ಲಿ 5 ಸಾವಿರ ಕೋಟಿ ರೂಪಾಯಿ ಸಾಲ ಇಟ್ಟಿದ್ದಾರೆ. ಇದನ್ನು ನಾನು ಮಾಡುವುದಕ್ಕೆ ಹೋಗಿರಲಿಲ್ಲ. ನಾನು ಇದ್ದಂಥ ಸಂದರ್ಭದಲ್ಲಿ ಕರೆಕ್ಟ್ ಆಗಿ ಇಟ್ಟಿದ್ದೆ. ನನಗೆ ಹೌಸಿಂಗ್ ಮಿನಿಸ್ಟರ್ ಕೊಟ್ಟಿದ್ದರು. ಆ ಸಂದರ್ಭದಲ್ಲಿ ಹೌಸಿಂಗ್ ಮಿನಿಸ್ಟರ್ ಆಗಿ ಒಂದು ಸೈಟ್‌ನ್ನಾದರು ಮಂಜೂರಾತಿ ಮಾಡಿರುವ ಬಗ್ಗೆ ದಾಖಲೆ ತೋರಿಸಿದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ.

(ಗೊಂದಲ)

ಶ್ರೀ ಉಮೇಶ್ ವಿ.ಕತ್ತಿ:- ಮಾನ್ಯ ರೇವಣ್ಣನವರಿಗೆ ಅದೇ ಇಲಾಖೆಯಲ್ಲಿ ಮುಂದುವರಿಯಬೇಕೆಂದು ಆಸೆ ಇತ್ತು. ಆದರೆ, ಬೇಡವೆಂದು ಅವರೇ ಕೊಟ್ಟು ಹೋಗಿದ್ದಾರೆ. ಆದ್ದರಿಂದ, ಯಾರೇನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಲಕ್ಮಣ್ ಸಂಗಪ್ಪ ಸವದಿ:- ಮಾನ್ಯ ರೇವಣ್ಣನವರಿಗೆ ಶಿಕ್ಷಣ ಕಡಿಮೆ ಇದ್ದರೂ ಕೂಡ ಎಷ್ಟು ಚೆನ್ನಾಗಿ ತಿಳಿದುಕೊಂಡು ಬಂದು ಮಾತನಾಡುತ್ತಾರೆಂದು ಮಾನ್ಯ ಸಂಗಮೇಶ್‌ರವರು ಈಗತಾನೆ ನನಗೆ ಹೇಳಿದರು. ಆಗ ನಾನು ಸಂಗಮೇಶ್‌ಗೆ ಏನು ಹೇಳಿದೆ ಎಂದರೆ, ಅದೇ ಒಳ್ಳೆಯದಾಗಿದೆ, ಒಂದು ವೇಳೆ ಅವರೇನಾದರು ಎಲ್‌ಎಲ್‌ಬಿ ಏನಾದರು ಮಾಡಿಕೊಂಡಿದ್ದರೆ ಈ ರಾಜ್ಯದ ಕಥೆ ಮುಗಿದು ಹೋಗುತ್ತಿತ್ತೆಂದು ಹೇಳಿದೆ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಛೇರ್ಮನ್‌ರವರೆ, ಈಗ ಒಂದು ಕೆಲಸ ಮಾಡುತ್ತೇನೆ. ಮಾನ್ಯ ಸಹಕಾರ ಸಚಿವರ ಹತ್ತಿರ ಹೋಗಿ ಸ್ವಲ್ಪ ತರಬೇತಿಯನ್ನು ಪಡೆದುಕೊಳ್ಳುತ್ತೇನೆ. ಏಕೆಂದರೆ, ಜಯನಗರದಲ್ಲಿ ಅವರದು ತರಬೇತಿ ಕೇಂದ್ರ ಇದೆ. ಯಾವರೀತಿಯಾಗಿ ಮಾತನಾಡಬೇಕೆಂಬುದರ ಬಗ್ಗೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಮತ್ತು ಸಹಕಾರ ಮಂತ್ರಿಗಳ ಮೇಲೆ ಹೇಗೆ ಮಾತನಾಡಬೇಕೆಂಬುದರ ಬಗ್ಗೆ ಅಲ್ಲಿ ಬೇಕಾದರೆ 6 ತಿಂಗಳು ತರಬೇತಿ ಕೊಡಿಸಿ.

ಶ್ರೀ ಲಕ್ಮಣ್ ಸಂಗಪ್ಪ ಸವದಿ:- ಮಾನ್ಯ ಉದಾಸಿ ಸಾಹೇಬರಿಂದ ತರಬೇತಿ ತೆಗೆದುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಉದಾಸಿ ಸಾಹೇಬರು ಹಿರಿಯರಿದ್ದಾರೆ. ಅವರನ್ನು ಏಕೆ ತೆಗೆದುಕೊಳ್ಳುತ್ತೀರಿ ಬಿಡಿ. ಅವರು ಬಂದ ಮೇಲೆ ಲೋಕೋಪಯೋಗಿ ಇಲಾಖೆಯಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಬಿಲ್ ಪೆಂಡಿಂಗ್ ಇದೆ. ಇವತ್ತಿನದಿವಸ ಗುತ್ತಿಗೆದಾರರೆಲ್ಲಾ ವಿಷ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ, ಮಾನ್ಯ ಉದಾಸಿಯವರನ್ನು ಏಕೆ ಇಕ್ಕಟ್ಟಿಗೆ ಸಿಕ್ಕಿಸುವುದಕ್ಕೆ ಹೋಗಬೇಕು? ಏಕೆಂದರೆ ಅವರನ್ನು ಗಪ್‌ಚಿಪ್ ಮಾಡಿಟ್ಟಿದ್ದಾರೆ.

ಛೇರ್ಮನ್:- ಮಾನ್ಯ ರೇವಣ್ಣರವರೆ, ತಾವು ವಿಷಯಕ್ಕೆ ಬನ್ನಿ.

ಶ್ರೀ ಹೆಚ್.ಡಿ. ರೇವಣ್ಣ:- ಅವರು ಮಧ್ಯದಲ್ಲಿ ಮಾತನಾಡುವುದಕ್ಕೆ ಬಂದಾಗ ಇವೆಲ್ಲವನ್ನು ಹೇಳಬೇಕಾಗುತ್ತದೆ. ಮಾನ್ಯ ಉದಾಸಿಯವರು ಹಿರಿಯ ಮನುಷ್ಯರಾಗಿದ್ದಾರೆ. ಅವರ ಇಲಾಖೆಯಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಪೆಂಡಿಂಗ್ ಬಿಲ್ ಇದೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಮೇಡಮ್‌ರವರು ಸಚಿವರಾಗಿದ್ದಂಥ ಸಂದರ್ಭದಲ್ಲಿ ನಮಗೆ 50 ಲಕ್ಷ ರೂಪಾಯಿ ಬರುತ್ತಿತ್ತು. ಆದರೆ, ಈಗ ಮಾನ್ಯ ಜಗದೀಶ್‌ಶೆಟ್ಟರ್‌ರವರು ಈ ಇಲಾಖೆಯ ಮಂತ್ರಿಯಾದ ಮೇಲೆ ಅದನ್ನು ಕಿತ್ತು ಹಾಕಿದ್ದಾರೆ. ಇದರ ಬಗ್ಗೆ ಅವರೇ

ಹೇಳಲಿ. ಏಕೆಂದರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮಂತ್ರಿಯಾಗಿ 6 ತಿಂಗಳಾಯಿತು. ಮೇಡಮ್‌ರವರು ಇದ್ದಾಗ 50 ಲಕ್ಷ ರೂಪಾಯಿ ಬರುತ್ತಿತ್ತು. ಇದರಿಂದ ಹಳ್ಳಿಗಳ ಕಡೆ ಓಡಾಡುವುದಕ್ಕೆ ಒಂದೊಂದು ರಸ್ತೆ ಮಾಡಿಸಬಹುದಾಗಿತ್ತು. ಮಾನ್ಯ ಜಗದೀಶ್ ಶೆಟ್ಟರ್‌ರವರನ್ನು ಬ್ರೇಕ್ ಹಾಕಬೇಕೆಂಬ ಉದ್ದೇಶದಿಂದ ಈ ರೀತಿಯಾಗಿ ಮಾಡಿದ್ದಾರೆಂಬುದು ನನಗೆ ಗೊತ್ತಿದೆ. ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಛೇರ್ಮನ್‌ರವರೆ, ಮಧ್ಯದಲ್ಲಿ ಈ ರೀತಿಯಾಗಿ interfere ಮಾಡಿದರೆ ನಾನೇನು ಮಾಡಲಿ. ಅದಕ್ಕೆಲ್ಲ ನಾನು ಉತ್ತರ ಕೊಡಬೇಕಲ್ಲವೆ?

ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ರೇವಣ್ಣರವರೆ, ತಾವು ಸತ್ಯ ಹೇಳಬೇಕು. ನಿಮಗೆ ಯಾರೂ ಕೂಡ interfere ಮಾಡುವುದಿಲ್ಲ. ನೀವೇ ಒಬ್ಬೊಬ್ಬರನ್ನು ಕರೆಯುತ್ತಿದ್ದೀರಿ. ಗ್ರಾಮೀಣಾಭಿವೃದ್ಧಿ ಸಚಿವರು, ಕಾನೂನು ಸಚಿವರು, ಲಕ್ಷ್ಮಣ ಸವದಿ ಈ ರೀತಿಯಾಗಿ ಒಬ್ಬೊಬ್ಬರನ್ನೆ ತಾವು ಕರೆಯುತ್ತಿದ್ದೀರಿ. ಅಂದರೆ, ನಿಮಗೆ interference ಬೇಕೆಂದು ಅನಿಸುತ್ತಿದೆ. ಏಕೆಂದರೆ, ಹೇಳುವುದನ್ನೆಲ್ಲಾ ಹೇಳಿ ಬಿಟ್ಟಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಕಾನೂನು ಸಚಿವರೆ, ಒಂದು ವಿಷಯ ಹೇಳುತ್ತೇನೆ ದಯವಿಟ್ಟು ಕೇಳಿ ಸ್ವಾಮಿ. ಸಭಾನಾಯಕರಾದ ಮಾನ್ಯ ಮುಖ್ಯ ಮಂತ್ರಿಯವರು ದೇವರು ಕುಳಿತ ಹಾಗೆ ಕುಳಿತುಕೊಂಡಿದ್ದಾರೆ. ಆದ್ದರಿಂದ, ನೀವೇಕೆ ತಲೆ ಕೆಡಿಸಿಕೊಳ್ಳುತ್ತೀರಿ? ಇವತ್ತು ಬೆಳಿಗ್ಗೆ ವಿಧಾನ ಪರಿಷತ್‌ನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹೇಳಿರುವ ಮಾಹಿತಿಯನ್ನು ನಾನು ತರಿಸಿದ್ದೇನೆ. ವಿಧಾನ ಪರಿಷತ್‌ನಲ್ಲಿ ಹೇಳಿಕೆ ಕೊಟ್ಟಿರುವ ಬಗ್ಗೆ ನಾವು ಮಾನ್ಯ ಮುಖ್ಯ ಮಂತ್ರಿಯವರನ್ನು ಅಪ್ರಿಷಿಯೆಟ್ ಮಾಡಬೇಕಾಗುತ್ತದೆ. 20 ತಿಂಗಳವರೆಗೆ ಅವರು ಸ್ವಲ್ಪ ಮೃದುವಾಗಿದ್ದರು. ಈಗ ಕಠಿಣ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕೆ ಮುಂದಾಗಿದ್ದಾರೆ. ನೆನ್ನೆ ದಿವಸ ಅವರ ಪಕ್ಷದ ಅಧ್ಯಕ್ಷರ ಜೊತೆ ಲೋಕಾಯುಕ್ತರ ಹತ್ತಿರ ಹೋಗಿ ಲೋಕಾಯುಕ್ತರು ರಾಜೀನಾಮೆ ವಾಪಸ್ಸು ತೆಗೆದುಕೊಳ್ಳತಕ್ಕಂಥದರಲ್ಲಿ ಇವರು ಯಶಸ್ವಿಯಾದರು. ಮತ್ತೆ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಂಡಿರುವುದನ್ನು ರಾಜ್ಯಪಾಲರು ತಿಳಿಸಿದ ವಿಷಯವನ್ನು ಮಾನ್ಯ ಅಧ್ಯಕ್ಷರು ಸದನದಲ್ಲಿ ತಿಳಿಸಿದ್ದಾರೆ. ಇದರಲ್ಲಿ ಕೂಡ ಮಾನ್ಯ ಮುಖ್ಯಮಂತ್ರಿಯವರು ಯಶಸ್ವಿಯಾಗಿದ್ದಾರೆ. ಲೋಕಾಯುಕ್ತರಿಗೆ ಅಧಿಕಾರ ಕೊಡಬೇಕೆಂಬುದರ ಬಗ್ಗೆ ಇವತ್ತು ಬೆಳಿಗ್ಗೆ ಸಭೆ ಕರೆದಿದ್ದರು. ಈ ರೀತಿಯಾಗಿ ಯಾರು ಕರೆಯುತ್ತಾರೆ ಹೇಳಿ? ಇಷ್ಟೊಂದು ದಿಟ್ಟ ನಿಲುವು ಯಾರು ತೆಗೆದುಕೊಳ್ಳುತ್ತಾರೆ? ಈ ವಿಷಯದ ಬಗ್ಗೆ ಸಭೆ ಕರೆದು ಅಭಿಪ್ರಾಯವನ್ನು ತೆಗೆದುಕೊಂಡು ಈ ವಿಷಯವನ್ನು ಸಚಿವ ಸಂಪುಟ ಸಭೆಯ ಮುಂದಿಟ್ಟು ಮಂತ್ರಿಗಳೆಲ್ಲರಿಗೂ ಒಪ್ಪಿಸುತ್ತೇನೆಂದು ಹೇಳಿದ್ದಾರೆ. ಒಂದು ವೇಳೆ ಮತ್ತೆ ಏನಾದರು ಸನ್ನಿವೇಶ ಬಂದರೆ

ನಿಮ್ಮೆಲ್ಲರನ್ನು ಕರೆಯುತ್ತೇವೆಂದು ಹೇಳಿದ್ದಾರೆ. ಇವತ್ತಿನದಿವಸ ಏನಾಗಿದೆ ಎಂದರೆ, ಅಧಿಕಾರಿಗಳು ಕಳ್ಳರೆಂದು ಆಗಿದೆ. ಇವತ್ತಿನದಿವಸ ಅಧಿಕಾರಿಗಳು ಮಾತ್ರ ಕಳ್ಳರಾಗಿದ್ದಾರೆಯೇ? ರಾಜಕಾರಣಿಗಳ ಮೇಲೂ ಕೂಡ ಮಾಡಿ. ಒಬ್ಬ ಅಧಿಕಾರಿಯನ್ನು ಬಲಿ ಹಾಕುತ್ತೇವೆಂದು ಹೇಳುತ್ತಿದ್ದೀರಿ. ಇವತ್ತಿನದಿವಸ ರಾಜಕಾರಣಿ ಸರಿಯಾಗಿದ್ದರೆ ಅಧಿಕಾರಿ ಏಕೆ ಈ ರೀತಿ ಮಾಡುತ್ತಾರೆ? ನಾವು ಕರೆಕ್ಟ್ ಆಗಿದ್ದರೆ ಅಧಿಕಾರಿ ಏಕೆ ಕೆಟ್ಟ ಕೆಲಸ ಮಾಡುವುದಕ್ಕೆ ಹೋಗುತ್ತಾನೆ? ಆದ್ದರಿಂದ, ಮೊದಲು ನಮ್ಮನ್ನು ಬಲಿಯಾಕಿ ಆನಂತರ ಅಧಿಕಾರಿಯನ್ನು ನೀವು ಬಲಿ ಹಾಕಿ ಎಂದು ಹೇಳುತ್ತಿದ್ದೇನೆ. ಈ ವಿಷಯ ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯ ಮಂತ್ರಿಯವರು ಇವತ್ತು ಸಭೆ ಕರೆದಿದ್ದರು.

(ಈ ಹಂತದಲ್ಲಿ ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿಯವರು ಕುಳಿತುಕೊಂಡು ಮಾತನಾಡುತ್ತಿದ್ದರು)

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಸವದಿಯವರೆ ನಾನು ಹೇಳುವುದನ್ನು ಸ್ವಲ್ಪ ಕೇಳಿ. ನೀನು ಮಾನ್ಯ ಕುಮಾರಸ್ವಾಮಿಯವರ ಹತ್ತಿರ ಇದ್ದಾಗ ಚೆನ್ನಾಗಿ ಇದ್ದೆ. ಈಗ ಅಲ್ಲಿಗೆ ಹೋದ ಮೇಲೆ ಬದಲಾವಣೆಯಾಗಿದ್ದೀಯ. ಅವರು ಕುಮಾರಸ್ವಾಮಿಯವರಿಗೆ ರೈಟ್ ಹ್ಯಾಂಡ್ ಆಗಿದ್ದರು. ಆಗ ಯಾರ್‍ಯಾರು ಎಲ್ಲೆಲ್ಲಿದ್ದರೆಂದು ಗೊತ್ತಿದೆ. ಬೇಕಾದರೆ ಆ ವಿಷಯ ಹೇಳುತ್ತೇನೆ. ಮಾನ್ಯ ಸವದಿಯವರೆ, ನೀವು ನಮ್ಮ ಕಡೆ ಇದ್ದೀರೆಂದು ತಿಳಿದರೆ ನಿಮಗೆ ಪ್ರಮೋಷನ್ ಸಿಗುವುದಿಲ್ಲ. ಅಂದರೆ, ನಮ್ಮ ಹತ್ತಿರ ಚೆನ್ನಾಗಿದ್ದೀರೆಂದು ತಿಳಿದರೆ ನಾಳೆದಿವಸ ನಿಮ್ಮ ಮಂತ್ರಿಗಿರಿ ಹೋಗುತ್ತದೆ. ಆದ್ದರಿಂದ, ನೀವು ಹುಷಾರಾಗಿರಿ.

ಛೇರ್ಮನ್:– ಎಲ್ಲರನ್ನು ಮಾತನಾಡಿಸಬೇಕೆಂದು ತಾವು ತೀರ್ಮಾನ ಮಾಡಿದ್ದೀರಾ?

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಛೇರ್ಮನ್‌ರವರೆ, ಆಡಳಿತ ಪಕ್ಷದ ಸದಸ್ಯರಿಗೆ ನನ್ನ ಮೇಲೆ ಅಷ್ಟೊಂದು ಪ್ರೀತಿ ಇದೆ. ಆದ್ದರಿಂದ, ನಾನು ಏನು ಮಾಡುವುದಕ್ಕೆ ಆಗುತ್ತದೆ? ನಮ್ಮ ಮೇಲೆ ಅವರಿಗೆ ಪ್ರೀತಿ ಇರುವಾಗ ನಾವೇಕೆ ಅವರ ಮನಸ್ಸನ್ನು ನೋಯಿಸಬೇಕೆಂದು ಅವರಿಗೆ ಉತ್ತರ ಕೊಡುತ್ತಿದ್ದೇನೆ. ನನ್ನ ಮಾತನ್ನು ಡೀವಿಯೇಟ್ ಮಾಡಬೇಕೆಂಬುದು ಅವರ ಉದ್ದೇಶವಾಗಿದೆ. ತಲೆಕೆಡಿಸಿ ಚರ್ಚೆಯ ದಿಕ್ಕನ್ನು ಬದಲಾವಣೆ ಮಾಡಬೇಕೆಂಬ ಉದ್ದೇಶ ಇದೆಯೆನೋ ನನಗೆ ಗೊತ್ತಿಲ್ಲ. ಈಗ ಚರ್ಚೆಗೆ ಬರುತ್ತೇನೆ. ಸೆಂಟ್ರಲ್ ವಿಜಿಲೆನ್ಸ್ ಕಮಿಷನ್‌ಗೆ ಅವರು ಏನೇನು ಬರೆದಿದ್ದಾರೆಂಬ ಪೂರ್ಣ ಮಾಹಿತಿಯನ್ನು ನಾನು ಕೊಡುತ್ತೇನೆ. ಅದಿರು ಸಾಗಾಣಿಕೆ ವಿಷಯದ ಬಗ್ಗೆ ಹೇಳುವುದಾದರೆ, ಅದಿರು ಕಳ್ಳತನವಾಗಿರುವುದರ ಬಗ್ಗೆ ಪತ್ರ ಬರೆದಿರುವಂಥ ಮಾನ್ಯ ಸಚಿವರ ಷೇರು ಇದರಲ್ಲಿದೆ. ಅಂದರೆ, ಅದರಲ್ಲಿ ಇವರೂ ಕೂಡ ಪಾಲುದಾರರಿದ್ದಾರೆ. ಇವತ್ತು ಉದಾಹರಣೆಗೆ ಹೇಳುವುದಾದರೆ, ಈ

ರಾಜ್ಯದಲ್ಲಿ ಕಳ್ಳತನ ಮಾಡಿರುವ ಮಂತ್ರಿಗಳ ವಿಷಯ ಬೇರೆ, ಆದರೆ, ಷೇರ್‌ಹೋಲ್ಡರ್ಸ್ ಆಗಿರುವ ನಾಲ್ಕು ಜನ ಮಂತ್ರಿಗಳಿದ್ದಾರೆ. ಬೇಕಾದರೆ ಈ ವಿಷಯವನ್ನು ಸಮಯ ಬಂದಾಗ ಹೇಳುತ್ತೇನೆ. ಈಗ ಹೇಳುವುದಕ್ಕೆ ಬರುವುದಿಲ್ಲ. ಈಗ ಹೇಳುವುದಕ್ಕೆ ಹೋದರೆ ಏನಾಗುತ್ತದೆಂದರೆ, ಮಾನ್ಯ ಉಮೇಶ್ ಕತ್ತಿಯವರು ಆ ಕಡೆ ಗಲಾಟೆ ಮಾಡುವುದಕ್ಕೆ ಹೇಳುತ್ತಾರೆ. ಆದ್ದರಿಂದ, ಕೊನೆಯಲ್ಲಿ ಈ ವಿಷಯ ಹೇಳುತ್ತೇನೆ. ಏಕೆಂದರೆ, ಇದರಲ್ಲಿ ಯಾರ್ಯಾರು ಇದ್ದಾರೆಂಬ ಮಾಹಿತಿಯನ್ನು ಹೊರಗಡೆಯಿಂದ ದಾಖಲೆ ತರಿಸುತ್ತಿದ್ದೇನೆ.

ಛೇರ್ಮನ್:- ಮಾನ್ಯ ರೇವಣ್ಣರವರೆ, ತಾವು ವಿಷಯಕ್ಕೆ ಬನ್ನಿ.

ಶಿಪ್ಪಿಂಗ್ ಹೌಸ್, ಬೇಲೆಕೇರೆ ಹೆಸರುಗಳನ್ನು ಕೊಟ್ಟಿದ್ದಾರೆ. ಸುರಕ್ಷಿತವಾಗಿ ನೋಡಿಕೊಳ್ಳಲು ಹಸ್ತಾಂತರ ಮಾಡಿದ ಖನಿಜವನ್ನು ಲೋಕೋಪಯೋಗಿ ಇಲಾಖೆಯ ಸಿಬ್ಬಂದಿ ಜೊತೆಗೆ ಬಂದರು ಇಲಾಖೆ ಸಿಬ್ಬಂದಿಯವರು ಶಾಮೀಲಾಗಿ ಹೊರದೇಶಕ್ಕೆ ಸಾಗಿಸಿರುವ ವಿಷಯಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಸರ್ಕಾರ ಈ ಸಂದರ್ಭದಲ್ಲಿ ತೆಗೆದುಕೊಂಡ ಕ್ರಮಗಳೇನು? ಗಮನಕ್ಕೆ ಬಂದಿರುತ್ತದೆಂದು ಸರ್ಕಾರ ಉತ್ತರ ನೀಡಿದೆ. ಈ ವಿಷಯ ಗಮನಕ್ಕೆ ಬಂಧಿರುತ್ತದೆ. ಈ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾರವಾರ ವಿಭಾಗ, ಕಾರವಾರ, ಕಛೇರಿ ಪತ್ರ ಸಂಖ್ಯೆ:13/2009-10 Chief Vigilance Commissioner, ದೆಹಲಿ, ಹಾಗೂ ದಿನಾಂಕ: 08/06/2010 ರಂದು ಬರೆದಂಥ ಪತ್ರದಲ್ಲಿ ಪೊಲೀಸ್ ಮಹಾನಿರ್ದೇಶಕರು, ಬೆಂಗಳೂರು ಇವರಿಗೆ ಸೂಕ್ತ ಕ್ರಮ ಜರುಗಿಸಲು ಕೋರಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ನಿರೀಕ್ಷಕರು, ಅಂಕೋಲ ಪೊಲೀಸ್ ಸ್ಟೇಷನ್, ಅಂಕೋಲ, ಮಹೇಶ್ ಇಲಿಯಾಸ್, ಬೇಲೆಕೇರೆ ಬಂದರು ಇವರ ವಿರುದ್ಧ IFC 406ರ ಅಡಿಯಲ್ಲಿ ಪ್ರಥಮ ವರ್ತಮಾನ ವರದಿ 189 ದಿನಾಂಕ: 08/06/2010 ರಂದು ಪ್ರಕರಣ ದಾಖಲು ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ.

ಚೀಫ್ ವಿಜಿಲೆನ್ಸ್ ಕಮಿಷನರ್‌ಗೆ ಕಳುಹಿಸಿರುವಂಥದ್ದನ್ನು ಮೇಲ್ಮನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿರುತ್ತಾರೆ. ಕೇಂದ್ರ ಸರ್ಕಾರಕ್ಕೆ ವಿಜಿಲೆನ್ಸ್ ಕಮಿಷನರ್ ಕಳುಹಿಸಿರುವಂಥ ಎಲ್ಲಾ ಮಾಹಿತಿಗಳನ್ನು ನಾನು ಸಭೆಯ ಗಮನಕ್ಕೆ ತಂದಿರುತ್ತೇನೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆಗಿರುವ ನಷ್ಟವೆಷ್ಟು? ಬೇಲಿಕೇರಿ ಬಂದರಿನಲ್ಲಿ ಜಪ್ತಿ ಮಾಡಿರುವ ಅದಿರು ಮೌಲ್ಯ ಅಂದಾಜಿನಂತೆ 241 ಕೋಟಿ ರೂ.ಗಳು ನಷ್ಟವಾಗಬಹುದಾಗಿ ಕಬ್ಬಿಣ ಅದಿರು ವಿಚಾರವಾಗಿ ಮೇಲ್ಮನೆಯಲ್ಲಿ ಉತ್ತರ ಕೊಡುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಗಣಿ ಇಲಾಖೆಗೆ 241 ಕೋಟಿ ರೂ.ಗಳು ನಷ್ಟವಾಗಿದೆ ಎಂದು

ಹೇಳಿದ್ದಾರೆ. ಅಲ್ಲಿ ಏನು ನಡೆದಿದೆ ಎನ್ನುವಂಥದ್ದು ಹೇಳುತ್ತೇನೆ. ಮಾನ್ಯ ನಾಣ್ಯನವರ ಪ್ರಶ್ನೆಗೆ ಏನು ಹೇಳಿದ್ದಾರೆಂದರೆ, ಕಳೆದ 10 ವರ್ಷಗಳಿಂದ ಕಳ್ಳತನದ ರೂಪದಲ್ಲಿ ಹೋಗುತ್ತಿದೆ ಅದಕ್ಕೆ ಸಮಗ್ರವಾದ ತನಿಖೆಯನ್ನು ಮಾಡುತ್ತೇನೆಂದು ಹೇಳಿದರು. ಒಂದು ವಿಷಯವನ್ನು ಅವರ ಗಮನಕ್ಕೆ ತರುವುದೇನೆಂದರೆ, 2009ನೇ ನವೆಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳವರೆಗೆ ಒಟ್ಟು 4 ತಿಂಗಳಲ್ಲಿ ಕಬ್ಬಿಣ ಅದಿರು ಎಷ್ಟು ರಫ್ತಾಗಿದೆ ಎಂದರೆ, 57,17,370 ಟನ್ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಕಬ್ಬಿಣ ಅದಿರನ್ನು ರಫ್ತು ಮಾಡಿರುವುದಕ್ಕೆ official permit ಕೊಟ್ಟಿರುವುದು ಎಷ್ಟು? 57 ಲಕ್ಷ ಟನ್ ಹೊರಗಡೆಯ ದೇಶಕ್ಕೆ ಹೋಗಿರುತ್ತದೆ. ಇದರಲ್ಲಿ ಎಷ್ಟು ಟನ್‌ಗೆ ಪರ್ಮಿಟ್ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಸಭೆಗೆ ತಿಳಿಸಬೇಕೆಂದು ಕೇಳುತ್ತೇನೆ. 57 ಲಕ್ಷ ಟನ್‌ನಲ್ಲಿ ಬರೀ 21 ಲಕ್ಷ ಟನ್ ಅದಿರಿಗೆ ಪರ್ಮಿಟ್ ಕೊಟ್ಟಿರುವುದು. ಉಳಿದ 35 ಲಕ್ಷ ಟನ್ ಅದಿರಿಗೆ ಪರ್ಮಿಟ್ ಇಲ್ಲ. 7 ಚೆಕ್‌ಪೋಸ್ಟ್‌ನಲ್ಲಿ ಏನೂ ಮಾಹಿತಿ ಇಲ್ಲವೆ? ಇದನ್ನು ನಾನು ಹೇಳುತ್ತಿರುವುದಲ್ಲ ನಿಮ್ಮ ಇಲಾಖೆಯವರು ಕೊಟ್ಟಿರುವ ಮಾಹಿತಿ ಇದೆ. 2003 ರಿಂದ ಯಾವ್ಯಾವ ವರ್ಷ ಏನೇನಾಗಿದೆ ಎನ್ನುವುದನ್ನು ಎಲ್ಲಾ ಹೇಳಬೇಕು. ಇದೆಲ್ಲಾ ನೋಡಿದರೆ ಸುಮಾರು 70 ಸಾವಿರ ಕೋಟಿ ರೂ.ಗಳಿಂದ ಒಂದು ಲಕ್ಷ ಕೋಟಿ ರೂ.ಗಳವರೆಗೆ ಎಂದು ರೆಕಾರ್ಡಿನಲ್ಲಿದೆ. ಈ ರಾಜ್ಯದಿಂದ ಲೂಟಿ ಆಗಿದೆ ಎನ್ನುವುದನ್ನು ನಾನು ಹೇಳುವುದಲ್ಲ, ಇದನ್ನು ಮೇಲ್ಮನೆಯಲ್ಲಿ ನಮ್ಮ ಮಾನ್ಯ ಸದಸ್ಯರು ಕೇಳಿರುವುದಕ್ಕೆ ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಉತ್ತರವನ್ನು ಕೊಟ್ಟಿರುತ್ತಾರೆ. ಏನು ಉತ್ತರ ಕೊಟ್ಟಿದ್ದಾರೆನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ಮಾನ್ಯ ಎಸ್.ಆರ್. ಪಾಟೀಲರು, ಯಾರ್‍ಯಾರ ಕಾಲದಲ್ಲಿ ಏನೇನಾಗಿದೆ. ಎನ್ನುವುದರ ಬಗ್ಗೆ ತನಿಖೆಯಾಗಲಿ ಈ ಕೇಸ್‌ನ್ನು CBI ಗೆ entrust ಮಾಡಿ ಎಂದು ಕೇಳಿರುತ್ತಾರೆ. ಏನು ಕಾಂಗ್ರೆಸ್ ಸರ್ಕಾರ ಇರಬಹುದು, ಜೆಡಿ(ಎಸ್)ಇರಬಹುದು, ಅಥವಾ ಸಮ್ಮಿಶ್ರ ಸರ್ಕಾರ ಇರಬಹುದು ಅಥವಾ ಈ ಸರ್ಕಾರ ಇರಬಹುದು. ಈ ರಾಜ್ಯದ ಸಂಪತ್ತು ಲೂಟಿ ಆಗಬಾರದು. ಮಾನ್ಯ ಪಾಟೀಲ್‌ರು ಪ್ರಶ್ನೆ ಕೇಳಿದ್ದಾರೆ. ಮುಖ್ಯಮಂತ್ರಿಗಳು ಅದಕ್ಕೆ Yes, Iam ready ಮೇಲ್ಮನೆಯಲ್ಲಿ ನಾನು CBI ಗೆ ಕೊಡುವುದಕ್ಕೆ ರೆಡಿ ಇದ್ದೇನೆಂದು ಹೇಳಿದ್ದಾರೆ, ಇದನ್ನು ನಾನು ಹೇಳಿದ್ದು ಅಲ್ಲ. ಮುಖ್ಯಮಂತ್ರಿಗಳೇ ಮೇಲ್ಮನೆಯಲ್ಲಿ ನಾನು CBI ಗೆ ಕೊಡುವುದಕ್ಕೆ ರೆಡಿ ಇದ್ದೇನೆ ಎನ್ನುವುದನ್ನು ಹೇಳಿರುವುದು ರೆಕಾರ್ಡಿನಲ್ಲಿದೆ ಸ್ವಾಮಿ ಬೇಕಾದರೆ ಅದನ್ನು ತೆಗೆದುಕೊಳ್ಳಿ. ಇದನ್ನು ಚರ್ಚೆ ಮಾಡುವುದೇ ಬೇಡ. ನಾನು ಚರ್ಚೆಯನ್ನು ಮುಂದುವರೆಸುವುದಿಲ್ಲ, ಇನ್ನುಳಿದ ಕಡತಗಳನ್ನು ಒಂದೊಂದಾಗಿ ತೆಗೆಯುತ್ತೇನೆ. CBI ಗೆ ವಹಿಸಿಬಿಡಿ, 10

ವರ್ಷದಿಂದ ಯಾರ್ಯಾರು ಇದ್ದಾರೆ, ಎಲ್ಲರೂ ಜೈಲಿಗೆ ಹೋಗಲಿ. ಈ ರಾಜ್ಯದಲ್ಲಿ ಲೂಟಿ ಮಾಡಿರುವವರು ಯಾರ್ಯಾರಿದ್ದಾರೆ. 250 ಕೋಟಿ ರೂ.ಗಳ ಜೊತೆಯಲ್ಲಿ ಮಾನ್ಯ ಕುಮಾರಸ್ವಾಮಿಯವರ 150 ಕೋಟಿ ರೂ.ಗಳೆಲ್ಲವನ್ನು ಸೇರಿಸಿ ಕೊಟ್ಟುಬಿಡಿ ಎಂದು ನಾನು ಹೇಳುವುದು. ಮೊನ್ನೆಯಿಂದ ಮಾನ್ಯ ಮುಖ್ಯಮಂತ್ರಿಗಳು ಒಂದು ದಿಟ್ಟ ನಿಲುವು ತೆಗೆದುಕೊಂಡಿರುವುದರಿಂದ ಅವರನ್ನು ಅಪ್ರಿಸಿಯೇಟ್ ಮಾಡಬೇಕು. ಒಳ್ಳೆಯ ಟೈಮ್‌ನಲ್ಲಿ ಅಸೆಂಬ್ಲಿಯನ್ನು ಕರೆದಿರುತ್ತಾರೆ. ನಮ್ಮ ಮೊದಲಿನ ಅಧ್ಯಕ್ಷರಿಗೆ ಟೈಮ್ ಗೊತ್ತಿರಲಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರು ಇದ್ದಾಗ ರಾಹುಕಾಲದಲ್ಲಿ ಸದನವನ್ನು ಇಡುವವರು. ಆಗ ಗಲಾಟೆ ಹತ್ತಿಕೊಳ್ಳುವುದು. ಮುಖ್ಯಮಂತ್ರಿಗಳು ಮತ್ತು ಈಗಿನ ಅಧ್ಯಕ್ಷರು ಟೈಮ್ ಕೇಳಿ ಇಟ್ಟಿರುವುದರಿಂದ ಏನು ಗಲಾಟೆ ಆಗುವುದಿಲ್ಲ. ಮೇಲ್ಮನೆಯ ಸದಸ್ಯರಾದ ಶ್ರೀ ಪಾಟೀಲ್‌ರವರಿಗೆ ಆಶ್ವಾಸನೆ ಕೊಟ್ಟಿದ್ದಾರೆ. ನಾನು CBI ಗೆ ರೆಡಿ ಇದ್ದೇನೆ ಎಂದು ಹೇಳಿದ ಮೇಲೆ ಇಲ್ಲಿ ಏಕೆ ಚರ್ಚೆ ಮಾಡಬೇಕು. ಯಾರ್ಯಾರ ಕಾಲದಲ್ಲಿ ಏನೇನಾಗಿದೆ ಈಚೇಗೆ ಬರಲಿ. ರಾಜಕಾರಣಿಗಳು ಯಾರ್ಯಾರು ಈ ರಾಜ್ಯದಲ್ಲಿ ಮೋಸ ಮಾಡಿದ್ದಾರೆ ಅದು ಹೊರಗಡೆ ಬರಲಿ. ಕುಮಾರಸ್ವಾಮಿಯವರು ಇದ್ದರೂ ಜೈಲಿಗೆ ಹೋಗಲಿ, ನಾನು ಇದ್ದರೂ ಜೈಲಿಗೆ ಹೋಗಲಿ. ಒಬ್ಬ ಸಾಮಾನ್ಯ ನೌಕರನ ಮೇಲೆ ನೀವು ಲೋಕಾಯುಕ್ತರಿಗೆ ಅಧಿಕಾರ ಕೊಡುತ್ತೇವೆಂದು ಹೇಳುತ್ತೀರಿ. ರೇವಣ್ಣ ತಪ್ಪು ಮಾಡಿದರೆ ನೀವು ಏಕೆ ಜೈಲಿಗೆ ಹಾಕಬಾರದು. ನೀವು ಏಕೆ ಹೆದರುತ್ತೀರಿ. ಮುಖ್ಯಮಂತ್ರಿಗಳಿಗೆ ಈ ಸದನದ ಮೂಲಕ ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಮುಂದೆ ಅಪ್ಪಚ್ಚು ರಂಜನ್‌ರವರ ಹತ್ತಿರ ನಾವು ಅರ್ಜಿ ಹಿಡಿದುಕೊಂಡು ಬರಬೇಕಾಗುತ್ತದೆ, ಏಕೆಂದರೆ ಅವರು ಅರ್ಜಿ ಸಮಿತಿ ಅಧ್ಯಕ್ಷರಾಗಿದ್ದಾರೆ.

ಶ್ರೀ ದಿನೇಶ್ ಗುಂಡೂರಾವ್: ಮುಖ್ಯಮಂತ್ರಿಗಳು CBI ಗೆ ವಹಿಸುತ್ತೇನೆಂದು ಹೇಳಿ ಬಿಟ್ಟರೆ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಹೇಳಿರುವುದನ್ನು ಇಲ್ಲಾ ಎಂದು ಮಾನ್ಯ ಮುಖ್ಯಮಂತ್ರಿಗಳು ಅಂದು ಬಿಟ್ಟರೆ ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ, ನಾನು ಈ ಸದನದಲ್ಲಿ 5 ನಿಮಿಷ ಇರುವುದಿಲ್ಲ. ಈ ಕಡೆಯಿಂದಲೇ ಹೊರಗಡೆ ಹೋಗಿ ಬಿಡುತ್ತೇನೆ. ಮುಖ್ಯಮಂತ್ರಿಗಳು ಇದಕ್ಕೆ stick-on ಆಗಬೇಕು. ನಾನು ಮರೆತುಬಿಟ್ಟು ಮೇಲ್ಮನೆಯಲ್ಲಿ ಹೇಳಿದ್ದೇನೆಂದರೆ ವಾಪಸ್ಸು ತೆಗೆದುಕೊಳ್ಳಲಿ ನಾನು ಬೇಡವೆಂದು ಹೇಳುವುದಿಲ್ಲ. ಸದನದಲ್ಲಿ ವರದಿಗಾರರು ಬರೆಯುತ್ತಾರಲ್ಲಾ ರೆಕಾರ್ಡ್ ಮಾಡಿದವರು ಸುಳ್ಳು ಹೇಳಿದ್ದಾರೆಯೋ ಏನೋ ನನಗೆ ಗೊತ್ತಿಲ್ಲ. ಎರಡರಲ್ಲಿ ಒಂದು ತೀರ್ಮಾನವಾಗಬೇಕು.

ಏಕೆಂದರೆ ಇದರ ಬಗ್ಗೆಯೇ ಒಂದು ತನಿಖೆಯಾಗಬೇಕಾಗುತ್ತದೆ. ಏಕೆಂದರೆ ಮೇಲ್ಮನೆಯಲ್ಲಿ ಮುಖ್ಯಮಂತ್ರಿಗಳು ನಾನು CBI ಗೆ ಕೊಡುವುದಕ್ಕೆ ರೆಡಿ ಇದ್ದೇನೆ. ಏಕೆಂದರೆ ಒಬ್ಬ ಕಾಂಗ್ರೆಸ್ ಸದಸ್ಯರಿಗೆ, ಏಕೆಂದರೆ ಕಾಂಗ್ರೆಸ್ ಪಕ್ಷ ಈ ರಾಜ್ಯದಲ್ಲಿ 50 ವರ್ಷಗಳಿಂದ ಅಧಿಕಾರದಲ್ಲಿದೆ. ಕೆಲವು ಸದಸ್ಯರು ಹೇಳುತ್ತಿದ್ದರು, ಕಾಂಗ್ರೆಸ್ 50 ವರ್ಷ ಲೂಟಿ ಹೊಡೆದಿದೆ ಎಂದು ಹಿರಿಯ ಸದಸ್ಯರು ಹೇಳುತ್ತಿದ್ದರು. ನಮ್ಮ ಸೋಮಲಿಂಗಪ್ಪನವರು 50 ವರ್ಷದಿಂದ ಲೂಟಿ ಆಗಿದೆ ಎಂದು ಹೇಳಿದರು. ಆದರೆ ಲೂಟಿ ಮಾಡಿದವರು CBI ಗೆ ರೆಡಿ ಇದ್ದೇವೆಂದು ಹೇಳುತ್ತಾರಲ್ಲಾ? ನಾನಲ್ಲ, ಮಾನ್ಯ ಎಸ್.ಆರ್. ಪಾಟೀಲ್‌ರು ಪ್ರಶ್ನೆ ಕೇಳಿ ಯಾರ್ಯಾರ ಕಾಲದಲ್ಲಿ ಅವ್ಯವಹಾರವಾಗಿದೆ ಎಲ್ಲರ ಮೇಲೆ ತನಿಖೆಯಾಗಲಿ, entrust the case to CBI ಅಂದಾಗ, ಅದಕ್ಕೆ ಮುಖ್ಯಮಂತ್ರಿಗಳು I am ready ಇದ್ದೇನೆಂದು ಹೇಳಿದ್ದು ದಾಖಲೆ ಇದೆ. ಮುಖ್ಯಮಂತ್ರಿಗಳು ರಾಜ್ಯದ ಜನತೆಯ ಮುಂದೆ ಅಥವಾ ಎರಡು ಸದನದ ಮುಂದೆ ನಾನು ಹೇಳುವಾಗ ತಪ್ಪು ಹೇಳಿದ್ದೇನೆ. ಅದನ್ನು CBI ಗೆ ಕೊಡುವುದಕ್ಕಾಗುವುದಿಲ್ಲ, ಅಲ್ಲಿರುವ ಅಧಿಕಾರಿಗಳು ಇನ್ನು ಸ್ವಲ್ಪ ದಿನ ಮುಂದುವರೆಯಲಿ. ಆದ್ದರಿಂದ ಇದನ್ನು ನಾನು CBI ಗೆ ಕೊಡುವುದಕ್ಕಾಗುವುದಿಲ್ಲವೆಂದರೆ ನನ್ನದೇನು ಅಭ್ಯಂತರ ಇಲ್ಲ. ಅಧಿಕಾರ ಇರಲಿ ಹೋಗಲಿ ಎಂದು ಒಂದು ಮಾತನ್ನು ಹೇಳಿದ್ದಾರೆ. ಈ ಅಧಿಕಾರ ಯಾರಿಗೂ ಶಾಶ್ವತವಲ್ಲ. ಅಧಿಕಾರ ಎರಡು–ಮೂರು ದಿವಸ ಇರಬಹುದು ನಾನು ಯಾವುದಕ್ಕೂ ಹೆದರುವುದಿಲ್ಲ. ನಾನು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇನೆಂದು ಈ ರಾಜ್ಯದ ಜನತೆಗೆ ಒಂದು ಸಂದೇಶವನ್ನು ಕಳಹಿಸಿದ್ದಾರೆ. ಕಾಂಗ್ರೆಸ್ ಪಕ್ಷದವರು ಈ 60 ವರ್ಷದಲ್ಲಿ ಏನು ಲೂಟಿ ಮಾಡಿದ್ದಾರೆ ಅವರು CBI ಗೆ ರೆಡಿ ಇದ್ದಾರೆ. (ಗೊಂದಲ) ಕಾಂಗ್ರೆಸ್‌ನವರು ಲೂಟಿ ಮಾಡಿದ್ದಾರೆಂದು ನಾನು ಹೇಳುವುದಕ್ಕೆ ಬಂದಿರುವುದಿಲ್ಲ.

ಶ್ರೀ ಉಮೇಶ್ ವಿ.ಕತ್ತಿ: ಒಂದು ನಿಮಿಷ. (ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಉಮೇಶ್ ವಿ. ಕತ್ತಿಯವರು ನಮ್ಮ ಹಳೆಯ ಗುರುಗಳು. ಏಕೆಂದರೆ ಅವರು ನಮ್ಮ ಪಾರ್ಟಿಯಲ್ಲಿ ಇದ್ದವರು. ಅವರು ಕುಮಾರಸ್ವಾಮಿಯವರ ಜೊತೆಯಲ್ಲಿ ಚೆನ್ನಾಗಿದ್ದಾರೆಂದು ಅವರನ್ನು ರಾಮನಗರ ಜಿಲ್ಲೆಗೆ ಉಸ್ತುವಾರಿ ಸಚಿವರನ್ನಾಗಿ ಹಾಕಿದ್ದಾರೆ. ನಿಮ್ಮಿಬ್ಬರ understanding ರಾಜಕಾರಣ ಏನಿದೆ ಎಂದು ನನಗೆ ಗೊತ್ತಿಲ್ಲ. ರಾಮನಗರ ಜಿಲ್ಲೆಗೆ In charge ಹಾಕಿಸಿಕೊಳ್ಳಬೇಕಾದರೆ ಉಮೇಶ್ ವಿ. ಕತ್ತಿಯವರದ್ದು ಏನೋ ಇದೆ. ನಿಮ್ಮ ಒಳಗುಟ್ಟು ಏನು ಇದೆ ಎಂಬುದು ನನಗೆ ಗೊತ್ತಿದೆ. ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಕುಮಾರಸ್ವಾಮಿಯವರಿಗೆ ಉಮೇಶ್ ಕತ್ತಿಯವರ ಒಳಗುಟ್ಟು ಏನು ಗೊತ್ತಿಲ್ಲ. ಸವದಿಯವರದು ಮತ್ತು ಕುಮಾರಸ್ವಾಮಿಯವರದು ಒಳಗುಟ್ಟು ಗೊತ್ತಿಲ್ಲ.

ಇವರೆಲ್ಲರೂ ಆತ್ಮೀಯರಾಗಿದ್ದಾರೆ.

ಛೇರ್ಮನ್: ಮಾನ್ಯ ರೇವಣ್ಣನವರೆ, ನಿಮಗೆ ಎಲ್ಲರದು ಪರಿಚಯವಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಛೇರ್ಮನ್‌ರವರೆ, ತಾವು ಹಿರಿಯರಿದ್ದೀರಿ, ನಿಮ್ಮ ಮುಂದೆ ಇಷ್ಟೇ ಹೇಳುತ್ತೇನೆ. ನೀವು ನಮ್ಮ ತಂದೆಯ ಸಮಾನರಾಗಿದ್ದೀರಿ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ನಾನು ಸಿಬಿಐಗೆ ವಹಿಸುವುದಕ್ಕೆ ರೆಡಿ ಇದ್ದೇನೆ ಎಂದು ಹೇಳಿದ್ದಾರೆ. ಸಿಬಿಐಗೆ ಕೊಡುವುದಕ್ಕೆ ಅವರು ರೆಡಿ ಇದ್ದಾರೆಯೇ ಇಲ್ಲವೋ ಎಂಬುದರ ಬಗ್ಗೆ ಅವರು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ತಿಳಿಸಲಿ ಎಂದು ಹೇಳುತ್ತೇನೆ. ಅದನ್ನು ಬೇಕಾದರೆ ನಾನು ತಮಗೆ ಕಳುಹಿಸಿಕೊಡುತ್ತೇನೆ. ಏಕೆಂದರೆ ಒಂದು ಕಾಪಿಯನ್ನು ತೆಗೆದುಕೊಳ್ಳಬೇಕಾದರೆ ನಾವು ಕಷ್ಟಪಟ್ಟು ತೆಗೆದುಕೊಂಡು ಬಂದಿರುತ್ತೇವೆ. ಇದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಯಾರ್‍ಯಾರ ಕಾಲದಲ್ಲಿ ಉದಾಹರಣೆಗೆ ಹೇಳುವುದಾದರೆ, ಈ ರಾಜ್ಯದ ಅದಿರು ಎಷ್ಟೇಷು ವರ್ಷವಾರು ಎಷ್ಟೆಷ್ಟು ಹೋಗಿದೆ, ಯಾರ್‍ಯಾರ ಕಾಲದಲ್ಲಿ ಹೋಗಿದೆ, ಈ ರಾಜ್ಯದಲ್ಲಿ ಎಷ್ಟು ಕಾರ್ಖಾನೆಗಳಿಗೆ ಉಪಯೋಗಿಸಿದ್ದಾರೆ, ಹೊರದೇಶಕ್ಕೆ ಎಷ್ಟು ಹೋಗಿದೆ, ಯಾವಯಾವ ದೇಶಕ್ಕೆ ಹೋಗಿದೆ ಅಥವಾ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಕಳುಹಿಸುವಾಗ ರಫ್ತು ಮಾಡುವಂತಹ ಸಂದರ್ಭದಲ್ಲಿ ಅಲ್ಲಿ ಕೆಲವು ಕಡೆ ಮಾರುಕಟ್ಟೆಯ ಬೆಲೆಯಲ್ಲಿ ವ್ಯತ್ಯಾಸ ವಿದ್ದಾಗ ಟ್ಯಾಕ್ಸ್‌ನ್ನು ಕಡಿಮೆ ಮಾಡಬೇಕೆಂದು ಹೇಳಿ ಕೆಲವು ಕಡೆ ಬೇರೆಬೇರೆ ಬೇನಾಮಿ ಹೆಸರಿನಲ್ಲಿ ಕಳುಹಿಸಿರುವುದು ಇರಬಹುದು, ಅದು ಏನಿದೆಯೋ ಗೊತ್ತಿಲ್ಲ. ಏಕೆಂದರೆ ನಮಗೆ ಅದಿರಿನ ಬಗ್ಗೆ ಅಷ್ಟು ದೀರ್ಘವಾಗಿ ಗೊತ್ತಿಲ್ಲ. ಮಾನ್ಯ ಜಯಚಂದ್ರರವರು ದೀರ್ಘವಾಗಿ ಪುಸ್ತಕವನ್ನು ಮಾಡಿಕೊಂಡು ಎಲ್ಲಾ ಮಾಹಿತಿಯನ್ನು ತೆಗೆದುಕೊಂಡು ಬಂದಿದ್ದರು. ಆದರೆ ಅವರಿಗೆ ದೆಹಲಿಯಿಂದ ಮೊನ್ನೆ ಬರುವಾಗ ಅವರು ಕೋಟನ್ನು ಹಾಕಿಕೊಂಡು ಬಂದಿದ್ದರು. ಆದರೆ ಏನಾಯಿತೆಂದರೆ ಅವರಿಗೆ ಮಾತನಾಡುವುದಕ್ಕೆ ಬಿಡಲಿಲ್ಲ. ಅವರು ಮಾತನಾಡುವಾಗ interference ಮಾಡಿದರು. ಈಗ ಏನು ನಮ್ಮ ಯಜಮಾನರು ಕುಳಿತ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿದೆ. ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಯಜಮಾನರಿಗೆ ಒಂದು ನಮಸ್ಕಾರವನ್ನು ಸಲ್ಲಿಸುತ್ತೇನೆ. ನಾನು ಹೇಳುವುದು ಇವತ್ತು ಒಬ್ಬ DFO ಕಾರವಾರ ಬಂದರಿನಲ್ಲಿ 2500 ಕೋಟಿ ರೂಪಾಯಿಗಳ ಅದಿರನ್ನು ಅವ್ಯವಹಾರವಾಗಿ ಸಂಗ್ರಹ ಮಾಡಿರುವ ಬಗ್ಗೆ ಅವರು ಹೇಳಿಕೆಯನ್ನು ಕೊಡಬೇಕಾದರೆ ಲೋಕಾಯುಕ್ತರು ಅದನ್ನು ಪ್ರೆಸ್‌ಗೆ leak out ಮಾಡಿದ್ದಾರೆ. ಇದು 2500 ಕೋಟಿ ರೂಪಾಯಿಗಳ ಅವ್ಯವಹಾರ. ಒಂದಲ್ಲ ಮತ್ತು ಎರಡಲ್ಲ. ಇಲ್ಲಿ

ಕೆಲವು ಉದಾಹರಣೆಗಳು ಇವೆ. ಏನೇನು ಪ್ರಕರಣಗಳ ಮೇಲೆ ಯಾರ್ಯಾರು ರಾಜೀನಾಮೆಯನ್ನು ಕೊಟ್ಟಿದ್ದಾರೆಂಬ ಬಗ್ಗೆ ಉದಾಹರಣೆಗಳು ಇವೆ. ಇವತ್ತು ಒಂದು ಕಡೆ ಮುಖ್ಯಮಂತ್ರಿಗಳೇ ಮೇಲ್ಮನೆಯಲ್ಲಿ 250 ಕೋಟಿ ರೂಪಾಯಿಗಳ ಅದಿರು ಕಳ್ಳತನವಾಗಿದೆ ಎಂದು ಹೇಳುತ್ತಾರೆ. ಇನ್ನೊಂದು ಕಡೆಯಲ್ಲಿ ಸಿಬಿಐಗೆ ರೆಡಿ ಇದ್ದೇನೆಂದು ಹೇಳುತ್ತಾರೆ. ಇನ್ನೊಂದು ಕಡೆಯಲ್ಲಿ 2500 ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ. ಇನ್ನೊಂದು ಕಡೆ Chief vigilance Commission ರವರಿಗೆ ಕಳುಹಿಸಿರುವುದು ನಿಜವೆಂದು ಹೇಳುತ್ತಾರೆ. ಇವೆಲ್ಲವೂ ಇರುವಾಗ ಈ ಪ್ರಕರಣದ ಬಗ್ಗೆ ಮಾನ್ಯ ಸಭಾಧ್ಯಕ್ಷರೇ ಏನು ಮಾಡಬೇಕೆಂಬುದರ ಬಗ್ಗೆ ತಾವು ಹೇಳಬೇಕು. ಈ ಸರ್ಕಾರವು ಅಧಿಕಾರಕ್ಕೆ ಬರುವಾಗ ಈ ರಾಜ್ಯದ 6 ಕೋಟಿ ಜನತೆಗೆ ಕೊಟ್ಟಂತಹ ವಚನ ಏನು? ಮೊನ್ನೆ ಹೇಳಿದ್ದೀರಿ, ಭ್ರಷ್ಟಾಚಾರವನ್ನು ತೊಲಗಿಸುತ್ತೇವೆ ಎಂದು ಈ ರಾಜ್ಯದ ಜನತೆಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಮುಂದಿನ ಬಡಜನರ ಕಲ್ಯಾಣಕೊಸ್ಕರ ಏನೇನು ಮಾಡುತ್ತೇವೆ, ಯಾರ್ಯಾರ ಕಲ್ಯಾಣವನ್ನು ಮಾಡುತ್ತೇವೆ. ಇವತ್ತು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತೇವೆಂದು ಪ್ರಣಾಳಿಕೆಯಲ್ಲಿ ಅವರೇ ಹೇಳಿದ್ದಾರೆ. ನಾನು ಅದಕ್ಕೆ ಮಾತ್ರ ಸೀಮಿತವಾಗಿದ್ದೇನೆ. ಇವತ್ತು ಮುಖ್ಯಮಂತ್ರಿಗಳೆ, ಮೇಲ್ಮನೆಗೆ 250 ಕೋಟಿ ರೂಪಾಯಿಗಳು ನನ್ನ ಇಲಾಖೆಯಲ್ಲಿ ಕಳ್ಳತನವಾಗಿದೆ ಎಂದು ಅವರು ಮೇಲ್ಮನೆಯಲ್ಲಿ commit ಆದ ಮೇಲೆ ನಾವು ಇನ್ನೇನು ಹೇಳಬೇಕು. ಕೇವಲ ಬೇಲೆಕೇರಿಯ ಒಂದು ಐಟಂ, DFO, Lokayuktha ಒಂದು ಐಟಂನಲ್ಲಿ 250 ಕೋಟಿ ರೂಪಾಯಿಗಳು ನಾನು agree ಅನ್ನುವುದನ್ನು ಯಾರು ನಾನಲ್ಲ, ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದರ ಬಗ್ಗೆ ಆ ಸದನದ ದಾಖಲೆಗಳ ಕಡತದಲ್ಲಿದೆ. ಅದರ ಕೆಳಗಡೆಯಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ನನ್ನ ಇಲಾಖೆಯಲ್ಲಿ 241 ಕೋಟಿ ರೂಪಾಯಿಗಳು ಹೋಗಿರುವುದು ನಿಜ. ಆ ಪತ್ರದಲ್ಲಿಯೂ ಸಹ ಅವರೇ ಹೇಳಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ, ಈ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ಇವರು ತಮ್ಮ ಪತ್ರದ ಸಂಖ್ಯೆ: DFH:13/02/2009ರಂದು 02/06/2010 ರಂದು Chief Vigilance Commissioner, Delhi ಇವರಿಗೆ ತನಿಖೆ ಮಾಡಿ ಎಂದು ಬರೆದಿರುವಂತಹ ಒಬ್ಬ ಅಧಿಕಾರಿ ಅಂದರೆ ಮುಖ್ಯಮಂತ್ರಿಗಳು ಕೂಡ ಇದಕ್ಕೆ agree ಆಗಿದ್ದಾರೆ. ಒಂದು ಕಡೆ ಸದನದಲ್ಲಿ ನಾನು ಸಿಬಿಐಗೆ ರೆಡಿ ಇದ್ದೇನೆ, I am ready. ಇನ್ನೊಂದು ಕಡೆ Chief Vigilance Commissioner ರವರಿಗೆ ಕಳುಹಿಸಿರುವುದಕ್ಕೆ ರೆಡಿ, ಇನ್ನೊಂದು ಕಡೆಯಲ್ಲಿ 241 ಕೋಟಿ ರೂಪಾಯಿಗಳು, ಅವರೆ sign ಹಾಕಿದ್ದಾರೆ. ಇದು ತನಿಖೆ ಆಗಬೇಕಲ್ಲಾ ಸ್ವಾಮಿ. ಈ ಬಗ್ಗೆ ತನಿಖೆ ಆಗಬೇಕಾದರೆ

ಏನು ಮಾಡಬೇಕೆಂದು ನೀವೇ ಹೇಳಿ. ರಾಜ್ಯದ ಜನತೆಯು ನಮ್ಮ ಮೇಲೆ ಆಪಾದನೆ ಮಾಡುತ್ತಾರೆ. ಅಯಿತಪ್ಪಾ ಸವದಿಯವರು ನೋಟಿಸ್ ಕೊಡಲಿಲ್ಲ 6 ತಿಂಗಳಿಂದ ರೇವಣ್ಣನವರು ನೋಟಿಸ್ ತೆಗೆದುಕೊಳ್ಳದೆಯೇ ಒದ್ದಾಡಿಸುತ್ತಿದ್ದಾರೆ. ಅವರೇ ರೈಟಿಂಗ್‌ನಲ್ಲಿ 250 ಕೋಟಿ ರೂಪಾಯಿಗಳು ಎಂದು ಕೊಟ್ಟಿದ್ದಾರಲ್ಲಾ. ಏನಾದರೂ ಇದ್ದರೆ ರಾಜೀನಾಮೆಯನ್ನು ಕೊಟ್ಟು ಹೋಗಲಿ, ಒಂದು, ಈ ರಾಜ್ಯದ ಜನತೆ ಮತ್ತೆ ಅವರ ಅಧಿಕಾರಿಯವರು Chief Vigilance Commissioner ರವರಿಗೆ ಬರೆದಿರುವುದು, ಲೋಕಾಯುಕ್ತರಿಗೆ ಮಾನ್ಯ ಅದ್ವಾನಿ ಸಾಹೇಬರು ಫೋನ್ ಮಾಡಿ ನೀವು ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿರುವುದು, ಮತ್ತೆ ನಮ್ಮ ರಾಜ್ಯದ ಅಧ್ಯಕ್ಷರು, ಕಾನೂನು ಸಚಿವರು, ಕಾನೂನಿನ ಬಗ್ಗೆ ಅವರಿಗೆ ಒಳ್ಳೆಯ ತಿಳುವಳಿಕೆ ಇದೆ. ಆದರೆ ಕೆಲವು ಟೈಮ್‌ನಲ್ಲಿ ಅವರು ಟ್ರಾಕ್‌ನ್ನು ಚೆಂಜ್ ಮಾಡಿಬಿಡುತ್ತಾರೆ. ಅವರಿಗೆ ಏನಾಗುತ್ತದೆ ಎಂದರೆ ಪಕ್ಕದಲ್ಲಿ ಇಲ್ಲಾ ಅಪ್ಪಾ ನಾನು ಏನು ಮಾಡಲಿ ಕೊನೆಗೆ ವಿಧಿಯಿಲ್ಲ ಪರಿಸ್ಥಿತಿ ಹಾಗೆ ಇರುತ್ತದೆ, ಕಾನೂನು ಸಚಿವರನ್ನು ದೂರುವುದಕ್ಕೆ ಆಗುವುದಿಲ್ಲ. 250 ಕೋಟಿ ರೂಪಾಯಿಗಳದು ಏನಾಯಿತು, ಯಾವಯಾವ ಫೈಲ್‌ದು ಏನಾಯಿತು, ಆ ಬಗ್ಗೆ ಹುಡುಕಬೇಕೆಂದು ಕಾನೂನು ಸಚಿವರು, study ಮಾಡುತ್ತಿದ್ದಾರೆ. ಒಂದು ಐಟಂನಲ್ಲಿ ನೇರವಾಗಿ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಒಪ್ಪಿಕೊಂಡಾಗ ನನ್ನ ಇಲಾಖೆಯಲ್ಲಿ 250 ಕೋಟಿ ರೂಪಾಯಿಗಳ ಹಗರಣವಾಗಿದೆ, ನಾನು ಈ ಬಗ್ಗೆ Chief Vigilance Commissioner ಗೆ ನಮ್ಮ ಅಧಿಕಾರಿಯವರು ಪತ್ರವನ್ನು ಬರೆದಿದ್ದಾರೆ. 250 ಕೋಟಿ ರೂಪಾಯಿಗಳ ಕಳ್ಳತನವಾಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ, ಅಂದರೆ ಅವರು ಖಾತೆಯನ್ನು ನಿರ್ವಹಣೆ ಮಾಡುವುದರಲ್ಲಿ ವಿಫಲರಾಗಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಅವರು ಅಧಿಕಾರವನ್ನು ಸ್ವೀಕಾರ ಮಾಡುವಾಗ ರಾಜ್ಯದ ಜನತೆಯ ಮುಂದೆ ನಾನು ನ್ಯಾಯಬದ್ಧವಾಗಿ ಕೆಲಸವನ್ನು ಮಾಡುತ್ತೇನೆಂದು ರಾಜ್ಯಪಾಲರ ಮುಂದೆ oath ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಅವರು ಹೇಳಿದ್ದಾರೆ. ಅದರ ವಿರುದ್ಧ ಅವರ ಇಲಾಖೆಯಲ್ಲಿ 250 ಕೋಟಿ ರೂಪಾಯಿಗಳ ಕಳ್ಳತನದ ಆರೋಪ ಮಾಡಿದಾಗ ಏನಾದರೂ ಗೌರವ ಇದ್ದರೆ ಕೂಡಲೇ ಅವರು ರಾಜೀನಾಮೆಯನ್ನು ಕೊಟ್ಟು I am ready to face the enduiry, ಅದಕ್ಕೆ ಏತಕ್ಕಾಗಿ ಹೆದರಬೇಕೆಂದು ಹೇಳಬೇಕು. ಕುರ್ಚಿಗೋಸ್ಕರ ನಾನು ಅಂಟಿಕೊಳ್ಳುವುದಿಲ್ಲ. ಇದ್ದರೂ ನಾನು ಎರಡು ದಿನ ಇರುತ್ತೇನೆ. ಇದು ನನ್ನ ದಿಟ್ಟ ನಿಲುವು ... ಮೊನ್ನೆ ಕೆಲವನ್ನು ಹೇಳಿದ್ದಾರೆ, ಅದು ಒಂದು ಕಡೆಯಾಗುತ್ತದೆ. ಇವತ್ತು ಯಾವಯಾವ ಕಡೆಯಿಂದ ಈ ರಾಜ್ಯದಲ್ಲಿ ಯಾವ ಯಾವ ಕಡೆಯಿಂದ ಈ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಿಂದ

ಅದಿರು ಎಷ್ಟೇಷ್ಟು ಅದಿರು ಹೋಗಿದೆ. ಇದು ಯಾವಯಾವ ದೇಶಕ್ಕೆ ಹೋಗಿದೆ, ಮತ್ತೆ ಕೆಲವು ಕಡೆ ನಮ್ಮ ರಾಜ್ಯದಿಂದ ಅದಿರನ್ನು ತೆಗೆದುಕೊಂಡು ಹೋಗಿ ಅದು ಹೊರರಾಜ್ಯದ ಬಂದರಿನಲ್ಲಿದೆ. ಹೊರರಾಜ್ಯದ ಬಂದರಿನಿಂದ ಕೃಷ್ಣಪಟ್ಟಂನಿಂದ ಸುಮಾರು ಕೋಟ್ಯಾಂತರ ರೂಪಾಯಿಗಳ ಅದಿರು ಇವತ್ತು ಹೊರದೇಶಕ್ಕೆ ಹೋಗಿದೆ. ಇದನ್ನು ತನಿಖೆ ಮಾಡುವವರು ಯಾರು? ಇವತ್ತು ಹೊರರಾಜ್ಯದಿಂದ ಹೋಗಿದೆ, ಇನ್ನೊಂದು ಕಡೆ ಹೊರದೇಶಕ್ಕೆ ಹೋಗಿದೆ, ಒಂದು ಕಡೆ ಈ ರಾಜ್ಯದಿಂದ ಹೊರಗಡೆಗೆ ಅದಿರು ಹೋಗಿದೆ. ಇದನ್ನು ತನಿಖೆ ಮಾಡುವವರು ಯಾರು? ನಿಮ್ಮ ಕೈಯಲ್ಲಿ ತನಿಖೆ ಮಾಡುವುದಿದ್ದರೆ ಮಾಡಿ, ಆಮೇಲೆ ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳ ಕೈಕೆಳಗೆ ಎಲ್ಲಾ ಅಧಿಕಾರಿಗಳು ಇದ್ದಾರೆ. ಸಿಓಡಿ ಇಲಾಖೆಯು ಮುಖ್ಯಮಂತ್ರಿಗಳ ಕೈಕೆಳಗೆ ಇದೆ, ನಿಮ್ಮ Inspector General of police ನಿಮ್ಮ ಕೈಕೆಳಗೆ ಇದೆ. ತನಿಖೆಯು ನ್ಯಾಯಯುತವಾಗಿ ನಡೆಯುತ್ತದೆಯೇ? ನೀವೇ ಮೇಲ್ಮನೆಯಲ್ಲಿ 250 ಕೋಟಿ ರೂಪಾಯಿಗಳ ಬಗ್ಗೆ ನೀವೇ ಒಪ್ಪಿಕೊಂಡ ಮೇಲೆ ಈ ಬಗ್ಗೆ ತನಿಖೆಯನ್ನು ಮುಖ್ಯಮಂತ್ರಿಗಳ ಮೇಲೆ ಮಾಡುವುದಕ್ಕಾಗುತ್ತದೆಯೇ? ಬೇರೆಯವರು ಯಾರಾದರೂ ಮಂತ್ರಿಗಳಾದರು ಪರವಾಗಿಲ್ಲ. ಮುಖ್ಯಮಂತ್ರಿಗಳ ಮೇಲೆ ಈ ಅಧಿಕಾರಗಳು ತನಿಖೆಯನ್ನು ಮಾಡುವುದರಲ್ಲಿ ಆಗುತ್ತದೆಯೆ ಅಥವಾ ಇಲ್ಲವೇ? ಹೊರದೇಶಕ್ಕೆ ಹೋಗಿರುವ ಬಗ್ಗೆ ಇವರು ತನಿಖೆ ಮಾಡುವುದಕ್ಕಾಗುತ್ತದೆಯೆ? ಅದಿರು ಆಂಧ್ರದಿಂದ ಹೋಗಿರಬಹುದು, ಅಥವಾ ಬೇರೆಬೇರೆ ದೇಶಕ್ಕೆ, ಚೈನಾ ದೇಶಕ್ಕೆ ಹೋಗಿರಬಹುದು. ಚೈನಾ ದೇಶಕ್ಕೆ ಎಷ್ಟು ಹೋಗಿದೆ, ಮಲೇಷಿಯಾ ದೇಶಕ್ಕೆ ಎಷ್ಟು ಹೋಗಿದೆ, ಇಂಡೋನೇಷಿಯಾಕ್ಕೆ ಎಷ್ಟು ಹೋಗಿದೆ, ಇವತ್ತು ಏನಾಗಿದೆ ಎಂದರೆ ಈ ಬಗ್ಗೆ ನಾನು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಅಧಿಕಾರಿಗಳು ಈ ಕಳ್ಳತನದಲ್ಲಿ ಭಾಗಿಯಾಗಿದ್ದಾರೆಂದ ಮೇಲೆ ಯಾವ ಉದ್ದೇಶಕ್ಕಾಗಿ ಅವರು ಹಿಂದೇಟು ಹಾಕುತ್ತಿದ್ದಾರೆ, ಇದಕ್ಕೆ ಏನು ಕಾರಣ? ಇದರ ಉದ್ದೇಶವೇನು? ಇವತ್ತು ಹೊರದೇಶಕ್ಕೆ ಕೋಟ್ಯಾಂತರ ರೂಪಾಯಿಗಳ ಅದಿರು ಕಳ್ಳತನವಾಗಿದೆ ಎಂದರೆ ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳೆ ಹೇಳುತ್ತಾರೆ. ಅಧಿಕಾರಿಗಳು ಹೇಳುತ್ತಾರೆ, ಲೋಕಾಯುಕ್ತದವರು ಹೇಳುತ್ತಾರೆ. ನಾನು ಇದನ್ನು ಸಹಿಸುವುದಕ್ಕಾಗುತ್ತಿಲ್ಲವೆಂದು ಲೋಕಾಯುಕ್ತರು ರಾಜೀನಾಮೆಯನ್ನು ಕೊಟ್ಟು ಹೊರಗಡೆ ಬರುತ್ತಿದ್ದೇನೆಂದು ಹೇಳಿದ್ದಾರೆ. ನಾವೇನಾದರು ಸುಳ್ಳು ಹೇಳುತ್ತೇನೆಂದರೆ ಮೊನ್ನೆ ದಿನಾಂಕ: Deputy conservator of forest ರವರು ದಿನಾಂಕ: 29/06/2010ರಂದು ಹೈಕೋರ್ಟ್ ಮುಂದೆ ಒಂದು ಅಫಿಡವಿಟ್ ಹಾಕಿದ್ದಾರೆ, ಈ ರಾಜ್ಯದಲ್ಲಿ ಸುಮಾರು 35 ಲಕ್ಷ ಟನ್ ಕಬ್ಬಿಣದ

ಅದಿರು ನಾಪತ್ತೆ ಆಗಿರುವ ಬಗ್ಗೆ ಅವರು ಹೈಕೋರ್ಟ್ ಮುಂದೆ ಕೇಸ್ ಹಾಕಿದ್ದಾರೆ. ಏಕೆಂದರೆ ದಿನಾಂಕ: 29/06/2010ರಲ್ಲಿ ಕಳೆದ ಒಂದು ವಾರದ ಹಿಂದೆ. ಒಂದು ಕಡೆ ನ್ಯಾಯಾಲಯದಲ್ಲಿ ಅರ್ಜಿ ಹಾಕಿದ್ದಾರೆ, ಇನ್ನೊಂದು ಕಡೆ ಅವರ ಅಧಿಕಾರಿ Central vigilance Commission ಮುಂದೆ ಕಳುಹಿಸುತ್ತಾರೆ. ಇವತ್ತು ಉದಾಹರಣೆಗೆ ಹೇಳುವುದಾದರೆ ಶ್ರೀ ಕೃಷ್ಣ ಪಾಲೇಮಾರ್ ರವರ ವಿಶೇಷ ಅಧಿಕಾರಿ ಪಾತ್ರ ಏನು? ಇದರಲ್ಲಿ ಯಾವ್ಯಾವ ಮಂತ್ರಿಗಳು involve ಆಗಿದ್ದಾರೆ. ಈ ಮಂತ್ರಿಗಳು involve ಆಗಿದ್ದರೆ, ಮಂತ್ರಿಗಳು, ಮುಖ್ಯಮಂತ್ರಿಗಳು ಎಲ್ಲಾ ಇದರಲ್ಲಿ ಇದ್ದಾಗ ರಾಜ್ಯದ ಕೈಯಲ್ಲಿ ತನಿಖೆ ನಡೆಸಲಿಕ್ಕೆ ಆಗುತ್ತದೆಯೇ ಹೇಳಿ ದಯಮಾಡಿ ಮಾನ್ಯ ಅಧ್ಯಕ್ಷರೇ, ಏಕೆಂದರೆ ಸಭೆ ನಡೆಸಿದ್ದು ನಿಜ, ಆ ಸಭೆ ಎಲ್ಲಿ ನಡೆಸಿದರು ಸ್ವಾಮಿ, ಆ ಮಂತ್ರಿಗಳ ರಾಜೀನಾಮೆ ಇಷ್ಟೊತ್ತಿಗೆ ತೆಗೆದುಕೊಳ್ಳಬೇಕಾಗಿತ್ತು. 250 ಕೋಟಿ ರೂಪಾಯಿಗಳ ಅದಿರು ಹೋದ ಮೇಲೆ ಜಿಲ್ಲಾಧಿಕಾರಿ ಕಛೇರಿಯಲ್ಲಿ ಸಭೆ ಕರೆಯಬೇಕಾಗಿತ್ತು. ಯಾವುದೋ ಹೋಟೆಲ್‌ನಲ್ಲಿ 11 ಜನ ಗಣಿ ಮಾಫಿಯಾರವರನ್ನು ಕೂರಿಸಿಕೊಂಡು, ಕಳ್ಳತನ ಮಾಡಿರುವವವರನ್ನು ಕೂರಿಸಿಕೊಂಡು ಸಭೆ ನಡೆಸಿರುವುದು ನಿಜ ಎಂದು ಅವರು ಒಪ್ಪಿಕೊಂಡಿದ್ದಾರೆ. ಹಾಗಾಗಿ ಸಭೆ ನಡೆಸಿದ್ದು ನಿಜ, ಅಲ್ಲಿ 11 ಜನ ಯಾರ್‍ಯಾರು ಇದ್ದರು ಎಂಬುದನ್ನು clear cut ಆಗಿ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬರೆದುಬಿಟ್ಟಿದ್ದಾರೆ. 11 ಜನ ಯಾವ್ಯಾವ ಕಂಪೆನಿಯವರು ಎಂದು ಹೇಳಬೇಕೆಂದರೆ ಅದನ್ನು ಹೇಳುತ್ತೇನೆ, ಏಕೆಂದರೆ ಈ ಬಗ್ಗೆ ಕಾರವಾರದವರು ಸುನಿಲ್ ಹೆಗಡೆ, ದಿವಾಕರ್ ಶೆಟ್ಟಿಯವರನ್ನು ಕೇಳಿದರೆ ಗೊತ್ತಾಗುತ್ತದೆ. 11 ಕಂಪನಿಯವರ ಹೆಸರು ಬೇಕಿದ್ದರೆ ಹೇಳಿಬಿಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ರೇವಣ್ಣನವರೆ, ಮಾನ್ಯ ಅಧ್ಯಕ್ಷರೇ, ಈ ಮನೆಯಲ್ಲಿರುವ ನಮ್ಮೆಲ್ಲಾ ಗೌರವಾನ್ವಿತ ಸದಸ್ಯರು ಗಂಭೀರವಾಗಿ ಯೋಚನೆ ಮಾಡಬೇಕು. ನಾನು ಬಹಳ ಹಿಂದೆ ಹೋಗುವುದಿಲ್ಲ. ನಾನು ಅಂಕಿಅಂಶಗಳು ಕೊಡುವಂತಹ ಕಾಲಕ್ಕೆ 2003-04 ರಿಂದ ಇವತ್ತಿನವರೆಗೆ ಎಷ್ಟು ಅನುಮತಿ ನೀಡಿತ್ತು? ಎಷ್ಟು ರಫ್ತು ಆಗಿದೆ? ಎಷ್ಟು ವ್ಯತ್ಯಾಸ ಇದೆ? ಅದೇ ರೀತಿ ಕೇವಲ ಬೇಲೆಕೇರಿ, ಕಾರವಾರ ಮಾತ್ರವಲ್ಲ, ಚೆನ್ನೈ, ಗೋವಾ, ಕೃಷ್ಣಪಟ್ನಂ, ಕಾಕಿನಾಡ, ವೈದ್ಯಾರ್ ಇಲ್ಲಿಗೆ ಎಷ್ಟೆಷ್ಟು ಅದಿರು ಹೋಗಿದೆ ಎಂಬ ಬಗ್ಗೆ 2003-04 ರಿಂದ ಮಾಹಿತಿಯನ್ನು ನಾನು ಕೊಡುತ್ತೇನೆ. ನನಗೆ ಅರ್ಥವಾಗದಿರುವ ಸಂಗತಿ ಎಂದರೆ ಶ್ರೀ ಧರ್ಮಸಿಂಗ್‌ರವರು ಇದ್ದ ಕಾಲದಲ್ಲಿ ಕೇಂದ್ರ ಸರ್ಕಾರದ ಅನುಮತಿ ಸಿಕ್ಕಿದ್ದು 37 ಟನ್‌ಗೆ. ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಅಧಿಕಾರದಲ್ಲಿದ್ದಾಗ ಅನುಮತಿ ಸಿಕ್ಕಿದ್ದು 22 ಟನ್‌ಗೆ, ಘನತೆವೆತ್ತ

ರಾಜ್ಯಪಾಲರು ಇದ್ದಾಗ ಸಿಕ್ಕಿರುವುದು 14 ಟನ್‌ಗೆ, ನಾನು ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ ಸಿಕ್ಕಿದ್ದು ಎರಡು ಟನ್‌ಗೆ. ನಾನೇನು ಹೇಳಲಿಕ್ಕೆ ಹೊರಟಿದ್ದೇನೆಂದರೆ ಈ ಎಲ್ಲಾ ವ್ಯಕ್ತಿಗಳು ಪ್ರಭಾವಿ ವ್ಯಕ್ತಿಗಳು. ಈ ಮನೆಯಲ್ಲಿ ಬಂಧು, ಬಳಗ, ಸಂಬಂಧದಲ್ಲಿರುವಂಥವರು, ಆ ತರಹ ಪ್ರಭಾವಿ ವ್ಯಕ್ತಿಗಳು ಈ ರೀತಿಯ ದಂಧೆ, ಈ ಕೆಲಸ ಮಾಡುತ್ತಿದ್ದಾರೆ. ಈ ಕೆಲಸ ಅವತ್ತಿನಿಂದ ಇವತ್ತಿನವರೆಗೆ ನಡೆದುಕೊಂಡು ಬಂದಿದೆ. ಇದನ್ನು ಕೊನೆ ಮಾಡಲಿಕ್ಕೆ ಏನು ಮಾಡಬೇಕೆಂಬ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಯಾವುದೇ ಅಂಕಿಅಂಶಗಳ ವಿವರಗಳನ್ನು ನಾನು ಬಚ್ಚಿಡುವಂಥ ಕೆಲಸ ಮಾಡಿಲ್ಲ. ಎಲ್ಲಾ ವಿವರಗಳನ್ನು ಈ ಮನೆಯ ಗಮನಕ್ಕೆ ತಂದು ನಾನು ಎಲ್ಲಾ ಮಾಹಿತಿಯನ್ನು ಕೊಡುತ್ತಿದ್ದೇನೆ. ನನಗೆ ಅರ್ಥವಾಗದಿರುವಂಥ ದು:ಖದ ಸಂಗತಿ ಎಂದರೆ ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದ ರೀತಿಯಲ್ಲಿ ಕಳೆದ 8–10 ವರ್ಷಗಳಿಂದ ಇದು ನಡೆಯುತ್ತಿತ್ತು, ಎಲ್ಲರು ಸುಮ್ಮನಿದ್ದಾರೆ. ಪುಣ್ಯಕ್ಕೆ ಲೋಕಾಯುಕ್ತರು ಗಟ್ಟಿಯಾಗಿ ತನಿಖೆ ಮಾಡುತ್ತಿದ್ದಾರೆ. ಅದಕ್ಕೆ ಎಲ್ಲಾ ರೀತಿಯ ಮಾಹಿತಿಗಳನ್ನು ಒದಗಿಸುತ್ತಿದ್ದೇವೆ, ಇದನ್ನು ಕೊನೆ ಮಾಡಬೇಕೆಂಬುದು ನಮ್ಮ ನಿಮ್ಮೆಲ್ಲರ ಅಭಿಲಾಷೆ. ಇದರಲ್ಲಿ ಎರಡು ಮಾತಿಲ್ಲ. ಲೋಕಾಯುಕ್ತರಿಗೆ ಹೆಚ್ಚಿನ ಶಕ್ತಿ ತುಂಬಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ನಾವು ಹೇಳುವಂಥದ್ದು ಇವೆಲ್ಲವೂ ಸಹ ನಿಮ್ಮ ಪೂರ್ವಜರು ಮಾಡಿರುವಂಥದ್ದು ಸ್ವಾಮಿ, ಅಂದರೆ ಹಿಂದೆ ಅನುಮತಿ ಕೊಟ್ಟಂತಹ, influence ಇರುವಂಥ ಅದೇ ಜನ ಮಾಡಿರುವಂಥದ್ದು ಇವತ್ತು ಅವರೇ ಮಾಡುತ್ತಿದ್ದಾರೆ ಅದು ನಿಮಗೆ ಗೊತ್ತಿದೆ, 16 ಟನ್ ಕಬ್ಬಿಣದ ಅದಿರು ಹೋಗಬೇಕು, 24–28 ಟನ್ ಹೋಗುತ್ತಿದೆ. ನಿಮಗೆ ಗೊತ್ತಿರುವಂತೆ ಹಿಂದೆ duplicate receiptಗಳನ್ನು ಮಾಡಿ permitಗಳನ್ನು ಮಾಡಿಕೊಂಡಿರುವುದು ಜಗಜ್ಜಾಹೀರಾಯಿತು ಹಾಗು ತನಿಖೆಗಳಾಯಿತು. ಅಂದರೆ ಇಷ್ಟೊಂದು ಧೈರ್ಯವಾಗಿ, ಧಾರಾಳವಾಗಿ ಈ ದಂಧೆಗಳು ನಡೆಯುತ್ತಿವೆ. ಇದು ನಮ್ಮ ರಾಜ್ಯ ಮಾತ್ರವಲ್ಲ. ಈ ಕಬ್ಬಿಣದ ಅದಿರು ಸಿಗುತ್ತಿರುವಂಥ ಎಲ್ಲಾ ಪ್ರಮುಖ ಕೇಂದ್ರ ರಾಜ್ಯಗಳಲ್ಲಿ ಇದು ನಡೆಯುತ್ತಿದೆ ಈ ಬಗ್ಗೆ ಎಲ್ಲಾ ಅಂಕಿಅಂಶಗಳನ್ನು ನಾಳೆ ನಿಮಗೆ ಒದಗಿಸುತ್ತೇವೆ. ನಾನು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆಯುತ್ತಿದ್ದೇನೆ, ಪ್ರಧಾನ ಮಂತ್ರಿಗಳನ್ನೂ ಭೇಟಿ ಮಾಡುತ್ತೇನೆ. ನಾನೇನು ಹೇಳಬಯಸುತ್ತೇನೆಂದರೆ, ಇದನ್ನು ಕೊನೆ ಮಾಡಲಿಕ್ಕೆ ಏನಾದರೂ ಸಲಹೆ ಕೊಡಿ. ಉದಾಹರಣೆಗೆ ಕೃಷ್ಣ ಪಾಲೇಮಾರ್ ಹೋಟೆಲ್‌ಗೆ ಹೋಗಿ ಮೀಟಿಂಗ್ ಮಾಡಿದರು. ok, ಅವರೇನೋ ಒಂದು ಪತ್ರ ಬರೆದರು, ನಾನು ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇನೆ. ನಿಮಗೆ ಯಾವುದೇ

ವಿಷಯಕ್ಕೆ ಮಾಹಿತಿ ಕೊಡಲಿಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಈ ಪರಿಸ್ಥಿತಿಗಳಲ್ಲಿ ನಾವು ಏನು ಮಾಡಬೇಕೆಂದು ರೇವಣ್ಣನವರೇ ನಿಮ್ಮ ಅನುಭವದಲ್ಲಿ ತಾವು ಏನು ಸಲಹೆ ಕೊಡುವಿರಿ? ಈ ಅಧಿಕಾರದ ಬಗ್ಗೆ ಮಾತನಾಡುತ್ತಿದ್ದಾರೆ. 24 ವರ್ಷಗಳಿಂದ ಲೋಕಾಯುಕ್ತಕ್ಕೆ ಹೆಚ್ಚು ಅಧಿಕಾರ ಕೊಡಲಿಕ್ಕಾಗಲಿಲ್ಲ ಅದು ಶ್ರೀಯುತರಾದ ಧರ್ಮಸಿಂಗ್, ಕುಮಾರಸ್ವಾಮಿ ಕಾಲದಲ್ಲಿರಬಹುದು, ಘನತೆವೆತ್ತ ರಾಜ್ಯಪಾಲರ ಕಾಲದಲ್ಲಿರಬಹುದು, ಅಂದರೆ ಇಷ್ಟು ವರ್ಷಗಳು ಏನು ಆಗಲಿಲ್ಲ ಅವೆಲ್ಲವನ್ನು ಯಡಿಯೂರಪ್ಪನವರ ತಲೆ ಮೇಲೆ ಕಟ್ಟಿ ನಾನು ಮಾಡಬೇಕೆಂಬ ಅಪೇಕ್ಷೆಪಟ್ಟರೆ ಅದನ್ನು ನಾನು ಮಾಡುತ್ತೇನೆ. ಯಾವುದು ಇಷ್ಟು ವರ್ಷಗಳು ಆಗಲಿಲ್ಲ, ಅದನ್ನು ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ. It is my commitment. ಆದರೆ ನಾವು ಚರ್ಚೆ ಮಾಡುತ್ತಿರುವ ರೀತಿ ಧರ್ಮವೇ? ನಾವು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕಲ್ಲವೇ, ಕುಮಾರಸ್ವಾಮಿಯವರು ಮುಖ್ಯಮಂತ್ರಿ ಆಗಿದ್ದಾಗ ರೇವಣ್ಣನವರು ನಾವೆಲ್ಲಾ ಒಟ್ಟಿಗೆ ಇದ್ದೆವು, ಆಗ ಅದರ ಹಿಂದೆ ಏನೇನು ನಡೆಯಿತು ಎಲ್ಲಾ ಗೊತ್ತಿದೆ. ಅದರಿಂದ ಏನೇನು ಆರೋಪ, ಪ್ರತ್ಯಾರೋಪಗಳಾಯಿತು ಎಂದು ಗೊತ್ತಿದೆ. ಇದನ್ನು ಕೊನೆ ಮಾಡಲಿಕ್ಕೆ ಏನಾದರೂ ಸಲಹೆ ಕೊಡಿ. ನಾನು ಯಾವುದನ್ನು ಮುಚ್ಚುಮರೆ ಮಾಡುತ್ತಿಲ್ಲ. ಇವತ್ತು ಇದು ಕೊನೆಯಾಗಬೇಕು ರೇವಣ್ಣನವರೆ, ಅದಕ್ಕೇನು ಮಾಡಬೇಕು ಎಂದು ನೀವು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮುಖ್ಯಮಂತ್ರಿಗಳು ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳುತ್ತಿದ್ದಾರೆ, ಅವರಿಗೆ ನಾನು ಅಭಿನಂದನೆಯನ್ನು ಈ ಸಭೆಯ ಮುಖೇನ ಸಲ್ಲಿಸುತ್ತೇನೆ. ಲೋಕಾಯುಕ್ತರಿಗೆ ಅಧಿಕಾರ ಕೊಡಲಿಲ್ಲ. ಸುಮಾರು 20 ತಿಂಗಳು ನಾನು ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿದ್ದರು, ನಾನು ಮಂತ್ರಿಮಂಡಲದಲ್ಲಿದ್ದೆ. ಕುಮಾರಸ್ವಾಮಿಯವರು ಅಂದು ಅಧಿಕಾರವನ್ನು ಕಳುಹಿಸುಕೊಟ್ಟರು. ಸಚಿವ ಸಂಪುಟದ ಸಭೆಯಲ್ಲಿ ಏನು ನಡೆಯಿತು ಎಂದು ಮಾನ್ಯ ಯಡಿಯೂರಪ್ಪನವರು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಲಿ, ನಾನೇನು ಬೇಡವೆನ್ನುವುದಿಲ್ಲ. ರಾಜ್ಯಪಾಲರಿಗೆ ಕಳುಹಿಸಿಕೊಟ್ಟು ಕುಮಾರಸ್ವಾಮಿಯವರು ಇದ್ದಾಗಲೇ ನೀವು ನಿರ್ಣಯ ಮಾಡಿ ಒಂದು ಪರಮಾಧಿಕಾರವನ್ನು ಲೋಕಾಯುಕ್ತಕ್ಕೆ ಕೊಟ್ಟಾಯಿತು, including chief Secretary ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರವನ್ನು ಕೊಟ್ಟಾಯಿತು. ಅಷ್ಟೊತ್ತಿಗೆ ಕುಮಾರಸ್ವಾಮಿಯವರ ಸರ್ಕಾರ ಹೋಯಿತು. ರಾಜ್ಯಪಾಲರು ಅದನ್ನು ಮುಂದಿನ ಜನಪ್ರಿಯ ಸರ್ಕಾರ ಬಂದ ಮೇಲೆ ಅದರ ಬಗ್ಗೆ ಕ್ರಮ ಕೈಗೊಳ್ಳಲಿ ಎಂದು ತಮಗೆ ಕಳುಹಿಸಿಕೊಟ್ಟರು.

ಆ ಕಡತವನ್ನು ಕಳುಹಿಸಿ ಎರಡು ವರ್ಷಗಳಾಯಿತು. ಲೋಕಾಯುಕ್ತರು ಒಂದು ಪತ್ರಿಕೆಯಲ್ಲಿ electronic media ದಲ್ಲಿ ರಾಜೀನಾಮೆಯನ್ನು ಕೊಡುವಾಗ ಅವರೇ ಹೇಳಿದ್ದಾರೆ. ಒಂದು ಜನಪ್ರಿಯ ಸರ್ಕಾರ ರಾಜ್ಯದಲ್ಲಿ, ಅದರಲ್ಲಿಯೂ ರೈತರ ಪರವಾಗಿ ಹೋರಾಟ ಮಾಡುವ ಸರ್ಕಾರ ಒಬ್ಬ ರೈತರ ಕುಟುಂಬದಿಂದ ಬಂದಂಥ ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದ ಸರ್ಕಾರದಿಂದ ಈ ರಾಜ್ಯದ ಜನತೆಗೆ ಒಂದು ಆಶಾಭಾವನೆ ಇತ್ತು. ಭ್ರಷ್ಟಾಚಾರವನ್ನು ನಮ್ಮ ಮುಖ್ಯಮಂತ್ರಿಗಳು ತಡೆಗಟ್ಟುತ್ತಾರೆ, ಒಳ್ಳೆಯ ಸರ್ಕಾರ ಬಂದಿದೆ. ಹಿಂದೆ ಇದ್ದ ಕುಮಾರಸ್ವಾಮಿಯವರು ರೇವಣ್ಣ, ಬಾಲಕೃಷ್ಣ ಎಲ್ಲರೂ ಕಳ್ಳರು ಎಂದು ಹೇಳಿ ಎರಡು ವರ್ಷಗಳಿಂದ ಆ ಕಡತವನ್ನು ಏಕೆ ಸುಮ್ಮನೆ ಇಟ್ಟುಕೊಂಡಿದ್ದಿರಿ ಸ್ವಾಮಿ. ರಾಜ್ಯಪಾಲರು ಕಡತವನ್ನು ಕಳುಹಿಸಿ ಎರಡು ವರ್ಷಗಳಾಯಿತು, ಲೋಕಾಯುಕ್ತರು ನಿಮ್ಮ ಮುಂದೆ ಅವರಿಗೆ ಕಾಲು ಕಟ್ಟುವುದು ಒಂದು ಬಾಕಿ ಇತ್ತು. ಅವರು ಕಾಡಿ, ಬೇಡಿ ಕೆಲಸ ಮಾಡುತ್ತಿರುವುದರಿಂದ 206 ಪ್ರಕರಣಗಳನ್ನು ಹಿಡಿದು 302 ಕೋಟಿ ರೂಪಾಯಿಗಳನ್ನು ಹಿಡಿದು ಈ ರಾಜ್ಯ ಸರ್ಕಾರಕ್ಕೆ ಉಳಿಸಿಕೊಟ್ಟರಲ್ಲಾ. ಅವರಿಗೆ ಬೇರೆ ರಾಜ್ಯದಲ್ಲೆಲ್ಲಾ 15% ಕೊಟ್ಟಿದ್ದಾರೆ, ಅವರಿಗೆ 30% ಆದರೂ ಕೊಡಿ ಎಂದು ಜೊತೆಗೆ ಮೂರು ಬೇಡಿಕೆಯನ್ನು ಕೊಟ್ಟರು ಎಂದು ತಾವು ಹೇಳಿದಿರಿ. ಕುಮಾರಸ್ವಾಮಿಯವರು ಕಳುಹಿಸಿ ನಂತರ ರಾಜ್ಯಪಾಲರು ಜನಪ್ರಿಯ ಸರ್ಕಾರ ಬಂದ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕಡತವನ್ನು ತಮಗೆ ಕಳುಹಿಸಿ ಎರಡು ವರ್ಷಗಳಾದರೂ ಏಕೆ ಸುಮ್ಮನಿಟ್ಟಿದ್ದೀರಿ? ಅದಕ್ಕೆ ಕಾರಣವೇನು? ಅದಕ್ಕೊಂದು ಅಂತ್ಯ ಹಾಡಬೇಕಾಗಿತ್ತಲ್ಲವೇ? ಅಂತ್ಯ ಹಾಡಬೇಡಿ ಎಂದು ನಾವೇನಾದರೂ ಅಡ್ಡಪಡಿಸಿದ್ದೇವೆಯೇ? ಜಯಚಂದ್ರರವರೇ ನಿಮ್ಮ ಪಕ್ಷದಿಂದ ಏನಾದರೂ ಮಾಡಬೇಡಿ ಎಂದು ಹೇಳಿದ್ದಿರಾ? ಅನುಮತಿ ಕೊಡಬೇಡಿ ಎಂದು ನೀವೇನಾದರೂ ಹೇಳಿದ್ದೀರಾ? ನಮ್ಮ ಪಕ್ಷದಿಂದ ನಾವಂತೂ ಏನೂ ಹೇಳಿಲ್ಲ. ಬಿಡಿ, ಏಕೆ ಹೆದರಬೇಕು. ಆಮೇಲೆ ತಾವೇ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬೇಕೆಂದು ಒಂದು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದೀರಿ. ರಾಜ್ಯದಲ್ಲಿ ತಾವೇ 100 ಸೀಟುಗಳನ್ನು ತೆಗೆದುಕೊಂಡಿದ್ದೀರಿ. ಈಗ ಸವದಿಯವರೇ ಏಕೆ worry ಮಾಡುತ್ತೀರಿ?

ಶ್ರೀ ಲಕ್ಷ್ಮಣ ಸವದಿ: ಪದೇ ಪದೇ ಕುಮಾರಸ್ವಾಮಿಯವರ ಹೆಸರು ಏಕೆ ಹೇಳುತ್ತೀರಿ, ಇಲ್ಲಿ ನಿಮ್ಮ ಸಂಗ ಬೇಡವೆಂದು ಅವರು ದೆಹಲಿಗೆ ಹೋಗಿದ್ದಾರೆ ಆದರೂ ನೀವು ಅವರನ್ನು ಬಿಡಲಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ (ಮುಂದು.......): ಸವದಿಯವರು ಏನು ಮಾಡಿದ್ದಾರೆ

ಎಂದರೆ, ಸುಮ್ಮನೆ ನನಗೆ ತೊಂದರೆಯಾಗುತ್ತದೆ, ಕುಮಾರಸ್ವಾಮಿಯವರೇ ನೀವು ನಾವು ಒಂದು ರೀತಿ ಗಳಸ್ಯ–ಕಂಠಸ್ಯಗಳಿದ್ದ ಹಾಗೆ. ಅದನ್ನು ಬೇಕಾದರೆ ಆಮೇಲೆ ಹೇಳುತ್ತೇನೆ. ಬೇಡ ಸಾರ್ ನೀವು ಇಲ್ಲಿ ಇರುವುದು ಸ್ವಲ್ಪ ದಿವಸ ಡೆಲ್ಲಿಗೆ ಹೋಗಿ ಬನ್ನಿ, ಆಮೇಲೆ ಬೇಕಾದರೆ ಮಾನ್ಯ ಯಡಿಯೂರಪ್ಪನವರು ಬಿಟ್ಟು ಹೋದಮೇಲೆ ನಾವು ನಿಮ್ಮ ಜೊತೆ ಇರುತ್ತೇವೆ ಎಂದು ಹೇಳಿ ನೀವು ಕಳುಹಿಸಿರಬೇಕೋ ಏನೋ? ಪಾಪ ನೀವು ಉಮೇಶ್ ಕತ್ತಿಯವರು ಹಾಗೂ ಕುಮಾರಸ್ವಾಮಿಯವರು separate ಆಗಿದ್ದರೂ, ಸಾಯಂಕಾಲ ಒಟ್ಟಿಗೆ ಸೇರಿಕೊಳ್ಳುತ್ತಾರೆ.

ಶ್ರೀ ಉಮೇಶ್ ಕತ್ತಿ: ಅದು ನಿಮಗೆ ಹೇಗೆ ಗೊತ್ತು? ನಿಮಗೆ ಹೇಗೆ ಗೊತ್ತಾಯಿತು. ನೀವು ಏನೂ ಬಂದಿಲ್ಲವಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ತಾವು ಮೊನ್ನೆ ಹಾಸನಕ್ಕೆ ಬಂದಿದ್ದರಲ್ಲಾ ಸರ್? ಆಗ ಈ ತರಹ ಹೇಳಿದ್ದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಎರಡು ವರ್ಷಗಳಿಂದ ಈ ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಹಲವಾರು ಎಡರುತೊಡರುಗಳು ಬಂದಿದೆ. ಈಗ ವಿಷಯಕ್ಕೆ ಬರುತ್ತೇನೆ. ಒಂದು ದಿಟ್ಟ ನಿಲುವು ತೆಗೆದುಕೊಳ್ಳಲಿ. ಲೋಕಾಯುಕ್ತಕ್ಕೆ ಅಧಿಕಾರವನ್ನು ಕೊಡಲಿ ನಮ್ಮನ್ನು ಸೇರಿಸಿ ಕೊಡಿ. ನಾವು ಏಕೆ ಹೆದರಬೇಕು? ಪ್ರಾಮಾಣಿಕವಾಗಿ ಇದ್ದರೆ ಏಕೆ ಹೆದರಬೇಕು? ಲೋಕಾಯುಕ್ತಕ್ಕೆ ಪೂರ್ಣಾಧಿಕಾರ ಕೊಡಿ. ನೀವು ಅಧಿಕಾರಕ್ಕೆ ಬಂದು ಎರಡು ವರ್ಷವಾಯಿತು. ಈಗ ಸಂಕಲ್ಪ ಮಾಡಿದ್ದೀರಿ. ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆ ಎಂದಿರಿ. ಎಲ್ಲವೂ ಆಯಿತು. ನೀವು ಏಕೆ ಆದ್ದರಿಂದ, 10 ನಿಮಿಷ ಸುಮ್ಮನಿರಿ ಆನಂತರ ದಾಖಲೆ ಸಮೇತ ಹೇಳುತ್ತೇನೆ. ಯಾರ್‍ಯಾರು ಮಂತ್ರಿಗಳಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಉದಾಹರಣೆಗೆ ಹೇಳುವುದಾದರೆ, 1ನೇ ತಾರೀಖಿನ ದಿವಸ ಸನ್ಮಾನ್ಯ ಮುಖ್ಯ ಮಂತ್ರಿಯವರು ವಿಧಾನ ಪರಿಷತ್‌ನಲ್ಲಿ ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅಕ್ರಮವಾಗಿ ರಫ್ತು ಮಾಡಲು ಉತ್ತರ ಕನ್ನಡ ಜಿಲ್ಲೆಯ ಬೇಲೆಕೇರೆ ಬಂದರು ಪ್ರದೇಶದಲ್ಲಿ ಸಂಗ್ರಹಿಸಿದ ಖನಿಜವನ್ನು ಸರ್ಕಾರ ಪೂರ್ಣ ವಶಕ್ಕೆ ತೆಗೆದುಕೊಂಡಿರುವುದು ನಿಜವೇ ಎಂದು ಪ್ರಶ್ನೆ ಕೇಳಿರುವುದಕ್ಕೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಎರಡನೇ ಪ್ರಶ್ನೆ ಏನೆಂದರೆ, ಕೋರ್ಟ್‌ನ ಆದೇಶ ಬರುವವರೆಗೆ ಅದಿರನ್ನು ಸುರಕ್ಷಿವಾಗಿ ನೋಡಿಕೊಳ್ಳಲು ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿ ಕೆಲಸ ಮಾಡುತ್ತಿದ್ದ ಅಧಿಕಾರಿಗಳಿಗೆ ಹಸ್ತಾಂತರಿಸಿದ್ದು ನಿಜವೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಬಂದರು ಸಂರಕ್ಷಣಾಧಿಕಾರಿ ಬೇಲೆಕೇರೆ, ಇವರು ವಶಕ್ಕೆ ವಹಿಸಿಕೊಟ್ಟು

ಸ್ವೀಕೃತಿ ಪಡೆಯಲಾಗಿದೆ ಎಂದು ಹೇಳಿದ್ದಾರೆ. ಅಂದರೆ, 250 ಕೋಟಿ ರೂ. ಬೆಲೆಯ ಅದಿರನ್ನು ವಶಪಡಿಸಿಕೊಂಡಿರುವುದಕ್ಕೆ ಸ್ವೀಕೃತಿ ಪತ್ರ ನೀಡಲಾಗಿದೆ ಎಂದು ಸರ್ಕಾರ ಉತ್ತರ ಕೊಟ್ಟಿದೆ. ಈ ಖನಿಜದ ಒಟ್ಟು ಪ್ರಮಾಣ ಎಷ್ಟು ಹಾಗೂ ಆಗಿನ ಅದರ ಮಾರುಕಟ್ಟೆ ಅಂದಾಜು ಬೆಲೆ ಎಷ್ಟು ಎಂಬ ಪ್ರಶ್ನೆಗೆ 8.5 ಲಕ್ಷ ಮೆಟ್ರಿಕ್ ಟನ್ ಮತ್ತು ಪ್ರತಿ ಟನ್ ಕಬ್ಬಿಣದ ಅದಿರಿಗೆ 3 ಸಾವಿರ ರೂಪಾಯಿ ಅಂದಾಜಿನಂತೆ ಸುಮಾರು 241 ಕೋಟಿ ರೂಪಾಯಿ ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಸದನದಲ್ಲಿ ಉತ್ತರ ಕೊಡುವ ಸಂದರ್ಭದಲ್ಲಿ ಈ ಮಾಹಿತಿಯನ್ನು ಹೇಳಿದ್ದಾರೆ. ಮತ್ತೆ ಮುಂದುವರಿದು ರಾಜ್ಯದ ಅದಿರನ್ನು ಅಕ್ರಮವಾಗಿ ಪರಭಾರೆಗಾಗಿ ಸಾಗಿಸಲು ಪ್ರಯತ್ನ ಮಾಡಿದ ವ್ಯಕ್ತಿಗಳು ಯಾರು? ಈ ಒಟ್ಟು ಮೊತ್ತದಲ್ಲಿ ಯಾವ್ಯಾವ ವ್ಯಕ್ತಿಗಳಿಗೆ ಎಷ್ಟು ಮೊತ್ತದ ತೆರಿಗೆ ಅಕ್ರಮ ಖನಿಜ ಸಂಪತ್ತನ್ನು ಬೇಲೆಕೇರೆ ಬಂದರ್‌ನಲ್ಲಿ ಸಂಗ್ರಹಿಸಿದ್ದರು ಎಂದು ಪ್ರಶ್ನೆ ಇತ್ತು. ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೈಟ್ ಲಿಮಿಟೆಡ್, ಬೇಲೆಕೇರೆ ಮತ್ತು ಇತರೇ ಎಂದು ಉತ್ತರ ಕೊಟ್ಟಿದ್ದಾರೆ. ಅಂದರೆ, ಅವರ ಜೊತೆಗೆ ಇತರರು ಸೇರಿಕೊಂಡಿದ್ದಾರೆ. ಒಟ್ಟು ಎಷ್ಟು ಅಂದಾಜು ಎಂಬ ಬಗ್ಗೆ ಮಾಹಿತಿ ಜೊತೆಗೆ ಸಾವಳಕಿ, ಅದ್ವಾನಿ ಮತ್ತೆ ಇತರರ ಹೆಸರುಗಳನ್ನು ಉತ್ತರದಲ್ಲಿ ಕೊಟ್ಟಿದ್ದಾರೆ. ಮತ್ತೆ ರಾಜ್‌ಮಹಲ್ (ಗೊಂದಲ) ಸಾರ್ ನಾವು ನೀವು ಅಧಿಕಾರದಲ್ಲಿದ್ದಾಗ ಕೊಟ್ಟಿದ್ದನ್ನು ನೀವು ಬ್ರೇಕ್ ಹಾಕಿ ನಿಲ್ಲಿಸಿದ್ದೀರಿ. ಕುಮಾರಸ್ವಾಮಿಯವರು ಇದ್ದಾಗ ಕೊಟ್ಟಿದ್ದನ್ನು ನೀವು ಈಗ ಹೇಳುತ್ತಿದ್ದೀರಲ್ಲಾ? ನೀವು ಎದ್ದು ಎದ್ದು ನಿಂತುಕೊಂಡು ಮಾತನಾಡುತ್ತಿದ್ದೀರಿ. promotion ಸಿಗುತ್ತದೆ ಎಂದು, ಏನೇ ಆಗಲಿ ನೀವು ಮಂತ್ರಿಗಳು ಆಗುವುದಿಲ್ಲ ಸುಮ್ಮನಿರಿ. ಏಕೆ worry ಮಾಡುತ್ತೀರಿ? ಸವದಿಯವರನ್ನು ಏನಾದರೂ ಮಂತ್ರಿಗಳನ್ನಾಗಿ ಮಾಡುವುದಾದರೆ ನಾವು ವಿರೋಧ ಪಕ್ಷದವರೆಲ್ಲರೂ ಒಮ್ಮತವಾಗಿ ನಿರ್ಣಯ ಮಾಡಿಕೊಡುತ್ತೇವೆ. ನಾವು ವಿರೋಧ ಮಾಡುವುದಿಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರು silent ಆಗಿ ಕುಳಿತುಕೊಳ್ಳಬೇಕು. ವಿರೋಧ ಪಕ್ಷದ ಸದಸ್ಯರು ಮಾತನಾಡುವಾಗ ಆಡಳಿತ ಪಕ್ಷದ ಸದಸ್ಯರು ಸ್ವಲ್ಪ ಗೌರವವಾಗಿ ಇರಬೇಕು. ನನ್ನದು ಬೇರೆ ಏನೂ ಇಲ್ಲ, ಮನವಿ ಮಾಡುತ್ತೇನೆ. ಬೇಕಾದರೆ ಮಂತ್ರಿ ಮಾಡುವುದಾದರೆ ನಾವೆಲ್ಲರೂ ನಮ್ಮ ಎರಡೂ ಪಕ್ಷದವರು ಬೇಕಾದರೆ ಒಪ್ಪಿಕೊಳ್ಳುತ್ತೇವೆ. ಈಗ ಆ ಕಂಪನಿಗಳ ಹೆಸರು ಬೇಕು ಎಂದಿರಿ. ಅವು ಯಾವ ಕಂಪನಿಗಳು ಎಂದು ಹೇಳಬೇಕು. 11 ಕಂಪನಿಗಳು ಯಾವುವು ಎಂದರೆ, M/s. Mallikarjuna shipping private Limited, Goa, M/s. Advani Enterprises Limited, Ahamadabad, M/s Salagaon

Mine Industries Private Limited, Margo, ILC Industries Limited, Bangalore, PGS Over Limited, Delhi, Davandar Brother, Belgaum, Shimal Limited, New Delhi, Swasthik Steel, Hospet, Lakshmi Venkateshwara Mines, Hospet, Matching Manufactures Private Limited, Poona ಒಟ್ಟು 11 ಕಂಪನಿಗಳು 250 ಕೋಟಿ ರೂಪಾಯಿಗಳನ್ನು ಮಾಡಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಅಧ್ಯಕ್ಷರೆ, ಯಾವ ಕಂಪನಿಗಳು ಎಂದು ತಮ್ಮ ಗಮನಕ್ಕೆ ಕೊಟ್ಟಿದ್ದೇನೆ. ಈ ಲೋಕಾಯುಕ್ತ ವರದಿ ಮೊದಲನೇ ಸಲ ಬಂದಿದ್ದು ಕುಮಾರಸ್ವಾಮಿಯವರು ಇದ್ದಾಗ, ಅವರ ಮೇಲೆ ಸಮಸ್ಯೆ ಬಂದಾಗ ಲೋಕಾಯುಕ್ತಕ್ಕೆ ಕಳುಹಿಸಿದ್ದಿರಿ. ವರದಿ ಕೊಟ್ಟು ಎಷ್ಟು ದಿನ ಆಯಿತು? ವರದಿಯಲ್ಲಿ ಏನೇನು ಅಂಶವಿದೆ? ಮಾನ್ಯ ಮುಖ್ಯಮಂತ್ರಿಗಳು ಅಂದರೆ ಸಭಾ ನಾಯಕರು ಈ ಸದನಕ್ಕೆ ತಿಳಿಸಬೇಕು. ಈ ವರದಿ ಇರುವುದು ಸುಮಾರು 1800 ಪುಟ, ಒಂದಲ್ಲ, ಎರಡಲ್ಲ, 1800 ಪುಟಗಳು with documents ಹಾಕಿ, with record ಹಾಕಿ, ಒಬ್ಬ ಮಾಜಿ ನ್ಯಾಯಾಧೀಶರು ಕಳುಹಿಸಿಕೊಟ್ಟಿದ್ದಾರೆ. ಬೆಳಗಾಂ ಅಧಿವೇಶನದಲ್ಲಿ ಚರ್ಚೆಯಾಯಿತು. ಏತಕ್ಕೆ? ಏನು ಕಾರಣ? ಲೋಕಾಯುಕ್ತ ವರದಿಯನ್ನು ಕೊಟ್ಟಿರುವುದರ ಬಗ್ಗೆ ಸದನದ ಮುಂದೆ ಇಡಿ. ಚರ್ಚೆ ಮಾಡಲಿ. ಇದರಲ್ಲಿ ಏನು ತಪ್ಪುಗಳು ಇವೆ, ಯಾರ್ಯಾರು ಇದರಲ್ಲಿ involve ಆಗಿದ್ದಾರೆ, 2000 ದಿಂದ ಇವತ್ತಿನವರೆಗೂ ಯಾರ್ಯಾರು permit ಕೊಟ್ಟಿದ್ದಾರೆ, ಕುಮಾರಸ್ವಾಮಿಯವರು ಎಷ್ಟು ಕೊಟ್ಟಿದ್ದಾರೆ, ಧರ್ಮಸಿಂಗ್‌ರವರು ಎಷ್ಟು ಕೊಟ್ಟಿದ್ದಾರೆ, ಈ ಹಿಂದೆ ಯಾರ್ಯಾರು ಕೊಟ್ಟಿದ್ದಾರೆ, ತಪ್ಪು ಇದ್ದರೆ ಜೈಲಿಗೆ ಹಾಕಲಿ, ಏಕೆ ಹಿಂದೇಟು ಹಾಕುತ್ತೀರಿ? ಈ ಪುಸ್ತಕ ಧೂಳು ಹಿಡಿಯಲು ಎರಡು ವರ್ಷ ಇಡಬೇಕೇ? ಲೋಕಾಯುಕ್ತರವರು ರಾಜೀನಾಮೆ ಕೊಟ್ಟು ಅವರು ಈ ಪುಸ್ತಕ open ಮಾಡಿಸುವ ಪರಿಸ್ಥಿತಿ ಬಂತಲ್ಲವೇ ಸ್ವಾಮಿ. ಲೋಕಾಯುಕ್ತದವರು ರಾಜೀನಾಮೆ ಕೊಡದಿದ್ದರೆ ಈ ಪುಸ್ತಕ ಧೂಳು ಹಿಡಿಯುತ್ತಿತ್ತು ಅಥವಾ ಯಾವುದಾದರೂ ಬ್ರೆಡ್ ಅಂಗಡಿಗೆ ಪೊಟ್ಟಣ ಕಟ್ಟುವುದಕ್ಕೆ ಕಳುಹಿಸುತ್ತಿದ್ದರು. 1800 ಪುಟವಿರುವ ಈ ಪುಸ್ತಕವನ್ನು ಏಕೆ waste ಮಾಡಬೇಕು ಎಂದು ಹೇಳಿ, ಯಾವುದಾದರೂ ಬ್ರೆಡ್ ಅಂಗಡಿ ಅಥವಾ ಬೇಕರಿ ಅಂಗಡಿಗೆ ಕಳುಹಿಸುವ ಪರಿಸ್ಥಿತಿ ಬರುತ್ತಿತ್ತು. ಇದು ಕೋಲ್ಡ್ ಸ್ಟೊರೇಜ್‌ಗೆ ಹೋಗಿತ್ತು ಲೋಕಾಯುಕ್ತರವರ ರಾಜೀನಾಮೆಯಿಂದ ಇವತ್ತು ಕೋಲ್ಡ್‌ಸ್ಟೋರೇಜ್‌ಗೆ ಹೋಗಿದ್ದು ವಾಪಸ್ಸು ಬಂದಿದೆ. ಅದೂ ಅಲ್ಲದೆ, ಲೋಕಾಯುಕ್ತದವರು ಆಗಸ್ಟ್ 31ನೇ ತಾರೀಖು ಗಡುವು ಕೊಟ್ಟಿದ್ದಾರೆ.

ಆಗಸ್ಟ್ 31ನೇ ತಾರೀಖಿನೊಳಗೆ ಅಂತಿಮ ವರದಿಯನ್ನು ಕೊಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ಸದನದಲ್ಲಿ ಒಂದು ನಿರ್ಣಯ ಆಗಬೇಕು. ತಮ್ಮ ಮುಖೇನ ಮನವಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ, ಲೋಕಾಯುಕ್ತರ ಮನವಿ ಏನೆಂದರೆ, 2001ರಲ್ಲಿ ಮೊದಲನೇ ವರದಿ, ಆಗಸ್ಟ್ 31ನೇ ತಾರೀಖಿನೊಳಗೆ ಎರಡನೇ ವರದಿ ಕೊಡುತ್ತೇನೆ ಎಂದು ಹೇಳಿದ್ದಾರೆ. ಈ ರಾಜ್ಯದ ಜನತೆ ಮುಂದೆ ಸರ್ಕಾರಕ್ಕೆ ಆ ವರದಿ ಕೊಡುತ್ತೇನೆ ಎಂದು ಅವರು ಏನು ಹೇಳಿದ್ದಾರೆ, ಅವರು ಆ ವರದಿಯನ್ನು ಕೊಡಬೇಕು ಎಂದು ಸರ್ವಾನುಮತದಿಂದ ಒಂದು ನಿರ್ಣಯ ಮಾಡಬೇಕು ಎಂದು ಮನವಿ ಮಾಡುತ್ತೇನೆ. ಏಕೆಂದರೆ, ಲೋಕಾಯುಕ್ತದವರು ವರದಿ ಕೊಡದೇ ಹೋದರೆ ಅವರ ಬಗ್ಗೆಯೂ ಅನುಮಾನ ಶುರುವಾಗುತ್ತದೆ. ಅದು ಆಗಬಾರದು. ಏಕೆಂದರೆ, ಅವರ ಬಗ್ಗೆ ಈ ಸದನ, ಈ ರಾಷ್ಟ್ರದ ನಾಯಕರೆಲ್ಲಾ ಇವತ್ತು ಅತೀ ಎತ್ತರವಾಗಿ ಅವರನ್ನು ಪಕ್ಷಾತೀತವಾಗಿ ಕಂಡಿದ್ದಾರೆ. ಅವರ ಬಗ್ಗೆ ಒಂದು ಕಡೆ ಸಾರ್ವಜನಿಕರು, ಒಂದು ಕಡೆ ನಮ್ಮ ಜನಸಾಮಾನ್ಯರು, ಇವರೆಲ್ಲರೂ ಒಟ್ಟಿಗೆ ಅಭಿಪ್ರಾಯ ಮಾಡಿದ್ದಾರೆ. ಲೋಕಾಯುಕ್ತರು ಆಗಸ್ಟ್ 31ನೇ ತಾರೀಖಿನೊಳಗೆ ವರದಿಯನ್ನು ಕೊಡುತ್ತೇವೆ ಎಂದಿದ್ದಾರೆ, ಅದನ್ನು ಕೂಡಲೇ ಬೇಕು ಎಂದು ನಾನು ಈ ಸದನದ ಮುಖೇನ ಒತ್ತಾಯ ಮಾಡುತ್ತೇನೆ. ಇವತ್ತು ಕಳೆದ ಹತ್ತಾರು ವರ್ಷಗಳಿಂದ ಈ ರಾಜ್ಯದಲ್ಲಿ ವರ್ಷಾವಾರು, ನ್ಯಾಯಾಲಯದ ಮುಂದೆ ಹಲವಾರು ಕಡತಗಳಿವೆ. ಏಕೆಂದರೆ, ದಾಖಲೆಯಿಲ್ಲದೇ ಯಾರ ಬಗ್ಗೆಯೂ ಮಾತನಾಡುವುದು ಒಳ್ಳೆಯದಲ್ಲ. ಪತ್ರಿಕೆ ಆಧಾರ ಇಟ್ಟುಕೊಂಡು ನಾವು ಮಾತನಾಡುವುದಕ್ಕೆ ಹೋಗಬಾರದು. ಇವತ್ತು ಕೆಲವು ಕಡೆ ಗಣಿ ಒತ್ತುವರಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಅದನ್ನು ಇವತ್ತು ಎರಡೂ ರಾಜ್ಯಗಳು 1897ಕ್ಕೆ ಅ ರಾಜ್ಯ ಹಾಗೂ ಈ ರಾಜ್ಯದ ಎರಡೂ ಮುಖ್ಯ ಕಾರ್ಯದರ್ಶಿಗಳು ಒಪ್ಪಿದ್ದಾರೆ. ಎಂದು ಇವತ್ತು ಪತ್ರಿಕೆಯಲ್ಲಿ ಬಂದಿದೆ. ಏಕೆಂದರೆ, ಕೆಲವು ಕಡೆ ಇವತ್ತು ಕೋರ್ಟ್‌ನಲ್ಲೂ ನಡೆಯುತ್ತಿದೆ. ಸರ್ಕಾರ ಏತಕ್ಕೆ ಹಿಂದೇಟು ಹಾಕುತ್ತಿದೆ? ಯಾವ ಉದ್ದೇಶಕ್ಕೆ ಹಿಂದೇಟು ಹಾಕುತ್ತಿದೆ? ಏಕೆಂದರೆ, ಕೇಂದ್ರ ಸರ್ಕಾರದ ಕೆಲವು ಟೀಮ್ ಬಂದು ತನಿಖೆ ಮಾಡುವುದಕ್ಕೆ ಬಂದಾಗ ಅವರಿಗೆ ತನಿಖೆಗೆ ಅಡ್ಡಿಪಡಿಸುವುದು ಇರಬಹುದು ಏನೇ ಆಗಲಿ ಏತಕ್ಕೆ ಹೆದರಬೇಕು? ಸರ್ಕಾರ ಪ್ರಾಮಾಣಿಕವಾಗಿ ಇದ್ದರೆ, ಎಲ್ಲಾ ಪೂರ್ತಿ ಏನಿದೆ ಅದನ್ನು ಸಿ.ಬಿ.ಐ.ಗೆ ಕೊಡಿ. ಸಿ.ಬಿ.ಐ.ಗೆ refer ಮಾಡಿ. ಆಯಿತು, ನಿಮಗೆ ಸಿ.ಬಿ.ಐ. ಇಲ್ಲವೇ, ಅದರ ಬಗ್ಗೆ ನಿಮಗೆ ಅನುಮಾನವಿದ್ದರೆ ಇನ್ನು ಯಾವುದಾದರೂ Inter pole, ಯಾವುದಾದರೂ Foreign Agency ತನಿಖಾ ತಂಡಕ್ಕೆ ಏನಾದರೂ ಕೊಡಬೇಕೆಂದರೆ ಅದು ಈ

ರಾಜ್ಯದ ಇತಿಹಾಸದಲ್ಲಿ first time ಅದು ಒಂದು ಆಗಿಬಿಡಲಿ. ನಾವು ಅದನ್ನು ಬೇಡವೆನ್ನುವುದಿಲ್ಲ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಒಂದು ಅಂತ್ಯ ಹಾಡಬೇಕು ಎಂದು ತಂದರು. ಅಂತ್ಯ ಹಾಡುವುದಕ್ಕೆ ಏನು ಮಾಡಬೇಕು? ಅದನ್ನು ದಯಮಾಡಿ ತಾವು ತಿಳಿಸಬೇಕು ಎಂದು ಮಾನ್ಯ ಸಭಾಧ್ಯಕ್ಷರು ಹೇಳಬೇಕು. ಇವತ್ತು ಒಂದೆರಡು ಘಟನಾವಳಿಗಳು ನಡೆದಿವೆ ಎಂದರೆ, ಈಗ 5 ಗಂಟೆಯವರೆಗೆ ಮಾತನಾಡಿ ಮತ್ತೆ ಬೆಳಗ್ಗೆ ಅರ್ಧ ಗಂಟೆ ಮಾತನಾಡಿ ಎಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಅದಕ್ಕೆ ನನಗೆ ನಾಳೆ ಬೆಳಗ್ಗೆ ಅರ್ಧ ಗಂಟೆ ಕಾಲಾವಕಾಶ ಕೊಟ್ಟರೆ ನಾನು ಪೂರ್ತಿ ಮುಗಿಸುತ್ತೇನೆ. ಏಕೆಂದರೆ, ಗಮನ ಸೆಳೆಯುವ ಸೂಚನೆಗೆ ನನ್ನಿಂದ ಸದಸ್ಯರಿಗೆ ತೊಂದರೆಯಾಗಬಾರದು. ನಾಳೆ ಬೆಳಗ್ಗೆ ಅರ್ಧ ಗಂಟೆ ಮಾತನಾಡುತ್ತೇನೆ. ಗಮನ ಸೆಳೆಯುವ ಸೂಚನೆ ಇದೆ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

ಛೇರ್ಮನ್: ಮುಗಿಸಿಬಿಡಿ. ಮತ್ತೆ ನಾಳೆಗೆ ಏಕೆ? ನಾಳೆಗೆ ಏನೂ ಬೇಡಿ.

ಶ್ರೀ ಜಗದೀಶ್ ಶೆಟ್ಟರ್: ಮುಗಿಸಿಬಿಡಿ. ಮತ್ತೆ ಏಕೆ?

ಶ್ರೀ ಹೆಚ್.ಡಿ. ರೇವಣ್ಣ: ಸವದಿಯವರೇ, ನಿಮ್ಮನ್ನು ಮಂತ್ರಿ ಮಾಡುವುದಕ್ಕೆ study ಮಾಡಿಕೊಂಡು ಬರುತ್ತೇನೆ ಬನ್ನಿ.

ಛೇರ್ಮನ್: ನಾಳೆ ಮತ್ತೆ ಶುರು ಮಾಡಬೇಡಿ. ಮುಗಿಸಿಬಿಡಿ. ಈಗ ನೀವು ಮುಗಿಸಿಬಿಡಿ ರೇವಣ್ಣನವರೆ, ಇನ್ನೂ ಗಮನಸೆಳೆಯುವ ಸೂಚನೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಅಧ್ಯಕ್ಷರ ಅನುಮತಿ ತೆಗೆದುಕೊಂಡಿದ್ದೇನೆ. ಅವರು ನನಗೆ 5 ಗಂಟೆಯವರೆಗೆ ಮಾತ್ರ ಮಾತನಾಡಿ. 5 ಗಂಟೆಯ ಮೇಲೆ ಗಮನ ಸೆಳೆಯುವ ಸೂಚನೆ ಇದೆ ಎಂದರು. ನಾಳೆ ಬೆಳಗ್ಗೆ ಅರ್ಧ ಗಂಟೆ ಟೈಮ್ ಕೊಡಿಸಿ ನಾನು ಮಾತನಾಡುತ್ತೇನೆ. ಉಪ ನಾಯಕರಿಗೆ ಮಾತನಾಡುವುದಕ್ಕೆ ಮೂರು ದಿನಗಳ ಕಾಲಾವಕಾಶ ಕೊಟ್ಟಿದ್ದೀರಿ. ನಮಗೆ ಬರೀ ಒಂದೂವರೆ ಗಂಟೆ ಕೊಟ್ಟಿದ್ದೀರಿ. ಇವತ್ತು ಒಂದು ಗಂಟೆ ಕೊಟ್ಟಿದ್ದೀರಿ. ನಾಳೆ ಅರ್ಧ ಗಂಟೆ ಕೊಡಿ ಸಾಕು ಅಷ್ಟೆ. ನಾಳೆ ಬೆಳಗ್ಗೆ ಕೆಲವು interesting story ಹೇಳುವುದು ಇದೆ. ಬೆಳಗ್ಗೆ ಹೇಳುತ್ತೇನೆ.

ಛೇರ್ಮನ್: ಏನು story ಇದೆ ಅದನ್ನು ಇವತ್ತೇ ಹೇಳಿ ಮುಗಿಸಿ. ಆರು ಗಂಟೆಯವರೆಗೆ ವೇಳೆ ಇದೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನಾಳೆ ಬೆಳಗ್ಗೆ ಕೆಲವು ಪಾಯಿಂಟ್‌ಗಳನ್ನು ಸವದಿಯವರು ಕೊಡುತ್ತೇನೆ ಎಂದು ಹೇಳಿದ್ದಾರೆ. ಬೆಳಗ್ಗೆ ಮಾತನಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: 6 ಗಂಟೆಯವರೆಗೆ ನೀವು ಮಾತನಾಡಿ. ನಂತರ calling attention ತೆಗೆದುಕೊಳ್ಳಿ.

ಛೇರ್ಮನ್: ಮಾನ್ಯ ರೇವಣ್ಣನವರೆ, ಆರು ಗಂಟೆ ನಂತರ calling attention ಇರುತ್ತದೆ. ಈಗ ನೀವು ಮಾತನಾಡುವುದನ್ನು ಮುಗಿಸಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರ ಹತ್ತಿರ ನಾನು permission ತೆಗೆದುಕೊಂಡಿದ್ದೇನೆ. ನಾಳೆ ಬೆಳಗ್ಗೆ ಅರ್ಧ ಗಂಟೆಯಲ್ಲಿ ನಾನು ಮಾತನಾಡಿ ಮುಗಿಸಿಬಿಡುತ್ತೇನೆ ದಯಮಾಡಿ ನನಗೆ ಸಹಕಾರ ನೀಡಬೇಕು.

ಛೇರ್ಮನ್: ಬೇಡ, ಇವತ್ತೇ ಮಾತನಾಡಿ ಮುಗಿಸಿಬಿಡಿ ಆರು ಗಂಟೆಯವರೆಗೂ ಕಾಲಾವಕಾಶ ಇದೆ.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರಿಗೆ ಜ್ಯೋತಿಷಿಗಳು ಇವತ್ತು ಐದು ಗಂಟೆಯೊಳಗೆ ಮಾತನಾಡಿ ಮುಗಿಸಿ ಎಂದು ಹೇಳಿದ್ದಾರೆ. ಹಾಗಾಗಿ ಅವರು ಐದು ಗಂಟೆ ಬಿಟ್ಟು ಮತ್ತೆ ನಾಳೆ ಮಾತನಾಡುತ್ತಾರೆ, ಅವರಿಗೆ ಈಗಲೇ ಮಾತನಾಡಿ ಮುಗಿಸುವಂತೆ ಹೇಳಿ. ಇನ್ನೊಂದು ಹತ್ತು ನಿಮಿಷದಲ್ಲಿ ಮಾತನಾಡಿ ಮುಗಿಸಲಿ, ಜ್ಯೋತಿಷಿಯವರು ಹೇಳಿದಂಥ ಮಾತನ್ನು ಕೇಳಿಕೊಂಡು ಕೂತರೆ ಹೇಗೆ?

ಛೇರ್ಮನ್: ಆರು ಗಂಟೆಯವರೆಗೂ ನಡೆಸಬಹುದು, ಆನಂತರ calling attention ಇರುತ್ತದೆ ಎಂದು ಈಗ ಮಾನ್ಯ ಸಭಾಧ್ಯಕ್ಷರು ಸೂಚನೆ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ನಾಳೆ half an hour ಕೊಡಿ ಸ್ವಾಮಿ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರ ಹತ್ತಿರ ಸತ್ಯ ಸಂಗತಿಯನ್ನು ಕೇಳಿ.

ಛೇರ್ಮನ್: ಮಾನ್ಯ ರೇವಣ್ಣನವರೆ, ಈಗಾಗಲೇ ಸಾಕಷ್ಟು ವಿಷಯಗಳನ್ನು ಹೇಳಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರ ಅನುಮತಿಯನ್ನು ತೆಗೆದುಕೊಂಡೇ ಹೇಳುತ್ತಿದ್ದೇನೆ ನಾಳೆ ಅರ್ಧ ಗಂಟೆ ಕೊಡಿ ಮಾತನಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಐದೂವರೆ ಗಂಟೆಯವರೆಗೂ ಮಾತನಾಡಲಿ, ನಂತರ calling attention ತೆಗೆದುಕೊಳ್ಳಿ.

ಶ್ರೀ ಉಮೇಶ್ ವಿ.ಕತ್ತಿ: ಯಾರು ಮಾತನಾಡಬಾರದು ಎಂದು ಹೇಳಿದ್ದಾರೆ ಎನ್ನುವ ಸತ್ಯಸಂಗತಿಯನ್ನು ಅವರು ಹೇಳಲಿ.

ಛೇರ್ಮನ್: ಕಾಲ ಮಹತ್ವದ್ದಾಗಿದೆ. ಮಾನ್ಯ ರೇವಣ್ಣನವರೆ ಈಗಲೇ ಮಾತನಾಡಿ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಉಮೇಶ್ ಕತ್ತಿಯವರು ಸತ್ಯ ಸಂಗತಿ ಹೇಳಿ ಎಂದು ಹೇಳುತ್ತಿದ್ದಾರೆ ಅವರ ಹತ್ತಿರ ಎಲ್ಲಾ ವಿಷಯ ತಿಳಿದುಕೊಂಡು ಒಟ್ಟಿಗೆ ನಾಳೆ ಮಾತನಾಡುತ್ತೇನೆ.

(ಗೊಂದಲ)

ಛೇರ್ಮನ್: ಇವತ್ತು ನೀವು ಹೇಳಬೇಕಾಗಿರುವುದನ್ನೆಲ್ಲಾ ಹೇಳಿದ್ದೀರಿ ಹೇಳುವುದಕ್ಕೆ ಮತ್ತೆ ಏನಿದೆ? ಇನ್ನೂ ಅರ್ಧ ಗಂಟೆ ತೆಗೆದುಕೊಂಡು ಮಾತನಾಡಿ. calling attention ಆರು ಗಂಟೆಯ ನಂತರ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, speaker ಅವರ ಅನುಮತಿ ತೆಗೆದುಕೊಂಡಿದ್ದೇನೆ, ಎಲ್ಲರೂ ನನ್ನ ತಲೆ ಕೆಡಿಸುತ್ತಿದ್ದಾರೆ ನಾಳೆ ಬೆಳಗ್ಗೆ fresh ಆಗಿ ಬಂದು ಅರ್ಧ ಗಂಟೆ ಮಾತನಾಡುತ್ತೇನೆ.

ಛೇರ್ಮನ್: ತಾವು ಈಗ ಮಾತನಾಡಿ ಮುಗಿಸಿದರೆ ಬೇರೆಯವರಿಗೂ ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಲು ಆಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ: ನಾಳೆ half an hour ನಲ್ಲಿ ಮಾತನಾಡಿ ಮುಗಿಸುತ್ತೇನೆ. ಈಗ ಗಮನ ಸೆಳೆಯುವ ಸೂಚನೆ ಇದೆ, ಈಗ ನಾನು ಮಾತನಾಡಿದರೆ ಕೆಲವು ಸದಸ್ಯರು ನನ್ನ ಮೇಲೆ ಕೋಪ ಮಾಡಿಕೊಳ್ಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್: ಸಭಾಧ್ಯಕ್ಷರೆ, ತಾವು ಈಗ ಅನುಮತಿ ಕೊಟ್ಟ ಮೇಲೆ ಅವರು ಮಾತನಾಡಿ ಮುಗಿಸಬೇಕು. ಇಲ್ಲದಿದ್ದರೆ ಈ subject incomplete ಆಗುತ್ತದೆ. ಮತ್ತೆ ನಾಳೆ ಇದೇ points repeat ಆಗುತ್ತದೆ. Again and again repeat ಆಗುತ್ತದೆ.

ಛೇರ್ಮನ್: ಬೇರೆಯವರಿಗೆ ಮಾತನಾಡಲು ಅನುಮತಿ ಕೊಟ್ಟರೆ ನಿಮಗೆ ಮಾತನಾಡಲು ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಈಗ ಬೇರೆ ಯಾವ ಸದಸ್ಯರೂ calling attention ಗೆ insist ಮಾಡುತ್ತಿಲ್ಲ, ಸಭಾಧ್ಯಕ್ಷರು ತಾವೂ insist ಮಾಡುತ್ತಿಲ್ಲ. ಈಗ ಅವರು ಮಾತನಾಡುವುದು complete ಆಗಲಿ.

ಛೇರ್ಮನ್: ಮಾನ್ಯ ರೇವಣ್ಣನವರೆ, ನೀವು ಮಾತನಾಡುವುದು complete ಆಯಿತು ಎಂದು ತಿಳಿದುಕೊಂಡು ಮತ್ತೆ ಬೇರೆ ಸದಸ್ಯರನ್ನು ಕರೆಯಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಹೇಳುತ್ತೇನೆ, ಯಾವುದೂ repeat ಮಾಡುವುದಿಲ್ಲ. ನಾಳೆ fresh ವಿಷಯವನ್ನೇ ಹೇಳುತ್ತೇನೆ.

ಛೇರ್ಮನ್: ಮಾನ್ಯ ರೇವಣ್ಣನವರೆ, ವೇಳೆ ಮಹತ್ವದ್ದಾಗಿದೆ. ನೀವು ಈಗ ಹೇಳಬೇಕಾದಂತಹ ವಿಷಯಗಳನ್ನೆಲ್ಲಾ ಹೇಳಿದ್ದೀರಿ.

ಶ್ರೀ ಹೆಚ್.ಡಿ. ರೇವಣ್ಣ: ಮೂರು ಮೂರು ದಿನ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನನಗೆ ಅರ್ಧ ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಛೇರ್ಮನ್: ಆಯಿತು ನೀವು ಈಗ ಅರ್ಧ ಗಂಟೆ ಮಾತನಾಡಿ. ನಾವು ಆರು ಗಂಟೆಗೆ calling attention ಅನ್ನು ತೆಗೆದುಕೊಳ್ಳುತ್ತೇವೆ. ಈಗ ಯಾರದ್ದೂ pressure ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಸನ್ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ರೇವಣ್ಣನವರೆ, ತಾವು ಪ್ರತಿಪಕ್ಷದ ಉಪ ನಾಯಕರಾಗಿದ್ದೀರಿ. ಈ ಕಾರ್ಯಕಲಾಪದ ರೀತಿಯನ್ನು ನೋಡಿದರೆ ನನಗೆ ಅರ್ಥವಾಗದೇ ಇರುವುದೆಂದರೆ, ಇಂತಹ ಮಹತ್ವವಾದ ಚರ್ಚೆ ಆಗುವಂತಹ ಕಾಲದಲ್ಲಿ ಅದಕ್ಕೆ ಗಂಭೀರತೆ ಬರಬೇಕೆಂದರೆ ಏಳು ಗಂಟೆಯವರೆಗೂ ಕುಳಿತುಕೊಳ್ಳೋಣ. ಚರ್ಚೆ ಮುಗಿಯಬೇಕು. ನಾಳೆ ಇನ್ನೊಬ್ಬರು ಮಾತನಾಡಬೇಕು. ಯಾವುದೋ ವಿಶೇಷ ಕಾರಣಕ್ಕಾಗಿ ವಿರೋಧಪಕ್ಷದ ನಾಯಕರು, ನಾನು ನಾಳೆ ಮಾತನಾಡುತ್ತೇನೆಂದು ಹೇಳಿದರು. ಇವತ್ತು ಪ್ರಾರಂಭ ಮಾಡಿದ್ದಾರೆ. ಏಳು ಗಂಟೆಯವರೆಗೂ ಮಾತನಾಡಿ ಮುಗಿಸಿ. ನಂತರ calling attention ತೆಗೆದುಕೊಳ್ಳೋಣ. ಇದಕ್ಕಿಂಥ ಹೆಚ್ಚು ಮಹತ್ವವಾದದ್ದು ಬೇರೆ ಏನಿದೆ? ನಾನು ಇಲ್ಲಿ ಸಭಾ ನಾಯಕನಾಗಿ ಈ ಮಾತನ್ನು ಹೇಳುತ್ತಿದ್ದೇನೆ. Speakerರವರು ಮಾತನ್ನು ಮುಗಿಸಿ ಎಂದು ನಿಮಗೆ ಹೇಳುತ್ತಿದ್ದಾರೆ. ನೀವು ನಾಳೆ ಮಾತನಾಡುತ್ತೇನೆ ಎಂದು ಹೇಳಿದರೆ ಹೇಗೆ? ಈ ಪದ್ದತಿ ಯಾವಾಗಲಾದರೂ ನಡೆದುಕೊಂಡು ಬಂದಿದೆಯೇ? ಹೊಸ ಹೊಸ ಸಂಪ್ರದಾಯಗಳನ್ನು ಏಕೆ ಹುಟ್ಟುಹಾಕುತ್ತೀರಿ? ಇದರಿಂದ ಹೊಸ ಸದಸ್ಯರು ಏನು ತಿಳಿದುಕೊಳ್ಳಬೇಕು?

ಶ್ರೀ ಹೆಚ್.ಡಿ. ರೇವಣ್ಣ: ನಾನು ಸಭಾನಾಯಕರಲ್ಲಿ ಮನವಿ ಮಾಡುವುದು ಇಷ್ಟೆ. ನಾನು ಹೊಸ ಸಂಪ್ರದಾಯ ಏನೂ ಹಾಕುತ್ತಿಲ್ಲ. Speaker ರವರು ಐದು ಗಂಟೆಯವರೆಗೂ ಮಾತ್ರ ನೀವು ಮಾತನಾಡಿ ನಾಳೆ ಬೆಳಗ್ಗೆ.....

ಶ್ರೀ ಬಿ.ಎಸ್. ಯಡಿಯೂರಪ್ಪ: ಅವರೂ Speaker ಸ್ವಾಮಿ. ಆ ಕುರ್ಚಿಯಲ್ಲಿ ಕುಳಿತಾಗ Speaker ಆಗಿ ಅವರು ಹೇಳುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ತಮ್ಮನ್ನು request ಮಾಡುತ್ತಿದ್ದೇನೆ.

ಛೇರ್ಮನ್: ಈಗ ಸಭಾ ನಾಯಕರು ಹೇಳುತ್ತಿರುವುದೇನೆಂದರೆ, ವೇಳೆ ಮಹತ್ವದ್ದು ಇದೆ. ಈಗಾಗಲೇ ತಾವು ಸಾಕಷ್ಟು discussion ಮಾಡಿದ್ದೀರಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೆ, ನಾನು ಏನು ಸಲಹೆ ಕೊಡುತ್ತಿದ್ದೇನೆಂದರೆ, ಕಳೆದ 10–11 ದಿವಸದಿಂದಲೂ ಚರ್ಚೆಯಾಗುತ್ತಿದೆ. ಏಳು ಗಂಟೆಯಾದರೂ ಆಗಲಿ, ಅವರು ಮಾತನಾಡಿ ಮುಗಿಸಿದರೆ, ನಂತರ ನೀವು calling attention ಅನ್ನು ತೆಗೆದುಕೊಳ್ಳಿ. ನಾವು ಎಂಟು ಗಂಟೆಯವರೆಗೂ ಬೇಕಾದರೆ ಕುಳಿತುಕೊಳ್ಳಲು ಸಿದ್ಧರಿದ್ದೇವೆ. ದಯಮಾಡಿ ಈ ಒಂದು ಕಾರ್ಯಕಲಾಪ ತೆಗೆದುಕೊಂಡಿರುವುದನ್ನು ಪೂರ್ಣ ಮಾಡುವುದಕ್ಕೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರಲ್ಲಿ ಮನವಿ ಮಾಡುವುದೇನೆಂದರೆ.....

ಅಧ್ಯಕ್ಷರು: ತಾವು ಸಮಯವನ್ನು ತೆಗೆದುಕೊಂಡು ದಯಮಾಡಿ ಮಾತನಾಡಿ ಮುಗಿಸಿ. ಮತ್ತೆ ನಾಳೆ ಇದೇ ವಿಷಯ ಚರ್ಚೆ ಮಾಡುವುದು ಬೇಡ.

(ಗೊಂದಲ)

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ ತಾವು ಬೇಗ ಮಾತನಾಡಿ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ: ಸಾರ್, ಮೊದಲೇ ನಿಮ್ಮ ಹತ್ತಿರ personal ಆಗಿ request ಮಾಡಿಕೊಂಡಿದ್ದೇನೆ.

ಅಧ್ಯಕ್ಷರು: ನೀವು ಹೇಳಿದ ತಕ್ಷಣ ಹಾಗೆಯೇ ಮಾಡಬೇಕೆಂದರೆ ಆಗುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ನಾಳೆ ಬೆಳಗ್ಗೆ half an hour ಕೊಡಿ ಮಾತನಾಡಿ ಮುಗಿಸುತ್ತೇನೆ.

ಅಧ್ಯಕ್ಷರು: ತಾವು ದಯವಿಟ್ಟು ಮಾತನಾಡಿ ಮುಗಿಸಿ ಇಲ್ಲದಿದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಸಾರ್, ನಾಳೆ ಬೆಳಗ್ಗೆ ಮಾತನಾಡಲು ಅವಕಾಶ ಕೊಡಿ ದಯವಿಟ್ಟು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು: ಹೊಸ ಸಂಪ್ರದಾಯ ಬೇಡ. ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇದು ಹೇಗೆ ಆಗುತ್ತದೆ? ಈಗ ಸಮಯ ಆಗಿಹೋಗಿದ್ದರೆ ನೀವು ಕೇಳುವುದರಲ್ಲಿ ಅರ್ಥ ಇದೆ. ನಿನ್ನೆ ಮಾನ್ಯ ಜಯಚಂದ್ರರವರು ಮಾತನಾಡುತ್ತಿದ್ದಾಗ ಸಮಯ ಆಯಿತು ಆದ್ದರಿಂದ ನಾಳೆ ಮಾತನಾಡಿ ಎಂದು ಹೇಳಿದೆ. ಆದರೆ ಈಗ ಸಮಯ ಸಾಕಷ್ಟು ಇದೆ. ದಯವಿಟ್ಟು ಮುಂದುವರೆಸಿ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೆ, ಇದು ನಾಲ್ಕನೆ ದಿವಸ. ದಯವಿಟ್ಟು ಇವತ್ತು ಅವರು ಮಾತನಾಡಿ ಮುಗಿಸಲಿ. ಮಾನ್ಯ ಮುಖ್ಯಮಂತ್ರಿಗಳು ನಾಳೆಯಾದರೂ

ಉತ್ತರ ಕೊಡಲಿ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ತಾವು ಮುಂದುವರೆಸಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಎರಡೇ ನಿಮಿಷ ಮಾನ್ಯ ಕಾನೂನು ಮಂತ್ರಿಗಳು ಇಷ್ಟೆಲ್ಲಾ ಹೇಳುತ್ತಾರಲ್ಲಾ, ಮಾನ್ಯ ಸಿದ್ದರಾಮಯ್ಯನವರಿಗೆ ಮಾತನಾಡಲು ಮೂರು ದಿವಸ ಅವಕಾಶ ಕೊಟ್ಟಿದ್ದೀರಿ. ಮಾನ್ಯ ಜಯಚಂದ್ರರವರಿಗೆ ಎರಡು ದಿನ ಕೊಟ್ಟಿದ್ದೀರಿ. ಏನು ಒಬ್ಬರು 27 ಜನ ಸದಸ್ಯರಿರುವ ನಾಯಕರಿಗೆ ಈ ರೀತಿ ಮಾಡಿದರೆ ಹೇಗೆ? ಬೆಳಗ್ಗೆಯೇ ಮಾತನಾಡಲು ಅವಕಾಶ ಕೊಟ್ಟಿದ್ದರೆ, ನಾನು ಬೇಡ ಎಂದು ಹೇಳಿದ್ದೇನಾ?

ಅಧ್ಯಕ್ಷರು: ಹಾಗಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಶಿವಲಿಂಗೇಗೌಡರು ಮಾತನಾಡಿ ಏನೂ ಉಳಿಸದೇ ಮಾತನಾಡಿ ಆಯಿತು. ಇವತ್ತು ತಾವು ಮಾತನಾಡಿ ಮುಗಿಸಿ.

ಶ್ರೀ ಹೆಚ್. ಡಿ. ರೇವಣ್ಣ: ನನಗೂ ಇವತ್ತು ಸ್ವಲ್ಪ ಹುಷಾರಿಲ್ಲ. ನಾಳೆ ಬೆಳಗ್ಗೆ ಅರ್ಧ ಘಂಟೆ ಕಾಲಾವಕಾಶ ಕೊಡಿ.

ಅಧ್ಯಕ್ಷರು: No, no.

ಶ್ರೀ ಎಸ್. ಸುರೇಶ್ ಕುಮಾರ್: ನಾನು ರೇವಣ್ಣನವರ ಅನೇಕ ಮಾತುಗಳನ್ನು ಒಪ್ಪಿಕೊಳ್ಳುತ್ತೇನೆ. ಈಗ ಹೇಳಿದರಲ್ಲಾ ಆ ಮಾತನ್ನು ಒಪ್ಪಿಕೊಳ್ಳುವುದಿಲ್ಲ. ಅವರು ಕಲ್ಲು ಗುಂಡಿನಂತೆ ಇದ್ದಾರೆ.

(ಗೊಂದಲ)

ಅಧ್ಯಕ್ಷರು: ನಾನು ಹೇಳುವುದನ್ನ ಕೇಳಿ, ಮೊದಲನೇ ದಿವಸ ಮಾತನಾಡಿದಾಗ ವಿರೋಧಪಕ್ಷದ ನಾಯಕರು, ಮಾನ್ಯ ಮುಖ್ಯಮಂತ್ರಿಗಳು ಇರಬೇಕೆಂದು ಕೇಳಿದರು ಅವರು ಕಾರ್ಯಕ್ರಮದ ನಿಮಿತ್ತ ಹೋಗುತ್ತೇನೆ ಎಂದು ಹೇಳಿದರು ಅದಕ್ಕೆ ಅದನ್ನು ಮುಂದೂಡಲಾಗಿದೆ. ಎರಡನೇ ದಿವಸ ಸಮಯವಾಗಿದ್ದಕ್ಕೆ ಮುಂದೂಡಲಾಗಿದೆ ಹೊರತು ಅವರಿಗೆ special ಎಂದು ಏನೂ ಕೊಡಲಿಲ್ಲ. ಏಕೆ ಸುಮ್ಮನೆ ತಪ್ಪು ಅರ್ಥವನ್ನು ಮಾಡಿಕೊಳ್ಳುತ್ತೀರಿ? ದಯವಿಟ್ಟು ತಾವು ಮಾತನಾಡುವುದನ್ನು ಮುಂದುವರೆಸಿ.

ಒಬ್ಬ ಮಾನ್ಯ ಸದಸ್ಯರು: ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರಲ್ಲಾ

ಅಧ್ಯಕ್ಷರು: ಇಲ್ಲದಿದ್ದರೆ ನಾನು ನಿಮ್ಮ ಮಾತು ಮುಗಿದಿದೆ ಎಂದು ತಿಳಿದು ಬೇರೆಯವರನ್ನು ಕರೆಯಬೇಕಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ನಾನು ನನ್ನ ಮಾತನ್ನು

ಮುಗಿಸುವ time ನಲ್ಲಿ ಕಾಲವಾಯಿತು ಆಗ ನಾಳೆ ಮಾತನಾಡಿ ಎನ್ನುವ ಮನವಿ ಮಾನ್ಯ ಮುಖ್ಯಮಂತ್ರಿಗಳಿಂದ ಹಾಗೂ ತಮ್ಮಿಂದಲೂ ಬಂತು. ಅದನ್ನು ನಾನು ಒಪ್ಪಿಕೊಂಡೆ.

ಅಧ್ಯಕ್ಷರು: ಸಮಯ ಆಗಿತ್ತೆ ವಿನಃ ಇನ್ನೇನೂ ಇಲ್ಲ. ಆಗ ಸಮಯ 6–20 ಆಗಿತ್ತು

ಶ್ರೀ ಟಿ. ಬಿ. ಜಯಚಂದ್ರ: ನನ್ನ ಮನವಿ ಏನೆಂದರೆ ಮಾನ್ಯ ಅಧ್ಯಕ್ಷರೆ, ಏಕೆಂದರೆ ಅವರು ಪದೇ ಪದೇ ಅವರಿಗೆ ಮೂರು ದಿವಸ ಮಾತನಾಡಲು ಅವಕಾಶ ಕೊಟ್ಟಿರಿ, ನಾಲ್ಕು ದಿವಸ ಕೊಟ್ಟಿರಿ ಎಂದು ಹೇಳುವುದು ಬೇಡ.

ಅಧ್ಯಕ್ಷರು: ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ

ಶ್ರೀ ಟಿ. ಬಿ. ಜಯಚಂದ್ರ: ಈಗ Parliamentary Affairs Minister ರವರು ಇಲ್ಲಿದ್ದಾರೆ. ಆಯಿತು ನಾಲ್ಕು ದಿವಸ ಚರ್ಚೆಯಾಗಿದೆ. ಅದನ್ನು ಅಂತಿಮಾವಾಗಿ, ಏಕೆಂದರೆ ಬೇರೆ ಬೇರೆ ವಿಷಯಗಳು ಪ್ರಸ್ತಾಪವಾಗಬೇಕಾಗಿವೆ. ನಾವು ಚರ್ಚೆ ಮಾಡುವ ಮುಖೇನ ಸರ್ಕಾರಕ್ಕೆ ಹೆಚ್ಚು ಉಪಯುಕ್ತವಾಗುತ್ತದೆ. ಆ ಕಾರಣಕ್ಕೋಸ್ಕರ ಬೇರೆ ಬೇರೆ ವಿಚಾರಗಳು ಇರುವುದರಿಂದ ಆದಷ್ಟು ಬೇಗ ಯಾವತ್ತು reply, ಯಾವತ್ತು ಮುಗಿಸುವುದು ಎನ್ನುವುದನ್ನು ಅಂತಿಮವಾಗಿ ಹೇಳಿದರೆ ಒಳ್ಳೆಯದು. ಏಕೆಂದರೆ ನಮ್ಮ ಕಡೆಯವರೂ ಇನ್ನೂ ಮಾತನಾಡುವವರು ಇದ್ದಾರೆ ಅವರನ್ನು ನಿಯಂತ್ರಣ ಮಾಡಲು ಅನುಕೂಲವಾಗುತ್ತದೆ. ದಯಮಾಡಿ ಅದಕ್ಕೆ ಏನಾದರೂ ಒಂದು ತೀರ್ಮಾನ ಮಾಡಿದರೆ ಒಳ್ಳೆಯದು.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಜಯಚಂದ್ರರವರು ಬಹಳ ಒಳ್ಳೆಯ point ಹೇಳಿದ್ದಾರೆ, ನಾಲ್ಕನೆಯ ದಿವಸ, ಮಾನ್ಯ ಅಧ್ಯಕ್ಷರೆ, ನನ್ನ ಮನವಿ ಏನೆಂದರೆ, ಈಗಲೂ ಕೂಡ ರಾಜ್ಯದ ಅನೇಕ ಮಹತ್ವದ ವಿಚಾರಗಳು ಇವೆ, ಇಲಾಖೆಗಳ ಮೇಲೆ ಚರ್ಚೆ ಪ್ರಾರಂಭ ಮಾಡಬೇಕಾಗಿದೆ. ಬಿಲ್‌ಗಳು ಇವೆ. ಅದಕ್ಕೋಸ್ಕರ ಇವತ್ತು ನಾವು ಎಷ್ಟೊತ್ತಾದರೂ ಸಮಯ ಕೊಡೋಣ ಚರ್ಚೆಯನ್ನು ಮುಗಿಸಿ. ನಾಳೆ ಮೊದಲು ಮಾನ್ಯ ಮುಖ್ಯಮಂತ್ರಿಗಳ reply, ಅನಂತರ ಬೇರೆ ವಿಷಯಗಳನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ತಾವು ಈಗ ಮಾತನಾಡಿದ್ದರೆ ಸುಮಾರು ಮುಗಿದು ಹೋಗುತ್ತಿತ್ತು.

ಶ್ರೀ ಹೆಚ್. ಡಿ. ರೇವಣ್ಣ: ನಾಳೆ ಶಾಸ್ತ್ರ ಕೇಳಿಕೊಂಡು ಬಂದು ಹೇಳಿ ಎಂದು ಕೆಲವು ಹಿರಿಯ ಸಚಿವರು ಹೇಳಿದ್ದಾರೆ. ಮಂತ್ರಿಗಳಾದರೂ ತಾವು ಬೆಲೆ ಕೊಡಬೇಡವೇ? ನಮಗೆ ಬಿಡಿ. ನಮಗೆ ಕೊಡುವುದು ಬೇಡ.

ಅಧ್ಯಕ್ಷರು: ಮಂತ್ರಿಗಳು ಹೇಳುತ್ತಾರೆಂದು ಕೇಳಿದರೆ ಸಭೆ ನಡೆಸಬೇಕಲ್ಲವೆ? ಈಗ ತಾವು ಮಾತನಾಡುವುದನ್ನು ದಯವಿಟ್ಟು ಮುಂದುವರೆಸಿ.

ಶ್ರೀ ಹೆಚ್. ಡಿ. ರೇವಣ್ಣ: ಸಾರ್, ನನಗೆ ನಾಳೆ half an hour ಕೊಡಿ ಅಷ್ಟೆ ಎಂದು ನಾನು ಮನವಿ ಮಾಡುತ್ತಿದ್ದೇನೆ.

ಅಧ್ಯಕ್ಷರು: ನಾನು ಮತ್ತೆ ಮತ್ತೆ ತಮ್ಮಲ್ಲಿ ವಿನಂತಿ ಮಾಡುತ್ತೇನೆ, ತಾವು ಮಾತನಾಡುವುದನ್ನು ಮುಂದುವರೆಸಿ.

ಶ್ರೀ ಹೆಚ್. ಡಿ. ರೇವಣ್ಣ: ನಾನು ಅವರ ಬಗ್ಗೆ ಇವರ ಬಗ್ಗೆ ಹೇಳುವುದಿಲ್ಲ.

ಅಧ್ಯಕ್ಷರು: ಈಗ ಅನಿವಾರ್ಯ ಆಗಿದ್ದರೆ ನಾಳೆ ಮಾತನಾಡಿ ಎಂದು ಹೇಳುತ್ತಿದ್ದೆ. ಇನ್ನೂ ಕಾಲಾವಕಾಶ ಸಾಕಷ್ಟು ಇದೆ. ದಯವಿಟ್ಟು ಮಾತನಾಡಿ ಮುಗಿಸಿ.

ಶ್ರೀ ಹೆಚ್. ಡಿ. ರೇವಣ್ಣ: ದಯವಿಟ್ಟು ನಾಳೆ ನನಗೆ ಅರ್ಧ ಗಂಟೆ ಕೊಡಿ ಸಾರ್.

ಅಧ್ಯಕ್ಷರು: ಇಲ್ಲ ಈ ತರಹ ನೀವು ಬೇರೆ ಸಂಪ್ರದಾಯ ಹಾಕಬಾರದು

ಶ್ರೀ ಹೆಚ್. ಡಿ. ರೇವಣ್ಣ: ಇನ್ನೂ ಒಂದೂವರೆ ಗಂಟೆಯಾಗುತ್ತದೆ ಚರ್ಚೆ ಮಾಡೋಣವೇ?

ಅಧ್ಯಕ್ಷರು: ಆಯಿತು ಮಾಡಿ

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಳೆದ 5 ವರ್ಷದಲ್ಲಿ ಯಾವ್ಯಾವ ವರ್ಷದಲ್ಲಿ ಯಾವ್ಯಾವ ರಾಷ್ಟ್ರಕ್ಕೆ ರಫ್ತಾಗಿದೆ ಎಂದರೆ, 2004-05 ರಲ್ಲಿ 64.7 ಕೋಟಿ, 2005-06ರಲ್ಲಿ 82 ಕೋಟಿ, 2006-07ರಲ್ಲಿ 81 ಕೋಟಿ, 2007-08ರಲ್ಲಿ 95.26 ಕೋಟಿ, 2008-09 ರಲ್ಲಿ 95.24 ಕೋಟಿ. ಕಳೆದ 5 ವರ್ಷದಲ್ಲಿ ಇದರಲ್ಲಿ ಸರ್ಕಾರದ ಬೊಕ್ಕಸಕ್ಕೆ ಸೇರಿದ್ದು ಕೇವಲ 418 ಕೋಟಿ. ಇವತ್ತು ಹೊರ ರಾಷ್ಟ್ರಕ್ಕೆ ಎಷ್ಟು ಅದಿರು ರಫ್ತಾಗಿದೆ? ನಮ್ಮ ರಾಜ್ಯದಿಂದ ಯಾವ್ಯಾವ ಕಂಪನಿಗಳು ಎಷ್ಟೆಷ್ಟನ್ನು ರಫ್ತು ಮಾಡಿದ್ದಾರೆ ಎಂಬುದನ್ನು ಮುಖ್ಯಮಂತ್ರಿಗಳು ಹೇಳಲಿ ಏಕೆಂದರೆ ಅದು ಅವರ ಖಾತೆಯಲ್ಲಿದೆ. ವರ್ಷವಾರು ಯಾವ್ಯಾವ ಕಂಪನಿಯಿಂದ ಯಾವ್ಯಾವ ರಾಷ್ಟ್ರಕ್ಕೆ ರಫ್ತಾಗಿದೆ? ರಫ್ತಾಗುವ ಸಂದರ್ಭದಲ್ಲಿ ಕೆಲವು ಕಡೆ route deviation ಆಗಿದೆ ತಾವು ತನಿಖೆಯನ್ನು ಮಾಡಿದಾಗ route deviation ಯಾವ ಉದ್ದೇಶಕ್ಕಾಗಿ ಮಾಡಿದರು ಎಂಬುದು ಗೊತ್ತಾಗುತ್ತದೆ. ಒಂದೊಂದು ರಾಷ್ಟ್ರದಲ್ಲೂ ಅದಿರಿಗೆ ಒಂದೊಂದು ರೇಟ್ ಇದೆ. ಈ ರಾಜ್ಯದಲ್ಲಿ ಮತ್ತು ಹೊರ ರಾಜ್ಯದ ಯಾವ್ಯಾವ ಬಂದರುಗಳಲ್ಲಿ ಅದಿರು ರಫ್ತಾಗುತ್ತಿದೆ ಅದು ಕೃಷ್ಣಪಟ್ಟಂ, ಕಾರವಾರ, ಚೆನ್ನೈ ಬಂದರುಗಳು ಇರಬಹುದು. ಯಾವ್ಯಾವ ಬಂದರುಗಳು ಎಂಬುದನ್ನು

ಮುಖ್ಯಮಂತ್ರಿಗಳೇ ಸಭೆ ಗಮನಕ್ಕೆ ತಂದರು. ಈ ರಾಜ್ಯದ ಯಾವ್ಯಾವ ಜಿಲ್ಲೆಯಿಂದ ಹೊರ ದೇಶಕ್ಕೆ ಎಷ್ಟು ಅದಿರು ರಫ್ತಾಗಿದೆ? ಅದರಿಂದ ರಾಜ್ಯ ಸರ್ಕಾರಕ್ಕೆ ಸುಂಕದ ಮೂಲಕ ಎಷ್ಟು ಬಂದಿದೆ? ಕೇಂದ್ರ ಸರ್ಕಾರಕ್ಕೆ ಎಷ್ಟು ಬಂದಿದೆ? ಕೆಲವು ಕಡೆ ಡೀವಿಯೇಟ್ ಆಗಿರುವ ಬಗ್ಗೆ ಏನಾದರು ಇದೆಯೇ ಎಂಬ ಬಗ್ಗೆ ಮುಖ್ಯಮಂತ್ರಿಗಳು ಹೇಳಬೇಕು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳೇ ಆ ಖಾತೆಯನ್ನು ವಹಿಸಿದ್ದಾರೆ. ನೋಡಿ ಈಗ ಮುಖ್ಯಮಂತ್ರಿಗಳು ಇಲ್ಲ. ನಾನು ಹೇಗೆ ಮಾತನಾಡಲಿ? ಅವರು ನನ್ನನ್ನು ಮಾತನಾಡಿ ಎಂದು ಹೇಳಿ ಹೋದರು. ಅದಕ್ಕೆ ನಾನು ನಾಳೆ ಬೆಳಿಗ್ಗೆ ಮಾತನಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಅವರು ಬರುತ್ತಾರೆ, ನಾವು ಇದ್ದೇವೆ ಮತನಾಡಿ

ಶ್ರೀ ಹೆಚ್. ಡಿ. ರೇವಣ್ಣ: ದಯಮಾಡಿ ಸಭಾನಾಯಕರು ಇರಬೇಕು. ಇಲ್ಲದಿದ್ದರೆ ನಾನು ಯಾರಿಗೆ ಮಾತನಾಡಲಿ? ಗಣಿ ಮತ್ತು ಅರಣ್ಯ ಅವರದ್ದೇ ಖಾತೆ.

ಅಧ್ಯಕ್ಷರು: ಬರುತ್ತಾರೆ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ: ಇಲ್ಲಾ ದಯಮಾಡಿ ನಾನು ಬೆಳಿಗ್ಗೆ ಮಾತನಾಡುತ್ತೇನೆ. ಅವರು ಮೂಡನ್ನು ಹಾಳು ಮಾಡುತ್ತಿದ್ದಾರೆ. ದಯಮಾಡಿ ನೀವು ಮಧ್ಯಕ್ಕೆ ಬರಬೇಕು. ಮುಖ್ಯಮಂತ್ರಿಗಳು ಇಲ್ಲ. ನಾಳೆ ಬೆಳಿಗ್ಗೆ ಅರ್ಧಗಂಟೆ ಮಾತನಾಡುತ್ತೇನೆ. ದಯಮಾಡಿ ಮನವಿ ಮಾಡುತ್ತೇನೆ.

ಶ್ರೀ ಸಿದ್ದು ಸವದಿ: ರೇವಣ್ಣನವರ ಹತ್ತಿವಿರುವ ಬಂಡವಾಳವೆಲ್ಲಾ ಖಾಲಿ ಆಗಿದೆ. ಅವರ ಹತ್ತಿರ ಈಗ ಏನೂ ಇಲ್ಲ. ಎಲ್ಲಾ ಮುಗಿದುಹೋಗಿದೆ. ಆದ್ದರಿಂದ ಮುಕ್ತಾಯ ಮಾಡಿ ಬೇರೆಯವರಿಗೆ ಅವಕಾಶ ಕೊಡಿ.

ಶ್ರೀ ಸರೇಶ್ ಕುಮಾರ್: ನಾನು ಈ ಕಡೆಯವರನ್ನೆಲ್ಲಾ ಮನವಿ ಮಾಡಿಕೊಳ್ಳುತ್ತೇನೆ. ಎಷ್ಟೇ ಪ್ರಚೋದನೆ ಇದ್ದರು ಏನೇ ಪ್ರೇರಣೆ ಇದ್ದರು ಕೂಡ ನಾವು ಇನ್ನು ಅದಕ್ಕೆ ಸ್ಪಂದಿಸುವುದಿಲ್ಲ ಅವರು ಭಾಷಣವನ್ನು ಪ್ರಾರಂಭ ಮಾಡಲಿ.

ಶ್ರೀ ಬಂಡೆಪ್ಪ ಕಾಶ್ಯಂಪುರ್: ತಾವೆಲ್ಲಾ ಹೇಳಿದ ಮೇಲೆ ಅವರು ಮತ್ತೆ ಪ್ರಾರಂಭ ಮಾಡಿದ್ದಾರೆ. ಈಗ ಸಭಾನಾಯಕರೆ ಇಲ್ಲ ಎಂದರೆ ಹೇಗೆ?

ಅಧ್ಯಕ್ಷರು: ಸಭಾನಾಯಕರು ಹೊರಗಡೆಯೂ ಹೋಗಬಾರದು ಎಂದರೆ ಹೇಗೆ?

ಶ್ರೀ ಹೆಚ್. ಡಿ. ರೇವಣ್ಣ: ಸಭಾನಾಯಕರು ಬರಲಿ ಮಾತನಾಡುತ್ತೇನೆ.

ಅಧ್ಯಕ್ಷರು: ಅವರು ಬರುತ್ತಾರೆ ತಾವು ಪ್ರಾರಂಭ ಮಾಡಿ ಅವರನ್ನು ಕರೆಸುತ್ತೇನೆ ತಾವು ಪ್ರಾರಂಭ ಮಾಡಿ.

ಶ್ರೀ ಹೆಚ್. ಡಿ. ರೇವಣ್ಣ: ನೀವು ಕೇವಲ ಆಡಳಿತ ಪಕ್ಷದ ಪರವಾಗಿ ಇರಬೇಡಿ. ವಿರೋಧ ಪಕ್ಷದವರನ್ನೂ ಸ್ವಲ್ಪ ಗಮನದಲ್ಲಿ ಇಟ್ಟುಕೊಳ್ಳಿ.

ಅಧ್ಯಕ್ಷರು: ಈ ಮಾತನ್ನು ಹೇಳಿದರೆ ಬಹುಶಃ....

ಶ್ರೀ ಹೆಚ್. ಡಿ. ರೇವಣ್ಣ: ನೀವು ಪರ ಎಂದು ಹೇಳುತ್ತಿಲ್ಲ. ನಮ್ಮ ಬಗ್ಗೆಯೂ ಸ್ವಲ್ಪ ನಿಗಾ ತೆಗೆದುಕೊಳ್ಳಬೇಕು. ನಿಮಗೆ ವಿರೋಧ ಪಕ್ಷದ ಕಡೆ ಜಾಸ್ತಿ ಗಮನ ಇರಬೇಕು.

ಅಧ್ಯಕ್ಷರು: ತಾವು ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹೆಚ್. ಡಿ. ರೇವಣ್ಣ: ನಿಮಗೆ ತೊಂದರೆಯಾಗಿದ್ದರೆ ವಾಪಸ್ ತೆಗೆದುಕೊಳ್ಳುತ್ತೇನೆ. ನಮ್ಮ ಪರವಾಗಿ ನೀವು ಸ್ವಲ್ಪ ಇರಬೇಕು.

ಅಧ್ಯಕ್ಷರು: ನೀವು ಆಡಳಿತ ಪಕ್ಷದ ಪರವಾಗಿದ್ದೀರಿ ಎಂದರೆ ಸಣ್ಣ ವಿಚಾರವೇ? No.

ಶ್ರೀ ಹೆಚ್. ಡಿ. ರೇವಣ್ಣ: ನೀವು ಆಡಳಿತ ಪಕ್ಷದ ಪರವಾಗಿದ್ದೀರೆಂದು ಹೇಳುತ್ತಿಲ್ಲ

ಅಧ್ಯಕ್ಷರು: ನೀವು ಹಿರಿಯ ಸದಸ್ಯರು ಈ ಮಾತನ್ನು ಹೇಳಿದರೆ ಹೇಗೆ? ಇದು ಸರಿಯಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಆಡಳಿತ ಪಕ್ಷದ ಕಡೆ ಹೆಚ್ಚು ಗಮನ ಕೊಡಬೇಡಿ. ನಮ್ಮ ವಿರೋಧ ಪಕ್ಷದ ಕಡೆಯೂ ಗಮನ ಕೊಡಿ.

ಅಧ್ಯಕ್ಷರು: ಇದು ಸರಿಯಲ್ಲ. ನೀವು ವಾಪಸ್ ತೆಗೆದುಕೊಳ್ಳಿ

ಶ್ರೀ ಬಿ. ಎಸ್. ಯಡಿಯೂರಪ್ಪ: (ಮಾನ್ಯ ಮುಖ್ಯಮಂತ್ರಿಯವರು) ದಾಖಲೆಗಳನ್ನು ತೆಗೆಸಿ, ಕಳೆದ ಹತ್ತು ವರ್ಷಗಳಲ್ಲಿ ಯಾವ ಮುಖ್ಯಮಂತ್ರಿ ಬೆಳಿಗ್ಗೆಯಿಂದ ಸಂಜೆಯವರೆಗೆ ಇಲ್ಲಿ ಬಂದು ಕುಳಿತು ಕಾರ್ಯಕಲಾಪ ನಡೆಸಿದ್ದಾರೆ ಎಂಬುದನ್ನು ನೋಡಿ. ನಾನು ಬೆಳಿಗ್ಗೆ ಬಂದು ಸದನ ಮುಗಿಯುವವರೆಗೆ ಇರಬೇಕು, ನನ್ನ ಡ್ಯೂಟಿ ನಾನು ಕುಳಿತುಕೊಳ್ಳುತ್ತೇನೆ. ಸಣ್ಣ ಪುಟ್ಟ ಕೆಲಸಗಳಿಗೆ ಹೊರಗಡೆ ಹೋದರೆ ಮುಖ್ಯಮಂತ್ರಿಗಳು ಇಲ್ಲ ನಾನು ಮಾತನಾಡುವುದಿಲ್ಲ ಎಂದು ಹೇಳುವುದಾದರೆ ಇದು ಎಲ್ಲಾದರು ಸಾಧ್ಯವೇ? ಈ ರೀತಿಯದ್ದನ್ನು ಇತಿಹಾಸದಲ್ಲಿ ಎಲ್ಲಿಯಾದರು ಕಂಡಿದ್ದೀರಾ? ಒಂದು ವಿಚಾರದಲ್ಲಿ ಏನಾದರು ಕೇಳುವುದಿದ್ದರೆ ನ್ಯಾಯಬದ್ಧವಾಗಿರಬೇಕು, ಜನ ಮೆಚ್ಚುವ ರೀತಿಯದ್ದಾಗಿರಬೇಕು. ಮುಖ್ಯಮಂತ್ರಿಗಳು

ಬೇರೆ ಏನು ಕೆಲಸ ಮಾಡುವುದು ಬೇಡವೇ? ಯಾರನ್ನೂ ಮೀಟ್ ಮಾಡುವುದು ಬೇಡವೇ? ಬೇರೆ ಕೆಲಸ ಕಾರ್ಯಗಳನ್ನು ಮಾಡುವುದು ಬೇಡವೇ? ನಾನು ಹೊರಗಡೆ ಕುಳಿತುಕೊಂಡು ನಿಮ್ಮೆಲ್ಲರ ಭಾಷಣ ಕೇಳುವುದಿಲ್ಲವೆ? ಈ ರೀತಿಯ ಸಂಪ್ರದಾಯವನ್ನು ಹಾಕಿಬಿಟ್ಟರೆ ಕೊನೆ ಯಾವುದು? ನಾವು ಎಲ್ಲಿಗೆ ಹೋಗಿ ಮುಟ್ಟುತ್ತೇವೆ?

ಅಧ್ಯಕ್ಷರು: ತಾವು ಮಾತನಾಡಿ, ತಾವು ಏನು ಹೇಳಿದ್ದೀರಿ ಅದನ್ನು ವಾಪಸ್ ತೆಗೆದುಕೊಳ್ಳಿ

ಶ್ರೀ ಹೆಚ್. ಡಿ. ರೇವಣ್ಣ: ಸಭಾನಾಯಕರಲ್ಲಿ ನನಗೆ ಗೌರವವಿದೆ. ಮುಖ್ಯಮಂತ್ರಿಗಳು ಬಂದು ಕೂರಬೇಕೆಂದು ಹೇಳುತ್ತಿಲ್ಲ. ಸಂಬಂಧಪಟ್ಟ ಗಣಿ ಮತ್ತು ಅರಣ್ಯ ಮತ್ತು ಹಣಕಾಸು ಖಾತೆ ಅವರ ಕೈಯಲ್ಲಿದೆ. 7 ಚೆಕ್ ಪೋಸ್ಟ್‌ನಲ್ಲಿ ಎಲ್ಲೂ ತನಿಖೆಯೇ ಆಗಿಲ್ಲ. ಮೂಟೆಗಟ್ಟಲೆ ಪರ್ಮಿಟ್‌ನ್ನು ಲೋಕಾಯುಕ್ತದವರು ತುಂಬಿಕೊಂಡು ಬಂದರು ಎಂದು ಹೇಳುತ್ತಾರೆ. ಹಾಗಾದರೆ ಆ ಚೆಕ್ ಪೋಸ್ಟ್‌ನ ನಮ್ಮ ಸರ್ಕಾರದ ಅಧಿಕಾರಿಗಳು ಕತ್ತೆ ಕಾಯುತ್ತಿದ್ದರೆ?

ಶ್ರೀ ನೇಮಿರಾಜ ನಾಯಕ: ಹೇಳಿದ್ದನ್ನೇ ಮತ್ತೆ ಮತ್ತೆ ಹೇಳಿದರೆ ಹೇಗೆ?

ಶ್ರೀ ಹೆಚ್. ಡಿ. ರೇವಣ್ಣ: ಈ ರೀತಿ ಆದರೆ ನಾವು ಮಾತನಾಡಲು ಆಗುವುದಿಲ್ಲ. ನೀವೇ ಮಾತನಾಡಿಕೊಳ್ಳಿ.

ಅಧ್ಯಕ್ಷರು: ಕುಳಿತುಕೊಳ್ಳಿ

ಶ್ರೀ ನೇಮಿರಾಜ ನಾಯಕ: ಕುಮಾರಸ್ವಾಮಿಯವರಿದ್ದಾಗ ಏನೇನು ಮಾಡಿದ್ದಾರೆ ಎಂಬುದೆಲ್ಲಾ ಈ ರಾಜ್ಯದ ಜನತೆಗೆ ಗೊತ್ತಿದೆ.

ಅಧ್ಯಕ್ಷರು: ಕುಳಿತುಕೊಳ್ಳಿ ಅವರು ಮಾತನಾಡಲಿ

ಶ್ರೀ ಹೆಚ್. ಡಿ. ರೇವಣ್ಣ: ನಾವು ಹೇಳಿದ್ದನ್ನೇ ಹೇಳುವುದು ಬೇಡ oneline resolution ಮಾಡೋಣ. ಕಳೆದ ಹತ್ತು ವರ್ಷದಲ್ಲಿ ಯಾರೇ ಮುಖ್ಯಮಂತ್ರಿ ಇರಲಿ, ಯಾವುದೇ ಸರ್ಕಾರ ಇರಲಿ, ಚರ್ಚೆಯೇ ಬೇಡ, ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಸಿ.ಬಿ.ಐ.ಗೆ refer ಮಾಡುವುದಕ್ಕೆ I am ready ಎಂದು ಒಪ್ಪಿಕೊಂಡು ಬಂದಿದ್ದಾರಲ್ಲಾ ಅದನ್ನು ಇಲ್ಲೂ ಹೇಳಿಬಿಡಲಿ, ಮತ್ತೆ ನಾನು ಮಾತನಾಡಲು ಹೋಗುವುದಿಲ್ಲ, ಚರ್ಚೆ ಮಾಡಲು ಹೋಗುವುದಿಲ್ಲ. ಈ ರಾಜ್ಯದ ಹಣವನ್ನು ಯಾರ್‍ಯಾರು ಲೂಟಿ ಮಾಡಿದ್ದಾರೆ ಹೇಳಲಿ, ವಿಧಾನ ಪರಿಷತ್ತಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿರುವುದು. ಪ್ರತಿಯನ್ನು ಕಳುಹಿಸಿಕೊಡುತ್ತೇನೆ. I am ready ಸಿ.ಬಿ.ಐ. ಎಂದು ಹೇಳಿದ್ದಾರಲ್ಲಾ oneline resolution ಆಗಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ: ಅದು ಯಾವ ದಾಖಲೆ ಕೊಡಿ. ಇಲ್ಲದನ್ನೆಲ್ಲಾ ನನ್ನ ಬಾಯಿಯಿಂದ ಏಕೆ ಹೇಳಿಸುತ್ತೀರಿ? ನನ್ನ ಬಾಯಿಯಿಂದ ಯಾವುದನ್ನು ಹೇಳಿಲ್ಲ ಅದನ್ನು ಹೇಳಿದರೆ ಹೇಗೆ? ಅದರ ದಾಖಲೆಯನ್ನು ತರಿಸಿ ಅಧ್ಯಕ್ಷರೆ, ಅದು ಯಾವ ದಾಖಲೆಯಲ್ಲಿ ನಾನು ಸಿ.ಬಿ.ಐ.ಗೆ ಒಪ್ಪಿಕೊಂಡಿದ್ದೇನೆಂದು ಹೇಳಿದ್ದೇನೆ, ದಾಖಲೆ ತರಿಸಿ.

ಶ್ರೀ ಹೆಚ್. ಡಿ. ರೇವಣ್ಣ: ನಾನು ಅದರ ಪ್ರತಿಯನ್ನು ಕಳಿಸಿಕೊಡುತ್ತೇನೆ. ನೀವು ನೋಡಿ judgment ಕೊಡಿ. ದಯಮಾಡಿ ಅದನ್ನು ಓದಿ, ನಾನು ಐದು ನಿಮಿಷ ಕುಳಿತಿರುತ್ತೇನೆ.

ಅಧ್ಯಕ್ಷರು: ತಾವು ಮಾತನಾಡಿ

ಶ್ರೀ ಹೆಚ್. ಡಿ. ರೇವಣ್ಣ: ಅದರ ಪ್ರತಿಯನ್ನು ಕೊಟ್ಟು ಸಭೆಯ ಗಮನಕ್ಕೆ ತಂದಿದ್ದೇನೆ. ಅದು ಏನು ಎಂದು ಹೇಳಿ. ಮಾನ್ಯ ಮುಖ್ಯಮಂತ್ರಿಯವರು ಅದನ್ನು ಸ್ವಲ್ಪ ಓದಲಿ. ಸಭಾನಾಯಕರಿಗೆ disturb ಮಾಡಬಾರದು ಅವರು ಓದಲಿ ನಾನು ಮಾತನಾಡುವುದಿಲ್ಲವೆಂದು ಕುಳಿತುಕೊಂಡೆ! ತಾವು ಬೇಡ ಎಂದರೆ ಮಾತನಾಡುತ್ತೇನೆ. ಏಕೆಂದರೆ ಅವರು ಕಡತವನ್ನು ಓದಬೇಕಲ್ಲವೆ? ನಾನು ಹೇಳಿದ್ದು ನಿಜವೇ? ಹೋಗಲಿ ಅದನ್ನಾದರೂ ಹೇಳಿ? ಇಲ್ಲದಿದ್ದರೆ ವಾಪಸ್ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ಅನೇಕ ದಿವಸಗಳಿಂದ ಈಗ ಇರುವಂಥ ಲೋಕಾಯುಕ್ತರ ಬಗ್ಗೆ ನಮಗೆ ಸಂಪೂರ್ಣ ವಿಶ್ವಾಸವಿದೆ, ಒಳ್ಳೆಯ ಕೆಲಸವನ್ನು ಮಡುತ್ತಿದ್ದಾರೆ ಅವರು ರಾಜೀನಾಮೆ ಕೊಡಬಾರದಿತ್ತು, ವಾಪಸ್ ಬರಬೇಕು, ಸತ್ಯ ಹೊರಕ್ಕೆ ಬರಬೇಕು ಎಂದು ಹೇಳಿದಿರಿ, ಅದಕ್ಕೆ ನಾವು ಶಕ್ತಿ ತುಂಬಲೂ ತಯಾರಿದ್ದೇವೆ. ಕೊನೆಯ ಪಕ್ಷ ಒಳ್ಳೊಳ್ಳೆಯ ತನಿಖೆಯನ್ನು ಮಾಡಬೇಕು, ಅಧಿಕಾರ ಕೊಡಲು ಸಿದ್ದರಾಗಿದ್ದೇವೆ. ಆದರೆ, ಈಗ ಲೋಕಾಯುಕ್ತರ ಬಗ್ಗೆ ವಿಶ್ವಾಸ ಹೋಗಿ ಸಿಬಿಐ ಬಗ್ಗೆ ವಿಶ್ವಾಸ ಬಂತೇ?

ಶ್ರೀ ಹೆಚ್. ಡಿ. ರೇವಣ್ಣ: ನಾನು ಹೇಳಿಲ್ಲ

ಶ್ರೀ ಬಿ. ಎಸ್. ಯಡಿಯೂರಪ್ಪ: ನೀವು ಮಾತನಾಡತಕ್ಕ ರೀತಿ ಏನು? ನೀತಿಯೇನು?

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಲ್ಲಿ....

ಶ್ರೀ ಬಿ. ಎಸ್. ಯಡಿಯೂರಪ್ಪ: ಹೌದ್ರಿ ರೇವಣ್ಣನವರೆ, ಯಾವುದೋ ಸಂದರ್ಭದಲ್ಲಿ 'I am ready' ಎಂದು ಹೇಳಿದರೆ...

ಶ್ರೀ ಹೆಚ್. ಡಿ. ರೇವಣ್ಣ: ಅಂದರೆ ಮಾನ್ಯ ಮುಖ್ಯಮಂತ್ರಿಗಳು ಸಂದರ್ಭಕ್ಕನುಗುಣವಾಗಿ ಮಾತನಾಡುತ್ತಾರೆ. ಈ ಸದನದಲ್ಲಿ ನೀವು ಸಂದರ್ಭಕ್ಕನುಗುಣವಾಗಿ ಮಾತನಾಡುತ್ತೀರಿ

ಎಂಬುದು record ಆಗಬೇಕಲ್ಲವೇ?

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ ರೇವಣ್ಣನವರೆ, ನಾನು ಹೇಳುವುದನ್ನು ಕೇಳಿ, ಆಧಾರರಹಿತವಾದಂತಹ ಮಾತುಗಳನ್ನು ಅಡಿಕೊಂಡು ಕುಳಿತುಕೊಳ್ಳುವುದರಿಂದ ಏನೂ ಉಪಯೋಗವಿಲ್ಲ. ನೀವು ಮಾನ್ಯ ಲೋಕಾಯುಕ್ತರ ಬಗ್ಗೆ ನಮಗೆ ವಿಶ್ವಾಸವಿಲ್ಲ, ಇದನ್ನು ಸಿ.ಬಿ.ಐ.ಗೆ ವಹಿಸಿ' ಎನ್ನುವುದಾದರೆ, ನೀವು ಚರ್ಚೆ ಮಾಡಿ ನೋಡೋಣ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಯಾವುದೋ ಸಂದರ್ಭದಲ್ಲಿ ನಾನು ಹೇಳಿದ್ದೆ ಎಂದು ಹೇಳಿದರು. ಅದು ಯಾವುದೋ ಸಂದರ್ಭದಲ್ಲಿ ಅಲ್ಲ. 250 ಕೋಟಿ ರೂ.ಗಳ ಬಗ್ಗೆ ತಾವು ಹೇಳಿಕೆ ಕೊಟ್ಟಿರಲ್ಲಾ, ತಾವು ಆ ಹೇಳಿಕೆ ಕೊಟ್ಟ ಕಾಪಿಯನ್ನೂ ಸಹ ಕೊಟ್ಟು ಕಳುಹಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ ಸಹಿ ಮಾಡಿ ಹೇಳಿರುವಂತಹ ಹೇಳಿಕೆಯನ್ನು ನಾನು ತಮ್ಮ ಗಮನಕ್ಕೆ ತಂದು ಬಿಡುತ್ತೇನೆ. ನಾನು ಈ ಮಾತನ್ನು ಹೇಳುತ್ತಿಲ್ಲ. ಅವರು ಹೇಳುವಾಗ ಈ ಮಾತನ್ನು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಮೊನ್ನೆ ಅಂದರೆ 1–7–2010ರಲ್ಲಿ 'I am ready, CBI' ಎಂಬ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ಆ ಸದನಕ್ಕೆ ಅಶ್ವಾಸನೆ ಕೊಟ್ಟಿದ್ದಾರೆ. ಸಂದರ್ಭಕ್ಕನುಗುಣವಾಗಿ ನಾನು ಸುಳ್ಳು ಹೇಳುತ್ತೇನೆ ಎಂದು ಅವರು ಹೇಳುವುದಾದರೆ ನಾನೇನೂ ಅದಕ್ಕೆ ಬೇಡವೆಂದು ಹೇಳುವುದಿಲ್ಲ. 210–240 ಕೋಟಿ ರೂ.ಗಳ ಅದಿರು ನನ್ನ ಇಲಾಖೆಯಲ್ಲಿ ಕಳ್ಳತನವಾಗಿದೆ ಎನ್ನುವುದನ್ನು 'ಯಡಿಯೂರಪ್ಪ' ಎಂದು ಸಹಿ ಹಾಕಿ ಹೇಳಿದ್ದಾರೆ. ಅದರ ಕಾಪಿಯನ್ನೂ ಸಹ ಕಳುಹಿಸಿಕೊಡಿ ಎನ್ನುವುದಾದರೆ, ನಾನು ಅದನ್ನೂ ಸಹ ಕಳುಹಿಸಿಕೊಡುತೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ನಾನು ಸಿ.ಬಿ.ಐ.ಗೆ ಒಪ್ಪಿಕೊಂಡಿಲ್ಲ ಎಂದು ಹೇಳುವುದಾದರೆ, ನಾನು ವಾಪಸ್ ತೆಗೆದುಕೊಳ್ಳುತ್ತೇನೆ. ಏಕೆಂದರೆ, ಇದು ಸದನ, ಮಹಾತ್ಮ ಗಾಂಧಿಯವರ ಫೋಟೋವನ್ನು ಮೇಲೆ ಹಾಕಿದ್ದೀರಿ. ಯಾವುದೋ ಸಂದರ್ಭದಲ್ಲಿ ನಾನು ಈ ರೀತಿಯಾಗಿ ಹೇಳಿದ್ದೇನೆ, ಸಿ.ಬಿ.ಐ. ಬಗ್ಗೆ ನನಗೆ ನಂಬಿಕೆ ಇಲ್ಲ ಎನ್ನುವುದಾದರೆ ಹೇಗೆ? ಒಂದು ಕಡೆ ಲೋಕಾಯುಕ್ತರು ಕಣ್ಣೀರು ಹಾಕಿದರು. ರಾಷ್ಟ್ರ ನಾಯಕರು ಬಂದು ಲೋಕಾಯುಕ್ತರ ಕಣ್ಣೀರನ್ನು ಒರೆಸಿದರು. ಮಾನ್ಯ ಅಡ್ವಾಣಿಯವರು ಫೋನ್ ಮಾಡಿ, ಇಲ್ಲಪ್ಪ, ನೀನು ಅಳಬೇಡಪ್ಪ, ನಾನು ನಿನ್ನ ಜೊತೆಗೆ ಇದ್ದೇನೆ, ನಿನ್ನ ತಂದೆ ಮತ್ತು ನಾವು ಎಲ್ಲರೂ ಕೂಡ ಜೊತೆಗಿದ್ದವರು, ನೀನು ಯಾವುದೇ ಕಾರಣದಿಂದ ಅಳುವುದು ಬೇಡ ಎಂದು ಹೇಳಿದ ಮೇಲೆಯೇ ಮಾನ್ಯ ಲೋಕಾಯುಕ್ತರು ತಮ್ಮ ರಾಜೀನಾಮೆಯನ್ನು

ವಾಪಸ್ ಪಡೆದರು. ಅದಕ್ಕಿಂತ ಮುಂಚೆ ನೀವು ಹೊರಗಡೆ ಹೋಗಿ ಸ್ವಾಮಿ ಎಂದು ಹೇಳಿದ್ದರು. ಈಗ ಸಿ.ಬಿ.ಐ. ಮೇಲೆ ನಿಮಗೆ ನಂಬಿಕೆ ಇದೆಯೇ? ಲೋಕಾಯುಕ್ತರ ಬಗ್ಗೆ ನಿಮಗೆ ನಂಬಿಕೆ ಇಲ್ಲವೇ ಎಂದುಕೇಳುತ್ತಿದ್ದಾರೆ. ನಾಳೆ ಬೆಳಿಗ್ಗೆಯೇ ಮಾನ್ಯ ಮುಖ್ಯಮಂತ್ರಿಗಳನ್ನೂ ಸೇರಿಸಿ ತನಿಖೆ ನಡೆಸಲು ಮಾನ್ಯ ಲೋಕಾಯುಕ್ತರಿಗೆ ವಹಿಸಿಕೊಡಿ, ನಮಗೆ ಅವರ ಮೇಲೆ ನಂಬಿಕೆ ಇದೆ. 'ಸಂದರ್ಭಕ್ಕನುಗುಣವಾಗಿ ನಾನು ಹೇಳಿದೆ' ಎಂದು ಸದನದಲ್ಲಿ ನೀವು ಹೇಳಿದ್ದೀರಿ 'ನಾನು ಉಳಿದುಕೊಳ್ಳಬೇಕಾಗಿತ್ತು' ಎಂಬ ಕಾರಣದಿಂದ ಅದನ್ನು ಹೇಳಿದ್ದೀರಾ ನೀರಾವರಿ ಖಾತೆಗೆ ಸಂಬಂಧಪಟ್ಟ ಪ್ರಶ್ನೆಗೆ ಉತ್ತರಿಸುವಾಗ ಮಾನ್ಯ ಎಸ್.ಆರ್. ಪಾಟೀಲ್ ಅವರಿಗೆ 'ಆ ಉದ್ದೇಶಕ್ಕೋಸ್ಕರ ನಾನು ಸಿ.ಬಿ.ಐ.ಗೆ ರೆಡಿ ಎಂದು ಹೇಳಿದೆ' ಎಂದು ಹೇಳಿ. ನಮಗೆ ಲೋಕಾಯುಕ್ತರ ಬಗ್ಗೆ ನಂಬಿಕೆ ಇದೆ. ನಾನು ರೆಡಿ ಇದ್ದೇನೆ' ಎಂದು ನೀವು ಹೇಳುವುದಾದರೆ, ಆ ಬಗ್ಗೆ ಈ ಸದನದಲ್ಲಿ oneline resolution move ಮಾಡೋಣ ನಾವಿಲ್ಲಿ ಚರ್ಚೆಯನ್ನೇ ಮಾಡುವುದು ಬೇಡ. ನಾವು ಯಾವುದನ್ನೂ ಸಹ ಚರ್ಚೆ ಮಾಡುವುದು ಬೇಡ. ನಾಳೆ ಇನ್ನೂ ಕೆಲವು ಹಗರಣಗಳ ಬಗ್ಗೆ ಚರ್ಚೆ ಮಾಡಬೇಕಾಗಿತ್ತು, ಅದೂ ಸಹ ಬೇಡ. ನಾವು oneline resolution pass ಮಾಡೋಣ. ಮುಖ್ಯಮಂತ್ರಿಗಳು, ಮಂತ್ರಿಗಳು, ವಿರೋಧ ಪಕ್ಷದ ನಾಯಕರು, ಶಾಸಕರು, ಚುನಾಯಿತ ಪ್ರತಿನಿಧಿಗಳು ಎಲ್ಲರನ್ನೂ ಲೋಕಾಯುಕ್ತ ವ್ಯಾಪ್ತಿಗೆ ತನ್ನಿ, ಕೇವಲ ಅಧಿಕಾರಿಗಳನ್ನು ಮಾತ್ರ ಲೋಕಾಯುಕ್ತ ವ್ಯಾಪ್ತಿಯಲ್ಲಿ ಏಕೆ ಇಡುತ್ತೀರಿ? ಏನು ಅಧಿಕಾರಿಗಳೇ ಕಳ್ಳರೇ? ನಾವು ರಾಜಕಾರಣಿಗಳು ಸಾಚಾಗಳೇ? ಎಲ್ಲರನ್ನೂ ನೀವು ಲೋಕಾಯುಕ್ತ ವ್ಯಾಪ್ತಿಗೆ ತನ್ನಿ. ನಾವು ಅದಕ್ಕೆ ಒಪ್ಪಿಕೊಳ್ಳುತ್ತೇವೆ. ಒಂದೋ ಲೋಕಾಯುಕ್ತರಿಗೆ ಪೂರ್ಣ ಅಧಿಕಾರ ಕೊಡಿ, ಇಲ್ಲವೆಂದರೆ ವಿಧಾನ ಪರಿಷತ್ತಿನಲ್ಲಿ ನೀವು ಸಿ.ಬಿ.ಐ.ಗೆ ಒಪ್ಪಿಕೊಂಡಿದ್ದೀರಿ ತಾನೆ? ಅವರಿಗೆ ಇದನ್ನು ವಹಿಸಿಕೊಡಿ. ಇಲ್ಲವೆಂದರೆ 'ಇನ್ನೂ ಸ್ವಲ್ಪ ದಿನಗಳು ಅಂದರೆ ಇನ್ನೆರಡು ವರ್ಷ ಅಧಿಕಾರಿಗಳು ಮೇಯ್ದುಕೊಳ್ಳಲಿ, ರಾಜಕಾರಣಿಗಳೂ ಮೇಯ್ದುಕೊಳ್ಳಲಿ, ಮಂತ್ರಿಗಳೂ ಮೇಯ್ದುಕೊಳ್ಳಲಿ' ಎಂದು ಬಿಡಿ. ನಾವು ಆಗ ಸುಮ್ಮನಿದ್ದು ಬಿಡುತ್ತೇವೆ. ನಾವು ಇನ್ನೊಂದು ವರ್ಷ ಮೇಯುವುದಕ್ಕೆ ಬಿಟ್ಟಿದ್ದೇವೆ ಸ್ವಾಮಿ, ಎಷ್ಟು ಹುಲ್ಲು ಇರುತ್ತದೋ ಅಷ್ಟನ್ನು ಮೇಯ್ದುಕೊಳ್ಳುತ್ತೇವೆ, ಆಮೇಲೆ ನೋಡೋಣ' ಎಂದು ನೀವು ಹೇಳುವುದಾದರೆ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ವಿಧಾನ ಸಭೆಯಲ್ಲಿ ಪ್ರತಿಪಕ್ಷದವರಾಗಿರುವ ನಾವು ಇದನ್ನು ಹೇಳುವುದು ತಪ್ಪೇ? ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಹೇಳಿದ್ದಕ್ಕೆ ಬದ್ಧರಾಗಿರಲಿ ಎಂದು ನಾನು ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಕಾಂಗ್ರೆಸ್‌ನ

ಹಿರಿ ಮುಖಂಡರಾದ ಮಾನ್ಯ ಎಸ್. ಆರ್. ಪಾಟೀಲ್‌ರಿಗೆ ಏನೋಂದು ಉತ್ತರವನ್ನು ಕೊಟ್ಟಿದ್ದಾರೋ, ಅದರಲ್ಲಿ 'I am ready, CBI' ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಿ.ಬಿ.ಐ.ಗೆ ಕೊಡುವುದಕ್ಕೆ ಏಕೆ ಹೆದರಬೇಕು? ಒಂದು ಕಡೆ ಸಿ.ಬಿ.ಐ.ಯಿಂದಲಾದರೂ ತನಿಖೆ ಮಾಡಿಸಿ. ಒಂದು ವೇಳೆ ಇದನ್ನು ಸಿ.ಬಿ.ಐ.ಗೆ ವಹಿಸಿದರೆ, ಮಾನ್ಯ ಜಯಚಂದ್ರರವರು, ಮಾನ್ಯ ಸಿದ್ಧರಾಮಯ್ಯನವರು ಕೇಂದ್ರ ಸರ್ಕಾರದ ಬಳಿ ಹೋಗಿ ಸರ್ಕಾರದ ಮೇಲೆ pressure ತರುತ್ತಾರೆ ಎನ್ನುವುದಾದರೆ, ಎಲ್ಲರನ್ನೂ ಲೋಕಾಯುಕ್ತರ ವ್ಯಾಪ್ತಿಗೆ ತಂದು ತನಿಖೆಗೆ ಅವರಿಗೆ ವಹಿಸಿ. ನೀವು ಏಕೆ ಹೆದರಬೇಕು? ನೀವು ಐ.ಎ.ಎಸ್. ಅಧಿಕಾರಿಗಳದನ್ನು ತನಿಖೆ ಮಾಡಲಿಕ್ಕೆ ಒಪ್ಪಿಸುತ್ತೀರಿ, ರಾಜಕಾರಣಿಗಳದ್ದನ್ನು ಒಪ್ಪಿಸಲು ಏಕೆ ಹೆದರುತ್ತೀರಿ ಸ್ವಾಮಿ? ಏನು ಭೂತ ಹೊತ್ತುಕೊಂಡಿದ್ದಾರೆಯೇ? ರಾಜಕಾರಣಿಗಳೇನು ಸ್ಪೆಷಲ್ಲಾ? ಅವರನ್ನೂ ಲೋಕಾಯುಕ್ತ ವ್ಯಾಪ್ತಿಗೆ ಕೊಡಿ. ತಪ್ಪು ಮಾಡಿದ್ದವನು ಮನೆಗೆ ಹೋಗುತ್ತಾನೆ. ಯಾರು ತಪ್ಪು ಮಾಡಿರುತ್ತಾರೋ ಅವರು ಮನೆಗೆ ಹೋಗಲಿ ಕ್ರಮ ತೆಗೆದುಕೊಳ್ಳಿ. ಅದನ್ನು ಬಿಟ್ಟು ನೀವು ಸುಮ್ಮನೆ ಇಲ್ಲ. ನಾನು ಯಾವುದೋ ಸಂದರ್ಭಕ್ಕೆ ಆ ರೀತಿ ಹೇಳಿದ್ದೆ, ಮಾನ್ಯ ರೇವಣ್ಣನವರೆ, ಆ ರೀತಿ ಮಾಡುವುದು ಬೇಡ ಎಂದರೆ ಹೇಗೆ? ಒಂದು ಕಡೆ ಸಲಹೆ ಕೊಡಿ ಎಂದು ಹೇಳುತ್ತೀರಿ. ಒಂದು ಕಡೆ ನಾನು ಸಂದರ್ಭಕ್ಕೆ ಆ ರೀತಿ ಹೇಳಿದೆ ಎನ್ನುತ್ತೀರಿ. ನಾವು ಏನು ಮಾಡಬೇಕು? ಎಂಬುದನ್ನಾದರೂ ಹೇಳಿ ಇನ್ನೊಂದು ಕೆಲಸವನ್ನಾದರೂ ಮಾಡಿ. ನಿಮ್ಮ ಶಾಸಕರ ಮೂಲಕ ನಾವು ಯಾವ ರೀತಿಯಲ್ಲಿ ಮಾತನಾಡಬೇಕು ಎಂದಾದರೂ ಹೇಳಿಸಿಬಿಡಿ. ಮಾನ್ಯ ಜಯಚಂದ್ರರವರು ಮಾತನಾಡುವಾಗ, ಅವರನ್ನು 'ಕುಳಿತುಕೊಳ್ಳಿ ಕುಳಿತುಕೊಳ್ಳಿ' ಎಂದು ಪದೇ ಪದೇ ನಿಮ್ಮ ಶಾಸಕರು ಹೇಳುತ್ತಿದ್ದರು. ಪಾಪ!, ಅವರು ಪುಸ್ತಕ ತೆಗೆದುಕೊಂಡು ನಿನ್ನೆ-ಮೊನ್ನೆ ದೆಹಲಿ programme ಎಲ್ಲವನ್ನೂ ಬಿಟ್ಟು ಮಾನ್ಯ ರೇವಣ್ಣನವರೆ, ನಾನು ಇವತ್ತು ಮಾತನಾಡಲೇಬೇಕು. ಇವತ್ತು ಮಂಗಳವಾರ, ದಿನ ಚೆನ್ನಾಗಿದೆ ಎಂದು ಮಾತನಾಡಲು ಬಂದರೆ, ಅವರಿಗೆ ಮಾತನಾಡಲಿಕ್ಕೆ ಆಡಳಿತ ಪಕ್ಷದ ಶಾಸಕರು ಬಿಡಲಿಲ್ಲ. ನಾವು ಏನು ಮಾಡೋಣ ಸಾರ್? ಹೋಗಲಿ, ವಿರೋಧ ಪಕ್ಷದವರು ಮಾತನಾಡುವುದೇ ಬೇಡ one line resolution ಮಾಡೋಣ ನಿಮಗೆ ಸಿ.ಬಿ.ಐ. ಬಗ್ಗೆ ನಂಬಿಕೆ ಇದೆ ಎನ್ನುವುದಾದರೆ ಸಿ.ಬಿ.ಐ.ಗೆ ಕೊಡಿ. ನಿಮಗೆ ಸಿ.ಬಿ.ಐ.ಗೆ ಕೊಡುವುದು ಬೇಡ ಎನ್ನುವುದಾದರೆ, ಲೋಕಾಯುಕ್ತರಿಗೆ full powers ಕೊಡಿ. ಬೇಡ ರೇವಣ್ಣನವರೆ, ನಮ್ಮ ಎಂ.ಎಲ್.ಎ.ಗಳು ಹೊಸದಾಗಿ ಬಂದಿದ್ದಾರೆ. ಇನ್ನೂ 2-3 ವರ್ಷಗಳ ಕಾಲ ಅವರಿಗೆ ಎಷ್ಟು ಬೇಕೋ ಅಷ್ಟು ಮೇಯಲಿ' ಎಂದು ನೀವು ಹೇಳುವುದಾದರೆ, ನಾವು ಅದಕ್ಕೆ ಸುಮ್ಮನಿದ್ದು ಬಿಡುತ್ತೇವೆ, ಏನೂ ಮಾತನಾಡಲಿಕ್ಕೆ

ಹೋಗುವುದಿಲ್ಲ. ಆ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ open ಆಗಿ ಹೇಳಿಬಿಡಲಿ, ನಾವು ಇದನ್ನು ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ಏಕೆಂದರೆ, one line resolution ಮಾಡೋಣ. ಈಗ......

[ಗೊಂದಲ]

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲು ಎದ್ದು ನಿಂತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, 24 ವರ್ಷಗಳ ಹಿಂದೆ ಈ ಲೋಕಾಯುಕ್ತ ಬಿಲ್ ಅನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು introduce ಮಾಡಿ ನಂತರ ಕೊಟ್ಟಂತಹ suo-moto powers ಅನ್ನು ವಾಪಸ್ ತೆಗೆದುಕೊಂಡರು. ಇವತ್ತು ಸನ್ಮಾನ್ಯ ರೇವಣ್ಣನವರು ಅಲ್ಲಿದ್ದುಕೊಂಡು ಅವರಿಗೆ ಅಧಿಕಾರ ಕೊಡಿ ಎಂದು ಹೇಳುತ್ತಾರೆ. ನಿಮ್ಮ ತಂದೆಯವರು ಮುಖ್ಯಮಂತ್ರಿಗಳಾಗಿದ್ದರು suo-moto ಅಧಿಕಾರವನ್ನು ಅವರು ಕೊಡಲಿಲ್ಲ ಅದಾದ ಮೇಲೆ ನಿಮ್ಮ brother ಮುಖ್ಯಮಂತ್ರಿಯಾಗಿದ್ದರು suo-moto ಅಧಿಕಾರ ಕೊಡಲಿಲ್ಲ. ಹಿಂದಿನ ಯಾರದೇ ಕಾಲದಲ್ಲಿ, ಮುಖ್ಯಮಂತ್ರಿಗಳು ಶಾಸಕರನ್ನು ಆ ಚೌಕಟ್ಟಿನಲ್ಲಿ ತರುವಂತಹ ಧೈರ್ಯವನ್ನು ಯಾರೂ ಮಾಡಲಿಲ್ಲ. 24 ವರ್ಷಗಳ ಕಾಲ ಯಾರೇನೂ ಮಾಡಲಿಲ್ಲವೋ, ಅದನ್ನು ನಾನು ಮಾಡಬೇಕೇ? ನಾನೇನು ಮಾಡಬೇಕು ಎನ್ನುವುದರ ಬಗ್ಗೆ ನಾನು ನಿರ್ಧಾರ ತೆಗೆದುಕೊಳ್ಳುತ್ತೇನೆ. ಆ ವಿಷಯ ಬೇರೆ. ಯಾರು ಬೇಕೋ ನಿಮ್ಮ ಶಾಸಕರೆಲ್ಲಾ ಮೇಯಲಿ ಎನ್ನುವುದು ಸರಿಯಲ್ಲ. ನಮ್ಮ ಶಾಸಕರಲ್ಲಾ ಮೇಯುತ್ತಿರುವುದು ನಿಮ್ಮ ಬಂಧು-ಬಳಗದವರು, ಸ್ನೇಹಿತರು, ವಿಶ್ವಾಸಿಗರು, ಯಾರಿಗೆಲ್ಲಾ ನೀವು ಲೈಸೆನ್ಸ್ ಕೊಟ್ಟಿದ್ದೀರೋ, ಅವರು ಮೇಯುತ್ತಿರುವುದು. ಎಲ್ಲಾ ಲೂಟಿ ನಡೆಯುತ್ತಿರುವುದು ಅವರಿಂದ. ಅವನು ಯಾವನೇ ಆಗಿರಲಿ, ಯಾವುದೇ ಪಕ್ಷದವನು ಆಗಿರಲಿ, ಪಟ್ಟಿ ಬರಲಿ, ಚರ್ಚೆ ಮಾಡಿ ಯಾರು ಈ ಬಂಧು-ಬಳಗದವರು? ಯಾರು ಈ ಗಣಿಗಾರಿಕೆಗೆ ಲೈಸೆನ್ಸ್ ತೆಗೆದುಕೊಂಡಿರುವವರು? ಯಾರು ಇವತ್ತು ಬೇನಾಮಿ ಹೆಸರಿನಲ್ಲಿ ತೆಗೆದುಕೊಂಡು ಈ ದಂಧೆ ನಡೆಸುತ್ತಿದ್ದಾರೆ? ನಿಮ್ಮ ಅಣ್ಣನವರು ಕುರ್ಚಿ ಕಳೆದುಕೊಳ್ಳುವುದಕ್ಕೆ ಕೆಲವೇ ದಿವಸಗಳ ಮುಂಚೆ, ಶಾಸಕರಿಗೆಲ್ಲಾ ಯಾವ ರೀತಿಯಾಗಿ ಗಣಿಗಾರಿಕೆಗೆ ಲೈಸೆನ್ಸ್ ಕೊಟ್ಟರು, ಎಲ್ಲದಕ್ಕೂ ದಾಖಲೆಗಳಿವೆ ಸ್ವಾಮಿ, ತುಂಡು ಗುತ್ತಿಗೆಯಿಂದ ಹಿಡಿದು ಇಲ್ಲಿಯವರೆಗೂ ಇತಿಹಾಸಗಳು ಬೇಕಾದಷ್ಟು ಇವೆ. ನಾವು ಯಾವುದನ್ನಾದರೂ ಪ್ರಸ್ತಾಪ

ಮಾಡಿದಾಗ, ನಿಮ್ಮವರು ಮುಖ್ಯಮಂತ್ರಿಗಳಾಗಿದ್ದಾಗ, ಆಗ ಅವರು ಸಿ.ಬಿ.ಐ.ಗೆ ಕೊಟ್ಟರೇ? ಆದ್ದರಿಂದ ಯಾವುದನ್ನು ನೀವು ಮಾಡಲಿಲ್ಲವೋ, ಅದನ್ನು ಈ ಯಡಿಯೂರಪನವರು ಮಾಡಬೇಕೆಂದು ನೀವು ನಿರೀಕ್ಷೆ ಮಾಡುತ್ತಿದ್ದೀರಿ. ಅದಕ್ಕಾಗಿಯೇ ನಾನು ಮತ್ತೆ ಮತ್ತೆ ಹೇಳುತ್ತಿದ್ದೇನೆ. ಇಷ್ಟೂ ದಿವಸ ಗಣಿಗಾರಿಕೆಗೆ ಲೈಸೆನ್ಸ್ ಪಡೆದಿರುವವರು, ಬೇನಾಮಿ ಹೆಸರಿನಲ್ಲಿ ಇರುವ ಘುಡಾರಿಗಳು, ರಾಜಕಾರಣಿಗಳು influence ಇರುವವರು ಯಾರು ಎಂಬುದು ನಿಮಗೂ ಗೊತ್ತು, ಇಲ್ಲಿರುವ ಎಲ್ಲರಿಗೂ ಗೊತ್ತು. ಅವರು ಮೇಯುತ್ತಿರುವುದು. ವಿನಾಕಾರಣ ನಮ್ಮ ಬಗ್ಗೆ ಏಕೆ ಹೇಳುತ್ತೀರಿ? ಮಾತೆತ್ತಿದರೆ ಬಳ್ಳಾರಿ ಬಗ್ಗೆ ಪ್ರಸ್ತಾಪಿಸುತ್ತೀರಿ. ನಿಮ್ಮವರು ಎಲ್ಲೂ ಇಲ್ಲವೆ? ಅತಿರಥ-ಮಹಾರಥರಾದ ನಿಮ್ಮ ಪಕ್ಷದ ಮುಖಂಡರಿಲ್ಲವೆ? ದಾಖಲೆಗಳನ್ನು ತಂದು ನಾಳೆ ಒಂದೊಂದಾಗಿ ಹೆಸರುಗಳನ್ನು ಓದಲೇ? ಬೆಳಗಾಂನಲ್ಲಿ ನಾನು ಹೆಸರುಗಳನ್ನು ಓದುವುದಕ್ಕೆ ಶುರು ಮಾಡಿದೊಡನೆ, 'ಹೆಸರೇಳಬೇಡಿ' 'ಹೆಸರೇಳಬೇಡಿ' ಎಂದು ನೀವುಗಳೆಲ್ಲಾ ಕೂಗಿಕೊಂಡಿರಿ. ಎಲ್ಲಾ ನಿಮ್ಮ ಬಂಧು-ಬಳಗದವರನ್ನಿಟ್ಟುಕೊಂಡು ನಿಮ್ಮ ಪಕ್ಷದವರನ್ನಿಟ್ಟುಕೊಂಡು ಯಡಿಯೂರಪ್ಪನ ಬಗ್ಗೆ ಏಕೆ ಆರೋಪ ಮಡುತ್ತೀರಿ? There is a limit for everything.

[ಗೊಂದಲ]

ಶ್ರೀ ಕೆ. ಎಂ. ಶಿವಲಿಂಗೇಗೌಡ: ದಯಮಾಡಿ ಯಾರ‍್ಯಾರು ಬಂಧು-ಬಳಗದವರಿದ್ದಾರೆ ಎಂದು ಹೆಸರುಗಳನ್ನು ಹೇಳಿಬಿಡಿ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಮಾತನಾಡಲು ಎದ್ದು ನಿಂತಿದ್ದಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಅಧ್ಯಕ್ಷರು: ಅವರನ್ನೆಲ್ಲಾ ಕಂಟ್ರೋಲ್ ಮಾಡುವವರು, ನೀವೇ ಎದ್ದು ನಿಂತುಕೊಂಡು ಕೇಳಿದರೆ ಹೇಗೆ?

[ಗೊಂದಲ]

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ದಯವಿಟ್ಟು ಕುಳಿತುಕೊಳ್ಳಿ

[ಗೊಂದಲ]

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಹಾಗಾದರೆ ನಾನೊಂದು ಪ್ರಶ್ನೆ ಮಾಡುತ್ತೇನೆ. ಇವತ್ತು ಈ ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ನಡೆದು ಹೋಗಿದೆ ಎನ್ನುವಂತಹ ತೀರ್ಮಾನಕ್ಕೆ ನೀವು ಬಂದಿದ್ದೀರಿ. ಈ ಸದನದಲ್ಲಿ ಒಪ್ಪಿಕೊಂಡಿದ್ದೀರಿ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ನಿಮ್ಮ ಸಹೋದ್ಯೋಗಿಗಳ್ಯಾರು ಈ ದಂದೆಯಲ್ಲಿ ಇಲ್ಲವೆನ್ನುವುದನ್ನು ಧೈರ್ಯವಾಗಿ ಈ ಸದನದಲ್ಲಿ ಹೇಳಿ, ಇವತ್ತು ಈ ಗಣಿಗಾರಿಕೆಯ ದಂದೆಯನ್ನು ಯಾರು ಮಾಡುತ್ತಿದ್ದಾರೆಂದು ಇಡೀ ರಾಜ್ಯದ ಜನತೆಗೆ ಗೊತ್ತಿದೆ ಇವತ್ತು ಏನು ನಡೆಯುತ್ತಿದೆ ಎಂಬುದನ್ನು ಇಡೀ ರಾಜ್ಯದ ಜನರಿಗೆ ಮುಚ್ಚಿಡಲು ಸಾಧ್ಯವೆ? ಯಾರ್ಯಾರು ಈ ದಂದೆಯನ್ನು ಮಾಡಿದ್ದಾರೆಂಬುದನ್ನು ಇಟ್ಟುಬಿಡಿ, ಸುಮ್ಮನೆ ಗೌಪ್ಯವಾಗಿ ಹೇಳುತ್ತೀರಿ, ಬಯಲಿಗೆ ಬರಲಿ, ಇಡಿ ಯಾರು ಮಾಡಿದ್ದಾರೋ ಅವರು ಅನುಭವಿಸುತ್ತಾರೆ.

[ಗೊಂದಲ]

ಶ್ರೀ ಬಿ. ಎಸ್. ಯಡಿಯೂರಪ್ಪ: ಜಯಚಂದ್ರರವರೆ, ಯರ್‍ಯಾರಿದ್ದಾರೆಂದು ಬೆಳಗಾಂನಲ್ಲಿ ಹೇಳಿದ್ದೇನೆ ಮತ್ತೆ ನಾಳೆ ಹೇಳುವವನಿದ್ದೇನೆ, ನಮ್ಮವರು ಯಾರಿದ್ದಾರೆಂಬುದನ್ನು ದಾಖಲೆ ಸಹಿತ ಹೇಳಿ Please come out. Iwill take action today only. Please come out openly. ಇಂತಿಂಥವರಿದ್ದಾರೆಂದು ದಾಖಲೆಗಳನ್ನು ಕೊಡಿ....

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ: ದಾಖಲೆಗಳಿರುವುದು ನಿಮ್ಮ ಹತ್ತಿರ, ನೀವು ಸಿಬಿಐಗೆ ಕೊಡಿ ಅಧಿಕಾರ ನಮ್ಮ ಹತ್ತಿರವಿಲ್ಲ ಅಕ್ರಮ ಧಂದೆ ಎಂದು ನಾವು ಹೇಳಿರುವುದಲ್ಲ, ಲೋಕಾಯುಕ್ತರು ಹೇಳಿರುವುದು, ಆಧಿಕಾರವಿರುವುದು ನಿಮ್ಮ ಹತ್ತಿರ ನೀವು ತನಿಖೆಗೆ ಕೊಡಬೇಕು, ಕೊಡಿ ಗೊತ್ತಾಗಲಿ ಆಚೆಗೆ ಕುಮಾರ ಸ್ವಾಮಿಯವರು ಬರುತ್ತಾರಾ, ಧರ್ಮಸಿಂಗ್ ಅವರು ಬರುತ್ತಾರಾ, ಯಡಿಯೂರಪ್ಪನವರು ಬರುತ್ತಾರಾ ಬರಲಿ, ಕೊಡಿ...

[ಗೊಂದಲ]

ಶ್ರೀ ಜನಾರ್ಧನ ರೆಡ್ಡಿ: [ಪ್ರವಾಸೋದ್ಯಮ ಸಚಿವರು]: ಇವರು ಯಾವುದರ ಬಗ್ಗೆ ಚರ್ಚೆ ಮಾಡುತ್ತಿದ್ದಾರೆಂಬುದು ಅರ್ಥವಾಗುತ್ತಿಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ: ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಒಪ್ಪಿಕೊಂಡಿರುವುದರ ಮೇಲೆ ಮತ್ತು ಲೋಕಾಯುಕ್ತರವರ ವರದಿಯ ಮೇಲೆ ಚರ್ಚೆ ಮಾಡುತ್ತಿದ್ದೇವೆ, ಅವರು [ಹೆಚ್. ಡಿ. ಕುಮಾರ ಸ್ವಾಮಿ] ಈ ಸದನದಲ್ಲಿ ಇಲ್ಲದವರ ಮೇಲೆ ಹೇಗೆ ಕೊಡುತ್ತಾರೆ, ತಾಕತ್ತಿದ್ದರೆ ಅವರನ್ನು ಸೇರಿಸಿ ಸಿಬಿಐಗೆ ಕೊಡಿ, ಕೊಡಿ ಎಂದರೆ ಕೊಡುವುದಕ್ಕೆ ನೀವು ತಯಾರಿಲ್ಲ, ನಾವು ಎಲ್ಲರನ್ನೂ ಸೇರಿಸಿ ಕೊಡಿ ಎಂದು ಹೇಳುತ್ತಿದ್ದೇವೆ....

[ಗೊಂದಲ]

ಶ್ರೀ ಜನಾರ್ಧನ ರೆಡ್ಡಿ: ಬ್ಯಾಂಕ್ ಅಕೌಂಟ್‌ನಲ್ಲಿ ಹಣ ಡ್ರಾ ಮಾಡಿರುವುದರ ಸಹಿತ ಮಾಹಿತಿಯನ್ನು ನಾಳೆ ಸದನದಲ್ಲಿ ಮುಂಡಿಸುತ್ತೇನೆ.

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೇ, ಎಲ್ಲರನ್ನು ಸೇರಿಸಿ ಕೊಡಿ ಎಂದು ಹೇಳುತ್ತಿದ್ದೇವೆ, ನೀವು ಕೊಡುವುದಕ್ಕೆ ತಯಾರಿಲ್ಲವೆಂದರೆ ಹೇಗೆ? ಕಳ್ಳರ್ಯಾರು ಇದ್ದಾರೆ ಅದನ್ನು ಕೊಡುವುದಕ್ಕೆ ಹೇಳಿದ್ದೇವೆ, ಅವನು ಸೇರಿಸಿ ಕೊಡಿ...

[ಗೊಂದಲ]

ಶ್ರೀ ಜನಾರ್ಧನ ರೆಡ್ಡಿ: ನೀವು ಮಾತನಾಡಿ, ಮಾತನಾಡಿ ಎಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದರೆ, ನಿಮ್ಮ ಪ್ರೀತಿಯ ಕಂಪನಿಗಳು ಎರಡು ನೂರು ಕೋಟಿ ವ್ಯವಹಾರ ಮಾಡಿರುವುದನ್ನು ದಾಖಲೆ ಸಮೇತ ಎಲ್ಲಾ ಪತ್ರಿಕೆಗಳಿಗೆ ಇವತ್ತು ನಾನು ಒದಗಿಸಿದ್ದೇನೆ, ನಾಳೆ ಬೇಕಾದರೆ ಸದನದಲ್ಲಿ ಅದೇ ದಾಖಲೆಗಳನ್ನು ರಿಲೀಸ್ ಮಾಡುತ್ತೇನೆ. ಇವತ್ತು ದಾಖಲೆಗಳೇನಾದರೂ ಇದ್ದರೆ, ಇಂತದ್ದನ್ನು ನಿಮ್ಮ ಸಹೋದ್ಯೋಗಿಗಳು ಮುಖ್ಯಮಂತ್ರಿಗಳ ಜೊತೆಯಲ್ಲಿದ್ದಾರೆ. ಇಂತ ಟ್ರೇಡಿಂಗ್ ಮಾಡಿದ್ದಾರೆ, ಇಂತ ಬಿಜಿನೆಸ್ ಮಾಡಿದ್ದಾರೆ ಎನ್ನುವುದಕ್ಕೆ ನಿಮ್ಮ ಹತ್ತಿರ ಏನಾದರೂ ದಾಖಲಾತಿಗಳಿದ್ದರೆ ಅವನ್ನು ಸಲ್ಲಿಸಿ, ನಾಳೆ ನೀವು ದಾಖಲಾತಿಗಳನ್ನು ಸದನಕ್ಕೆ ಸಲ್ಲಿಸಿ ಇನ್ನು 4 ದಿವಸ ಮಾತನಾಡೋಣ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ...

[ಗೊಂದಲ]

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಿ ಇವರು ಸಿಬಿಐ ತನಿಖೆಗೆ ರೆಡಿ ಎಂದು ಹೇಳಿದ್ದಾರಲ್ಲ, ಇಲ್ಲವೆಂದರೆ ವಾಪಸ್ ತೆಗೆದುಕೊಳ್ಳುವುದಕ್ಕೆ ಹೇಳಿಬಿಡಿ, ಇಲ್ಲವೆಂದರೆ ನಾನು ರೆಡಿ ಇದ್ದೇನೆ ನನ್ನದು ಮಾಡಿ ನನ್ನ ಕುಟುಂಬದ್ದನ್ನು ಮಾಡಿ ನಾನು ಕೇರ್ ಮಾಡುವುದಿಲ್ಲ ಅದನ್ನು ಬಿಟ್ಟು ಸುಮ್ಮನೆ ಇಲ್ಲದ್ದನ್ನು ಹೇಳುತ್ತಿದ್ದೀರಿ

[ಗೊಂದಲ]

ಅಧ್ಯಕ್ಷರು: ವಿಷಯಾಂತರವಾಗುವುದು ಬೇಡ ಅದನ್ನು ಕಡತಕ್ಕೆ ತೆಗೆದುಕೊಳ್ಳಬೇಡಿ*

[ಗೊಂದಲ]

ಶ್ರೀ ಹೆಚ್. ಡಿ. ರೇವಣ್ಣ: *ನಿಮ್ಮ ಕೈಯಲ್ಲಿ ಅಧಿಕಾರವಿಲ್ಲವೇ, ನಿಮ್ಮ ಮನೆಯ ಬಾಗಿಲಿಗೆ ಬಂದಿದ್ದೇವೆಯೇ?

[ಗೊಂದಲ]

ಶ್ರೀ ಜನಾರ್ಧನ ರೆಡ್ಡಿ: ಮಾನ್ಯ ಅಧ್ಯಕ್ಷರೆ, subject ಮೇಲೆ ಮಾತನಾಡುವುದನ್ನು ಬಿಟ್ಟು ವೈಯಕ್ತಿಕವಾಗಿ ನಮ್ಮ ಪಕ್ಷಕ್ಕೆ ಸಂಬಂಧಿಸಿದ ವಿಷಯವನ್ನು ಮಾತನಾಡುವುದು ಬೇಡ, ಇವರು ಸಿಬಿಐ ಬಗ್ಗೆ ಮಾತನಾಡುತ್ತಿದ್ದಾರೆ, ನಾನು 150 ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಆರೋಪವನ್ನು ಅವರ ಮೇಲೆ ಮಾಡಿದರು ಸಹ...

[ಗೊಂದಲ]

ಶ್ರೀ ಹೆಚ್. ಸಿ. ಬಾಲಕೃಷ್ಣ: ಜನರು ನಿಮಗೆ ಅಧಿಕಾರ ಕೊಟ್ಟು 2 ವರ್ಷವಾಯಿತು ಮಾಡಿ ರೆಸಲೂಷನ್, ಕುಮಾರ ಸ್ವಾಮಿ ಯಾರ್ಯಾರಿದ್ದಾರೋ ಅವರೆಲ್ಲರನ್ನು ಸಿಬಿಐಗೆ ತನಿಖೆಗೆ ಕೊಡಿ, ಕೊಡುವುದಕ್ಕೆ ತಯಾರಿಲ್ಲ ಸುಮ್ಮನೆ ಮಾತನಾಡುತ್ತೀರಿ ನಾವೆಲ್ಲಾ ಸೇರಿಸಿ ಹೇಳುತ್ತಿದ್ದೇವೆ ರೆಸಲೂಷನ್ ಮಾಡಿ ಒನ್ ಲೈನ್ ರೆಸಲೂಷನ್ ಮಾಡಿ ನೀವು ಸುಮ್ಮನೆ ಕೊಡುತ್ತೇವೆ ಕೊಡುತ್ತೇವೆ ಎನ್ನುತ್ತೀರಿ ನಾವು ಒಪ್ಪಿಕೊಂಡಿದ್ದೇವಲ್ಲ ಕೊಡಿ...

[ಗೊಂದಲ]

ಶ್ರೀ ಜನಾರ್ಧನ ರೆಡ್ಡಿ: ಕಳ್ಳರ್ಯಾರೆಂದು ಇಲ್ಲಿ ನಾಳೆ ಹೇಳುತ್ತೇನೆ ನಾನು ನಿಮ್ಮ 150 ಕೋಟಿ ಬಗ್ಗೆ ಮಾತನಾಡುತ್ತಿದ್ದೇನೆ ನಾನು ಬೇರೆ ಯಾವುದರ ಬಗ್ಗೆ ಮಾತನಾಡುತ್ತಿಲ್ಲ.

[ಗೊಂದಲ]

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಅವರ ಮೇಲೆ ನಾವು ಆರೋಪ ಮಾಡಿಲ್ಲ..

[ಗೊಂದಲ]

ಅಧ್ಯಕ್ಷರು: ಮಂತ್ರಿಗಳು ಮಾತನಾಡುವುದಕ್ಕೆ ಬರುವುದಿಲ್ಲವೆಂದು ಹೇಳಲಾಗುವುದಿಲ್ಲ He is a Cabinet Minister, he has got every right to speak ಅದನ್ನು ಪ್ರಶ್ನೆ ಮಾಡಬೇಡಿ ಅವರು ಮಾತನಾಡಲೇ ಬಾರದೆಂದು ಹೇಳುವ ಹಕ್ಕು ಯಾರಿಗೂ ಇಲ್ಲ ಆ ರೀತಿ ವಿಷಯಾಂತರ ಮಾಡಬೇಡಿ..

ಶ್ರೀ ಹೆಚ್. ಡಿ. ರೇವಣ್ಣ: [ಗೊಂದಲ]*

ಶ್ರೀ ಜನಾರ್ಧನ ರೆಡ್ಡಿ: ಆ ಭಾಷೆಯನ್ನು ಬಿಟ್ಟು ಒಳ್ಳೆಯ ಭಾಷೆಯನ್ನು ಮಾತನಾಡುವುದನ್ನು ಕಲಿಯಿರಿ.

ಶ್ರೀ ಹೆಚ್. ಡಿ. ರೇವಣ್ಣ: ನಾನು ನಿಮ್ಮ ಹತ್ತಿರ ಕಲಿಯಬೇಕಾಗಿಲ್ಲ..

---

*ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

[ಗೊಂದಲ]

ಶ್ರೀ ಜನಾರ್ಧನ ರೆಡ್ಡಿ: ನಮ್ಮಿಂದ ನೀವು ಕಲಿಯಬೇಕಾಗಿದೆ

ಅಧ್ಯಕ್ಷರು: ನೇರವಾಗಿ ಹೇಳಿರುವುದನ್ನು ಕಡತದಿಂದ ತೆಗೆದು ಹಾಕಿ

ಶ್ರೀ ಹೆಚ್. ಡಿ. ರೇವಣ್ಣ: ಗಣಿ, ಮುಖ್ಯಮಂತ್ರಿಗಳ ಖಾತೆಯಾಗಿದೆ, ಅವರು ಮಾತನಾಡಲಿ

[ಗೊಂದಲ]

ಅಧ್ಯಕ್ಷರು: ಅವರು ಉತ್ತರವನ್ನು ಕೊಡುತ್ತಿಲ್ಲ

[ಗೊಂದಲ]

ಶ್ರೀ ಜನಾರ್ಧನ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಸದಸ್ಯರೆಲ್ಲಾ ನನ್ನನ್ನು ಕೇಳಿದರು. ಅವತ್ತು 150 ಕೋಟಿ ರೂಪಾಯಿಗಳ ಭ್ರಷ್ಟಾಚಾರ ಆರೋಪ ಮಾಡಿದಂಥ ಸಂದರ್ಭದಲ್ಲಿ ಸಿಬಿಐ ತನಿಖೆಯಾಗಬೇಕೆಂದು ಹೋರಾಟ ಮಾಡಿದಂಥ ಸಂದರ್ಭದಲ್ಲಿ ಇವತ್ತು ಕೋರ್ಟುಗಳ ಬಗ್ಗೆ ತಮಗೆ ಗೌರವ ಇದೆಯೋ ಇಲ್ಲವೋ ಎನ್ನುವುದಾದರೂ ಕೂಡ ಹೇಳಲಿ ಇವತ್ತು ನಾನು ವೈಯಕ್ತಿಕವಾಗಿ ಹೇಳುವುದಾದರೆ, ಆವತ್ತು ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಾನು ಆರೋಪ ಮಾಡಿ ಸಿಬಿಐ ತನಿಖೆಗೆ ಕೇಳಿದ ಸಂದರ್ಭದಲ್ಲಿ ಅವರಿಗೆ 15 ತಿಂಗಳ ಅವಕಾಶವಿದ್ದರೂ ಕೂಡ ಅವರು ಸಿಬಿಐ ತನಿಖೆಗೆ ಆದೇಶ ಮಾಡದಿರುವ ಒಂದು ಸಂದರ್ಭದಲ್ಲಿ ನಾನು ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಕೇಸ್ ಅನ್ನು ಹಾಕಿ ಇಲ್ಲಿರುವ ನ್ಯಾಯಮೂರ್ತಿಗಳಾದ ಜಸ್ಟೀಸ್ ರಮೇಶ್ ಅವರು ಹೇಳಿದರು, ಇದು ಬಹಳ ಗಂಭೀರವಾಗಿರುವ ಒಂದು ವಿಷಯ, ಇಡೀ ದೇಶದ ಹಿತದೃಷ್ಟಿಯಿಂದ, ಒಬ್ಬ ರಾಜ್ಯದ ಮುಖ್ಯಮಂತ್ರಿಗಳಾಗಿದ್ದು, ಭ್ರಷ್ಟಾಚಾರದಲ್ಲಿ ಈ ರೀತಿ ಒಂದು ಆರೋಪ ಹೊಂದಿರುವ ಸಂದರ್ಭದಲ್ಲಿ full fledged, ಪೂರ್ಣಪ್ರಮಾಣದ ಪೀಠ ಇದನ್ನು ಕೇಳಬೇಕೆಂದು ಒಂದು ಆದೇಶ ಪಾಸ್ ಮಾಡಿದರು. ಆ ಸಂದರ್ಭದಲ್ಲಿ ನಾವು ಸೆಕ್ಷನ್ 32ರ ಕೆಳಗೆ ಸುಪ್ರೀಂ ಕೋರ್ಟಿಗೆ ನಾನು ನೇರವಾಗಿ ಹೋಗಿ ಅಲ್ಲಿ ಈ ಕೇಸ್ ಅನ್ನು ಫೈಲ್ ಮಾಡಿದ್ದೇನೆ. ಅದೇ ಸಂದರ್ಭದಲ್ಲಿ ವೆಸ್ಟ್ ಬೆಂಗಾಲ್‌ನಲ್ಲಿ ಒಬ್ಬ ವ್ಯಕ್ತಿ, ಸಿಬಿಐ ತನಿಖೆ ಮಾಡಲು ಹೈಕೋರ್ಟ್ ಆದೇಶ ಮಾಡಲು ಅಧಿಕಾರವಿದೆಯೇ ಎಂದು ಪ್ರಶ್ನೆ ಮಾಡಿ ಅಲ್ಲಿನ ಹೈಕೋರ್ಟಿನಲ್ಲಿ ಒಂದು ಕೇಸನ್ನು ಹಾಕಿದರೆ ಆ ಕೇಸ್ ಸುಪ್ರೀಂ ಕೋರ್ಟಿಗೆ ಬಂತು. ಆ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿನಲ್ಲಿ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ನೇತೃತ್ವದಲ್ಲಿರುವ 3 ಸದಸ್ಯರ ಪೀಠ, ನನ್ನ ಪರವಾಗಿ ನಮ್ಮ ವಕೀಲರೇನು ವಾದವನ್ನು ಮಂಡಿಸಿದ್ದಾರೆ, ಅದೆಲ್ಲವನ್ನು ಕೆಳಿದ ಮೇಲೆ,

ವೆಸ್ಟ್ ಬೆಂಗಾಲ್‌ನಲ್ಲಿ ಒಬ್ಬ ವ್ಯಕ್ತಿ, ಹೈಕೋರ್ಟುಗಳಿಗೆ ಸಿಬಿಐ ತನಿಖೆಗೆ ಆದೇಶ ಮಾಡುವ ಅಧಿಕಾರವಿದೆಯೇ ಎಂದು ಏನು ಪ್ರಶ್ನೆ ಮಾಡಿದ್ದರು, ಆ ಎರಡೂ ಕೇಸ್‌ಗಳನ್ನು ಟ್ಯಾಗ್ ಮಾಡಿ, ಆ ಎರಡೂ ವಿಷಯಗಳ ಗಂಭೀರತೆಯನ್ನು ಪರಿಗಣಿಸಿ 5 ಸದಸ್ಯ ನ್ಯಾಯಮೂರ್ತಿಗಳನ್ನೊಳಗೊಂಡ ಒಂದು ಬೆಂಚ್ ಅನ್ನು constitute ಮಾಡಿ ಕೇವಲ ಜನಾರ್ಧನ ರೆಡ್ಡಿ ಮಾಡಿರುವ 150 ಕೋಟಿ ಭ್ರಷ್ಟಾಚಾರದ ಆರೋಪದ ಮೇಲೆ ಕಾನ್ಸ್ಟಿಟ್ಯೂಟ್ ಮಾಡಿ ಆ issue ವನ್ನು ತೆಗೆದುಕೊಂಡರು. ಆ issue ನಲ್ಲಿ ಇವತ್ತು ಈಗಾಗಲೇ ಒಂದು ಜಡ್ಜ್‌ಮೆಂಟ್ ಬಂದಿದೆ. ಹೈಕೋರ್ಟ್‌ಗಳಿಗೆ CBI enquiry order ಮಾಡುವ ಅಧಿಕಾರ ಇದೆ ಎಂದು Supreme Court ನವರು ಈಗಾಗಲೇ ಮಾಡಿದ್ದಾರೆ. ನನಗೆ ಸಂಬಂಧಪಟ್ಟ ವಿಷಯದ ಬಗ್ಗೆ ಸುಪ್ರೀಂ ಕೋರ್ಟಿನವರು ಈಗಾಗಲೇ ಒಂದು ದಿನಾಂಕವನ್ನು ಕೊಟ್ಟಿದ್ದಾರೆ. ಇವತ್ತು ಕೋರ್ಟಿನಲ್ಲಿ ನಡೆಯುತ್ತಿದೆ. ಇವತ್ತು ನನ್ನ ಹೋರಾಟ ಏನಿತ್ತು ಆ ನನ್ನ ಹೋರಾಟದಿಂದ ನಾನು ಯಾವತ್ತೂ ಕೂಡ ಹಿಂದೆ ಸರಿದಿಲ್ಲ. ಆವತ್ತು ನಾನು ಮಾಡಿರುವಂತಹ ವಿಷಯದಲ್ಲಿ ಸಮ್ಮಿಶ್ರ ಸರ್ಕಾರದ ಧರ್ಮವನ್ನು ನಾನು ಪಾಲಿಸಲಿಲ್ಲವೆಂದು ಪಕ್ಷದಿಂದ ಸಸ್ಪೆಂಡ್ ಮಾಡಿದರೂ ಕೂಡ ನಾನು ಹಿಂದಕ್ಕೆ ಸರಿಯಲಿಲ್ಲ. ಅದೇ ಹೋರಾಟ ಮುಂದುವರೆಸಿದೆ. ಇವತ್ತು ಸರ್ವೋಚ್ಚ ನ್ಯಾಯಾಲಯದಲ್ಲಿ ಆ ಮ್ಯಾಟರ್ ಇದೆ. ಇದು ಕೇವಲ ಮಾನ್ಯ ಕುಮಾರಸ್ವಾಮಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಮಾಡಿದ್ದು ಅಲ್ಲ, ಇಡೀ ಭಾರತ ದೇಶದ ಎಲ್ಲಾ ರಾಜ್ಯಗಳಲ್ಲಿರುವಂತಹ ಎಲ್ಲಾ ಮುಖ್ಯ ಮಂತ್ರಿಗಳಿಗೂ ಕೂಡ ಎಚ್ಚರಿಕೆ ಗಂಟೆ ಆಗುವಂತಹ ಜಡ್ಜ್‌ಮೆಂಟ್ ಆಗಿ ಸುಪ್ರೀಂಕೋರ್ಟಿನಿಂದ ಬಂದರೆ, ಇತಿಹಾಸದಲ್ಲಿ ಭ್ರಷ್ಟಾಚಾರದ ಮೇಲೆ ಹೋರಾಟ ಮಾಡಿದಂತಹ ಒಬ್ಬ ಜನಾರ್ಧನ ರೆಡ್ಡಿಗೆ ಸಿಕ್ಕಿರುವಂತಹ ಫಲ ಇಡೀ ಭಾರತ ದೇಶಕ್ಕೆ ಉದಾಹರಣೆ ಆಗುವಂತಹ ಒಂದು ಮಟ್ಟಕ್ಕೆ ನಾನು ಹೋರಾಟ ಮಾಡುತ್ತಿರುವಂತಹ ಈ ಸಂದರ್ಭದಲ್ಲಿ ಅಧಿಕಾರದಲ್ಲಿದ್ದು ಮುಖ್ಯ ಮಂತ್ರಿಗಳಾಗಿದ್ದಾಗ ತಾವು CBI enquiry ಮಾಡಲಿಲ್ಲವೆಂದು ನಾನು ಸರ್ವೋಚ್ಚ ನ್ಯಾಯಾಲಯಕ್ಕೆ ಹೋದ ಮೇಲೆ ಇವತ್ತು ನಮಗೆ ಅಧಿಕಾರ ಇದೆ ಎಂದು ನಾನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ force ಮಾಡಿ ಸರ್ವೋಚ್ಚ ನ್ಯಾಯಾಲಯಕ್ಕೆ ಅಪಮಾನ ಮಾಡುವಂತಹ ಒಬ್ಬ ಮೂರ್ಖ ನಾನಲ್ಲ. ಹಾಗಾಗಿ ಇವತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದ ಇಡೀ ಭಾರತದೇಶದಲ್ಲಿ ಎಲ್ಲರಿಗೂ ಕೂಡ ಮಾದರಿಯಾಗಬೇಕೆಂಬ ವಿಷಯದಲ್ಲಿದ್ದೇನೆ. ಹಾಗಾಗಿ ಮಾತು ಮಾತಿಗೆ 250 ಕೋಟಿ, 150 ಕೋಟಿ, ಎಲ್ಲಾ ಸೇರಿಸಿ CBI ಗೆ ಕೊಟ್ಟು ಬಿಡಿವ ಎಂದು ಮಾತನಾಡುವುದಲ್ಲ. ತಮ್ಮ ಹತ್ತಿರ ಏನು ವಿಷಯ ಇದೆ, ವಿಷಯಾಂತರ ಮಾಡದೆ, ತಾವು ಯಾರನ್ನೂ ಚುಚ್ಚಿ ಮಾತನಾಡದೆ, ತಾವು

ಕಂಪ್ಲೀಟ್ ಮಾಡಿ ಮಾನ್ಯ ಮುಖ್ಯ ಮಂತ್ರಿಗಳು ನಾಳೆ ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಲಿ. ಚುಚ್ಚು ಮಾತುಗಳನ್ನಾಡುವುದು, ವಿಷಯಾಂತರ ಮಾಡುವುದು ವಿಷಯ ಏನೂ ಇಲ್ಲವೆಂದು ಏನೂ ಹೇಳಿ sudden ಆಗಿ ಆ ಕಡೆಯವರಿಗೆ ಕಳ್ಳರು ಅಥವಾ ಇನ್ನೊಂದು ಹೇಳಿ ಗಲಾಟೆ ಆಗಲಿ, postpone ಆಗಲಿ ಎನ್ನುವುದು ಬೇಡ. ಸಮಾಧಾನವಾಗಿ ತಾವೂ ಮಾತನಾಡಿ. ನಿನ್ನೆ ಮಾನ್ಯ ಸಿದ್ದರಾಮಯ್ಯನವರು ಸಾಕಷ್ಟು ವಿಷಯಗಳನ್ನು ಹೇಳಿ ಓಬಳಾಪುರಂ, border dispute, industrial dispute, ಸುಗ್ಗಲಮ್ಮ ಗುಡ್ಡ blast ಮಾಡಿ ಬಿಟ್ಟರು, ಅದು ಮಾಡಿದರು, ಇದು ಮಾಡಿದರು, ಇವೆಲ್ಲವನ್ನೂ ಕೂಡ ಮಾತನಾಡಿದ್ದಾರೆ. ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟ ವಿಷಯವಾಗಿರಬಹುದು, ಅಲ್ಲಿರುವಂತಹ ಗಣಿಗಾರಿಕೆ ವಿಷಯವಾಗಿರಬಹುದು, ಸನ್ಮಾನ್ಯ ಮುಖ್ಯ ಮಂತ್ರಿಗಳು ನಾಳೆ ತೆಗೆದುಕೊಳ್ಳುವಂತಹ ಯಾವುದೇ ನಿರ್ಧಾರಕ್ಕೆ ಯಾವ ರೀತಿ ನಾನು ಬದ್ಧನಾಗಿರುತ್ತೇನೆಂಬ ವಿಷಯವನ್ನು ಯಾವ ರೀತಿ ಹೇಳಬೇಕೆಂದು ನಾನೂ ಕೂಡ ತಯಾರಾಗಿದ್ದೇನೆ. ಆದರೆ ಇಲ್ಲಿ ಚುಚ್ಚು ಮಾತುಗಳನ್ನು ದಯಮಾಡಿ ಹೇಳುವುದು ಬೇಡ. ಆರಾಮವಾಗಿ ತಾವು ವಿಷಯ ಮಾತನಾಡಿ, ದಯಮಾಡಿ ನನ್ನ ಮನವಿ ಇಷ್ಟೆ, ದಯಮಾಡಿ ವಿಷಯ ಮಾತನಾಡಿ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ರೇವಣ್ಣರವರು ಮಾತನಾಡುವ ಸಂದರ್ಭದಲ್ಲಿ ಮಧ್ಯಪ್ರವೇಶಿಸಿ ಮಾತನಾಡಿ ಒಂದು ರಿಮಾರ್ಕ್ ಮಾಡಿದ್ದಾರೆ. ಯಾರ್‍ಯಾರ ಕಾಲದಲ್ಲಿ ಏನೇನು ಮೈನಿಂಗ್ ಆಯಿತು, ಯಾರ್‍ಯಾರಿಗೆ ಎಷ್ಟೆಷ್ಟು ಮೈನಿಂಗ್ ಕೊಟ್ಟರು, ಅವರು ಲೂಟಿ ಮಾಡುತ್ತಿದ್ದಾರೆ ಎನ್ನತಕ್ಕಂತಹ ಒಂದು ಮಾತು ಹೇಳಿದ್ದಾರೆ. ದಯಮಾಡಿ ಯಾರು ಮೈನಿಂಗ್ ಲೀಸ್ ತೆಗೆದುಕೊಂಡಿದ್ದಾರೆ ಅವರಿಗೆ ಮೈನಿಂಗ್ ಮಾಡುವ ಅಧಿಕಾರ ಇದೆ. ಇಲ್ಲಿ ಪ್ರಶ್ನೆ ಬಂದಿರತಕ್ಕಂಥದ್ದು, ಯಾರು ಮೈನಿಂಗ್ ಲೀಸ್ ತೆಗೆದುಕೊಳ್ಳದೆ, ಪರ್ಮಿಟ್ ಇಲ್ಲದೆ ಲೂಟಿ ಮಾಡುತ್ತಿದ್ದಾರೆ, ಎನ್ನತಕ್ಕಂತಹ ವಿಚಾರ ಪ್ರಸ್ತಾಪವಾಗುತ್ತಿದೆ. ದಯಮಾಡಿ ನಾನು ಹೇಳುತ್ತೇನೆ, ಮೈನಿಂಗ್ ಲೀಸ್ ಕೊಟ್ಟ ತಕ್ಷಣ ಅವರು ಮಾಡಬಾರದು ಎಂದು ಅಲ್ಲ, ಅವರಿಗೆ ಮಾಡುವುದಕ್ಕೆ ಅಧಿಕಾರ ಇದೆ. ಮೈನಿಂಗ್ ಲೀಸ್ ಇಲ್ಲದೆ, ಕಳ್ಳ ಪರ್ಮಿಟ್ ಮೇಲೆ ಮಾಡುತ್ತಿದ್ದಾರೆ ಎನ್ನುವ ವಿಚಾರ ಚರ್ಚೆಯಾಗುತ್ತಿದೆ ವಿನಃ ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಮುಖೇನ ತಾವು ಅಂತಿಮವಾಗಿ ಉತ್ತರ ಕೊಡುವ ಸಮಯದಲ್ಲಿ ಹೇಳಬಹುದಾಗಿತ್ತು. ಆದರೆ ಈಗಲೇ ನೀವು ಮಧ್ಯ ಪ್ರವೇಶ ಮಾಡಬೇಕಾದಾಗ ಈ ಸಭೆಯಿಂದ ಹೊರಗಡೆ ಏನು ವರ್ತಮಾನ ಹೋಗುತ್ತದೆ ಅಧ್ಯಕ್ಷರೆ, ನಾನು ಮಧ್ಯದಲ್ಲಿ disturb ಮಾಡಬಾರದು

ಎನ್ನುವ ಕಾರಣದಿಂದ ನಾನು ಸುಮ್ಮನೆ ಕುಳಿತಿದ್ದೆ. ಇವತ್ತು ಏನೂ ಆಧಾರ ಇಲ್ಲದೆ ಇರತಕ್ಕಂತಹವರು ಮೈನಿಂಗ್ ಮಾಡಿ ಇವತ್ತು ಕೋಟಿಗಟ್ಟಲೆ ಲೂಟಿ ಮಾಡುತ್ತಿದ್ದಾರೆ ಎನ್ನತಕ್ಕಂತಹ ವಿಚಾರವನ್ನು ಹೇಳುತ್ತೇನೆ. ನಾವು ಯಾರ ಬಗ್ಗೆಯೂ ಹೆಸರು ಹೇಳುವುದಕ್ಕೆ ಹೋಗಿಲ್ಲ. ಏತಕ್ಕೋಸ್ಕರ CBI enquiry ಬೇಕು ಎನ್ನುವುದಕ್ಕೆ ಸನ್ಮಾನ್ಯ ಜನಾರ್ಧನರೆಡ್ಡಿಯವರಿಗೆ ನಾನು ಇವತ್ತು ಕೈ ಮುಗಿಯಬೇಕು. ಬಹಳ ಒಳ್ಳೆಯ ವಿಚಾರ ಪ್ರಸ್ತಾಪ ಮಾಡಿದರು. ಏನು ಹೇಳಿದರು ಎಂದರೆ, ಮಾನ್ಯ ಕುಮಾರಸ್ವಾಮಿಯವರು ಈ ಸದನದ ಸದಸ್ಯರಲ್ಲ. ಅವರ ಹೆಸರು ತೆಗೆದುಕೊಂಡರು ಆ ಪ್ರಶ್ನೆ ಬೇರೆ. 150 ಕೋಟಿಗೋಸ್ಕರ ಸರ್ವೋಚ್ಚ ನ್ಯಾಯಾಲಯದಲ್ಲಿ ಐದು ಸದಸ್ಯರ ಬೆಂಚ್ constitute ಆಗುತ್ತಿದೆ ಎನ್ನತಕ್ಕಂತಹ ಮಾತನ್ನು ಹೇಳಿದರು. Constitute ಆಗಿದೆ ಅದರ ಮುಂದೆ ತೀರ್ಮಾನಕ್ಕೆ ಇದೆ ಎಂದು ಹೇಳಿದರು. ಅಧಿಕಾರ ನಿಮ್ಮ ಕೈಯ್ಯಲ್ಲಿರಬೇಕಾದಾಗ ಅದೇಕೆ ಸುಪ್ರೀಂ ಕೋರ್ಟಿನ ಕಡೆಗೆ ತೋರಿಸುತ್ತೀರಿ? ಕೋರ್ಟುಗಳ ಬಗ್ಗೆ ಎಷ್ಟು ನಂಬಿಕೆ ಇದೆ ಎನ್ನತಕ್ಕಂತಹ ರೀತಿಯಲ್ಲಿ ಹೇಳಿದರು. ನಮಗೆ ಕೋರ್ಟುಗಳ ಮೇಲೆ ನಂಬಿಕೆ ಇದೆ. ಇವತ್ತು ಐದು ಜನರ ಬೆಂಚ್ ಕೊಡತಕ್ಕಂತಹ ತೀರ್ಮಾನ ಏನು ಬರುತ್ತದೆ ಬರಲಿ, ಅಲ್ಲಿಯವರೆಗೆ ಏಕೆ ಕಾಯುತ್ತೀರಿ? CBIಗೆ ಅಧಿಕಾರ ಇರತಕ್ಕಂತದ್ದು ಎರಡಕ್ಕೆ ಒಂದು ಮೊದಲು ಯಾವುದೇ ಕೋರ್ಟಿನಲ್ಲಿ ಕೂಡ ಮಾಡಬಹುದಾಗಿತ್ತು. ಈಗ ಅದು ಅವರು ಹೇಳುವ ಪ್ರಕಾರ matter is before the Supreme Court ಎಂದರೆ ಅದು ಬಿಡಿ. ಅಲ್ಲಿಯವರೆಗೆ ಏಕೆ ಹೋರಾಟ ಮಾಡುವುದಕ್ಕೆ ಹೋಗುತ್ತೀರಿ? 150 ಕೋಟಿ ರೂ. ಆರೋಪ ಮಾಡಿ 4–5 ವರ್ಷಗಳಾದವು, ನಿಜವಾಗಿಯೂ ನೀವು ಕೊಟ್ಟಿರತಕ್ಕಂತಹ ದಾಖಲಾತಿಗಳು convincing ಆಗಿ ಇದ್ದಿದ್ದರೆ, ಅವತ್ತು ಹೈಕೋರ್ಟಿನವರು ಒಪ್ಪುತ್ತಿದ್ದರು. ನಿಮಗೆ ಇಲ್ಲಿ turn down ಆಯಿತು, ಸುಪ್ರೀಂಕೋರ್ಟಿನ ಬೆಂಚ್‌ಗೆ ಹೋದಿರಿ, ಅದು ಫೈನಲ್ ಆಗಿ ಹೋಗಿದೆ ಹೋಗಲಿ. ಆದರೆ CBIಗೆ ರೆಫರ್ ಮಾಡತಕ್ಕಂತಹ ಅಧಿಕಾರ ಇರುವುದು ಅಲ್ಲಿಗೇಕೆ ಇಲ್ಲಿಯೇ ಅಧಿಕಾರ ಇದೆ. ನಿಮಗೇ ಅಧಿಕಾರ ಇದೆ. ಮಾನ್ಯ ರೇವಣ್ಣರವರು ಮಾತನಾಡಬಾರದ್ದು ಏನು ಮಾತನಾಡಿದರು? ನೀವು ಮಾನ್ಯ ಮುಖ್ಯಮಂತ್ರಿಗಳಿಗೆ ಹಿಂಡಿರಲಿಲ್ಲವಾ? ಅವರನ್ನು ನಿಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಕೆಲಸ ಮಾಡಲಿಲ್ಲವಾ ನೀವು? ದಯಮಾಡಿ ನಾನು ಹೇಳುತ್ತೇನೆ, ನಿಮಗೆ ನಿಜವಾಗಿಯೂ ಪ್ರಾಮಾಣಿಕತೆ ಇದ್ದಿದ್ದೇ ಆದರೆ, ಜನಾರ್ಧನರೆಡ್ಡಿಯವರೇ ನೀವು ನಿಜವಾಗಿಯೂ ಸುಪ್ರೀಂ ಕೋರ್ಟಿನವರಿಗೆ ಕಾಯುವ ಅವಶ್ಯಕತೆ ಇಲ್ಲ. ನಿಮಗೆ ದೇವರು ಕೊಟ್ಟಿದ್ದಾನೆಯೋ ಇಲ್ಲವೋ ಗೊತ್ತಿಲ್ಲ, ಸರ್ಕಾರ ಅಂತೂ ಕೊಟ್ಟಿದೆ. ನೀವು ಸಂಪನ್ನರಾಗಿದ್ದೀರಿ. ಒಬ್ಬ ಉದ್ಯಮಿ ಆಗಿದ್ದೀರಿ,

ಮಂತ್ರಿಗಳಾಗಿದ್ದೀರಿ, ದಯಮಾಡಿ ನಾನು ಹೇಳುತ್ತೇನೆ, ಮಾನ್ಯ ಮುಖ್ಯಮಂತ್ರಿಗಳ ಮೇಲೆ ಪ್ರಭಾವ ಬೀರಿ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬೇಡ, ನಾನು ಫೈಟ್ ಮಾಡುವುದಕ್ಕೆ ತಯಾರಾಗಿದ್ದೇನೆ. ಮುಖ್ಯಮಂತ್ರಿಗಳನ್ನು ಬಿಟ್ಟು ನೀವು ಹೇಳಿಕೆ ಕೊಡಿ. CBIಗೆ ತಯಾರಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳಿ ನೋಡೋಣ. ನನಗೆ ಗೊತ್ತಿದೆ ಮುಂದೆ ಏನು ಮಾಡಬೇಕೆಂದು. ಅದಕ್ಕೂ ತಯಾರಿಲ್ಲ. ಇವತ್ತು ನೀವು ಮಾನ್ಯ ಮುಖ್ಯಮಂತ್ರಿಗಳ ಮೇಲೆ dictatorship ತೋರಿಸುವುದಕ್ಕೆ ಹೋಗುತ್ತಿದ್ದೀರಿ. ನಾನು ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಬದ್ಧನಾಗಿದ್ದೇನೆ, ನಾನು ಏನು ಹೇಳಬೇಕೋ ಹೇಳುತ್ತೇನೆ. ಇವೆಲ್ಲ ನೀವು recordಗಳಲ್ಲಿ ಹೇಳುತ್ತಿದ್ದೀರಲ್ಲ, ನಾವು CBI enquiryಗೆ ತಯಾರಿದ್ದೇವೆ, ಸುಪ್ರೀಂ ಕೋರ್ಟ್ ತೀರ್ಪು ಬರುವವರೆಗೆ ಕಾಯುವುದಕ್ಕೆ ತಯಾರಿಲ್ಲ ಎನ್ನತಕ್ಕಂತಹ ಮಾತನ್ನು ಹೇಳಿ, ನಿಮ್ಮ ರಿಪೋರ್ಟ್ ಏಕೆ, ನಾನು ಹೇಳುತ್ತಿರುವುದು ಕೇಳಿ. CBIಗೆ ಕೊಡುವುದಕ್ಕೆ ಅಧಿಕಾರ ಇರುವುದು ಇಬ್ಬರಿಗೆ CBI enquiry ಮಾಡುವುದಕ್ಕೆ ನಾವು ತಯಾರಿದ್ದೇವೆ. ಇವತ್ತು ರಾಜ್ಯ ಸರ್ಕಾರ ಒಪ್ಪಿಗೆ ಕೊಟ್ಟರೆ ನಾವು ತಯಾರಾಗಿದ್ದೇವೆಂದು ಕೇಂದ್ರ ಸರ್ಕಾರದವರು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ರಾಜ್ಯಕ್ಕೆ ಮಾತ್ರ ಇರುವ ಪರಮೋಚ್ಚ ಅಧಿಕಾರ ಎಂದರೆ, CBI ಗೆ refer ಮಾಡತಕ್ಕಂತಹ ಅಧಿಕಾರ ಇರತಕ್ಕಂಥದ್ದು ಸರ್ಕಾರಕ್ಕೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ. ಮಾನ್ಯ ಮುಖ್ಯ ಮಂತ್ರಿಗಳು ಮಾಡುತ್ತಾರೋ ಬಿಡುತ್ತಾರೋ ಸರ್ಕಾರ ಇದೆ, ನೀವೂ ಸರ್ಕಾರದಲ್ಲಿ ಕ್ಯಾಬಿನೆಟ್ ಸಚಿವರು. ತೀರ್ಮಾನ ಮಾಡಿ ಅನೌನ್ಸ್ ಮಾಡಿ ನೋಡೋಣ. ಮಾನ್ಯ ಮುಖ್ಯ ಮಂತ್ರಿಗಳು ಹಾಗೆಯೇ ಕೂತಿರಲಿ. Let us see ಏಕೆ ಇವೆಲ್ಲಾ ಮಾತನಾಡುತ್ತೀರಿ ರೆಡ್ಡಿಯವರೆ, ಏಕೆ ಸುಪ್ರೀಂ ಕೋರ್ಟಿನ ಕಡೆ ತೋರಿಸುತ್ತೀರಿ? ನಿಮ್ಮ ದಾಖಲಾತಿಗಳು, ನೀವು ಕೊಟ್ಟಂತಹ ಕ್ಯಾಸೆಟ್, ಸಿ.ಡಿ. ಗಳೆಲ್ಲಾ ಹರಾಜಾಗಿ ಹೋದವು. ಜನಗಳಿಗೆ ನಂಬಿಕೆ ಹೋಗಿದೆ. ನೀವು ಸುಪ್ರೀಂಕೋರ್ಟಿನ ಡಿವಿಜನ್ ಬೆಂಚ್ ತೀರ್ಪು ಬರುವವರೆಗೆ ಕಾಯಬೇಡಿ. ಅಧಿಕಾರ ನಿಮ್ಮ ಕೈಯಲ್ಲಿದೆ. ನೀವು ಮಾಡಿ, ನೀವು ಏನೇನು ಮಾಡಿಸಿಲ್ಲ. ಇವತ್ತು ಎಲ್ಲದಕ್ಕೂ ನೀವೇ ಕಾರಣರಾಗಿದ್ದೀರಿ. ಮಾನ್ಯ ಮುಖ್ಯ ಮಂತ್ರಿಗಳನ್ನು ನಿಯಂತ್ರಣ ಮಾಡುತ್ತಿದ್ದೀರಿ.

ಶ್ರೀ ಜನಾರ್ಧನ ರೆಡ್ಡಿ: ಇಂತಹ ಮಾತುಗಳನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಟಿ. ಬಿ. ಜಯಚಂದ್ರ: ನಾನು ವಾಪಸ್ ತೆಗೆದುಕೊಳ್ಳುವ ಪ್ರಶ್ನೆ ಏನಿದೆ? ಮಾನ್ಯ ಶೋಭ ಕರಂದ್ಲಾಜೆಯವರನ್ನು ಏಕೆ ಬಿಟ್ಟಿರಿ?

(ಗೊಂದಲ)

ಶ್ರೀ ಜನಾರ್ಧನ ರೆಡ್ಡಿ: ವಿಷಯ ಮಾತನಾಡಿ ನೀವು . . . . . ನೀವು ಇಂತಹ ಮಾತುಗಳನ್ನು ವಾಪಸ್ ತೆಗೆದುಕೊಳ್ಳಿ. ಇದು ಕಾಂಗ್ರೇಸ್ ಪಾರ್ಟಿ ಸಂಸ್ಕೃತಿಯೇ?*

(ಗೊಂದಲ)

ಅಧ್ಯಕ್ಷರು: ಪ್ಲೀಸ್, ಎಲ್ಲರೂ ಕುಳಿತುಕೊಳ್ಳಿ, ಈ ರೀತಿಯ ಪದಗಳ ಪ್ರಯೋಗ ಬೇಡ

(ಗೊಂದಲ)

ಶ್ರೀ ಜನಾರ್ಧನ ರೆಡ್ಡಿ: *

[ಈ ಹಂತದಲ್ಲಿ ಮಾನ್ಯ ಸಚಿವರ ಮಾತಿಗೆ ವಿರೋಧ ವ್ಯಕ್ತಪಡಿಸುತ್ತಾ ಭಾರತೀಯ ರಾಷ್ಟ್ರೀಯ ಕಾಂಗ್ರೇಸ್ ಪಕ್ಷದ ಶಾಸಕರುಗಳು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು: ಪ್ಲೀಸ್

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಅವರು ಏನು ಮಾತನಾಡುತ್ತಿದ್ದಾರೆ ನೋಡಿ.

(ಗೊಂದಲ)

ಅಧ್ಯಕ್ಷರು: ಇದು ಯಾವುದೂ ದಾಖಲೆಗೆ ಹೋಗಬಾರದು. ಈಗ ಇಲ್ಲಿ ನಡೆಯುತ್ತಿರುವ ಮಾತುಗಳಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ.

(ಗೊಂದಲ)

ಅಧ್ಯಕ್ಷರು: ಸಚಿವರು ಮಾತನಾಡಿದ ಪದಗಳನ್ನು ದಾಖಲೆಯಿಂದ ತೆಗೆಸುತ್ತೇನೆ. ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ, ಎಲ್ಲರೂ ಹೀಗೆ ಸದನದ ಬಾವಿಯಲ್ಲಿ ನಿಂತು ಮಾತನಾಡಿದರೆ ಹೇಗೆ ಹೇಳಿ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಒಂದು ನಿಮಿಷ ಸುಮ್ಮನಿರಿ. ನಾನು ಹೇಳುತ್ತೇನೆ. ಈ ಸದನದ ಸದಸ್ಯರಲ್ಲದವರ ಯಾರ ಯಾರ ಹೆಸರುಗಳನ್ನು ಹೇಳಲಾಗಿದೆಯೋ ಅದೆಲ್ಲವನ್ನೂ ಕಡತದಿಂದ ತೆಗೆದು ಹಾಕಲಾಗಿದೆ.

---

*ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):-ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ರೀತಿಯಲ್ಲಿ ಚರ್ಚೆಯಾಗುತ್ತಿತ್ತು. ಮಾನ್ಯ ರೇವಣ್ಣನವರಿಗೆ ನಾವು ಏನು ವಿನಂತಿ ಮಾಡಿದೆವೆಂದರೆ ನಾಳೆ ನಾವು ಉತ್ತರ ಕೊಡುವುದಕ್ಕೆ ನಮಗೆ ಅನುಕೂಲವಾಗುತ್ತದೆಯಾದರೆ ಕಾರಣ ನೀವು ಮಾತನಾಡುತ್ತಿರುವುದನ್ನು ಮುಂದುವರೆಸಿ ಎಂದು ಹೇಳಿದೆವು. ಆ ಸಂದರ್ಭದಲ್ಲಿ ಅವರು ಏನು ಹೇಳಿದರೆಂದರೆ, ನಿಮ್ಮ ಪಕ್ಷದ ಶಾಸಕರುಗಳು ನಿಮ್ಮ ಜೊತೆಯಲ್ಲಿ ಇರುವಂಥವರು ಮೈನಿಂಗ್ ಲೈಸೆನ್ಸ್ ಪಡೆದು ನಿಮ್ಮ ಶಾಸಕರು ಲೂಟಿ ಮಾಡುತ್ತಿದ್ದಾರೆ. ಯಾವುದೇ ತನಿಖೆ ಬೇಡ, ಸಿ.ಬಿ.ಐ. ಬೇಡ, ಲೋಕಾಯುಕ್ತ ಬೇಡ, ನಿಮ್ಮಲ್ಲೆಲ್ಲಾ ಈ ರೀತಿಯಲ್ಲೇ ನಿಮ್ಮ ಶಾಸಕರುಗಳು ಲೂಟಿ ಮಾಡಿಕೊಂಡು ಹೋಗಲಿ ಎನ್ನುವ ಪದಗಳನ್ನು ಅವರು ಉಪಯೋಗಿಸಿದರು. ಆಗ ನಾನು ಎದ್ದುನಿಂತುಕೊಂಡು ಹೇಳಿದೆ, ದಯಮಾಡಿ ಆ ರೀತಿಯಲ್ಲಿ ಮಾತನಾಡಬೇಡಿ, ಹಿಂದಿನ ದಾಖಲೆಗಳನ್ನು ನೀವು ನೋಡಿ, ಲೈಸೆನ್ಸ್ ಪಡೆದಂಥವರು ಪ್ರಭಾವಿ ವ್ಯಕ್ತಿಗಳು. ಆಗ ಲೈಸೆನ್ಸ್ ಕೊಟ್ಟಿದ್ದೇ ಆ ಕಡೆಯಲಿದ್ದಂಥ ಆಡಳಿತ ಪಕ್ಷದವರಿಗೆ, ನಾನು ಮೊನ್ನೆ ಬೆಳಗಾಂನಲ್ಲಿಯೂ ಅವರ ಹೆಸರುಗಳನ್ನು ಹೇಳಿದ್ದೆ, ನಾಳೆಯೂ ಬೇಕಾದರೆ ಹೇಳುತ್ತೇನೆ, ಆದುದರಿಂದ ಈ ರೀತಿ ನೀವು ಮಾತನಾಡಬಾರದು ಎಂದು ನಾನು ಹೇಳಿದ್ದು. ಅಲ್ಲಿಂದ ಚರ್ಚೆ ಪ್ರಾರಂಭ ಆಯಿತು. ಅವರು ಈ ರೀತಿ ಶಬ್ದಗಳನ್ನು ಉಪಯೋಗಿಸಿದಾಗ ನಮ್ಮ ಜಯಚಂದ್ರರವರು ನಿಂತುಕೊಂಡು ಎಂಥವರೇ ಆಗಿರಲಿ ಒಬ್ಬ ರೂಲಿಂಗ್ ಪಾರ್ಟಿಯ ಶಾಸಕರಿಗೆ ತೋರಿಸಿ ಯಾರು ಬೇಕಾದರೂ ನಿಮ್ಮ ಶಾಸಕರು ಲೂಟಿ ಮಾಡಿಕೊಂಡು ಹೋಗಲಿ ಎನ್ನುವ ಶಬ್ಧವನ್ನು ಉಪಯೋಗಿಸಬಾರದು ಎಂದು ರೇವಣ್ಣನವರಿಗೆ ಹೇಳಿದ್ದರೆ ಇದ್ಯಾವುದೋ ಚರ್ಚೆ ಮುಂದೆ ಹೋಗುತ್ತಿರಲಿಲ್ಲ. ಇದು ಒಂದು ವಿಚಾರ. ಇನ್ನು ಎರಡನೆಯದಾಗಿ, ಮಾತೆತ್ತಿದರೆ ಬಳ್ಳಾರಿಯದನ್ನೇ ನೀವು ಹೇಳುತ್ತಿದ್ದೀರಿ. ಓ. ಕೆ. ಅದಕ್ಕೆ ನಾನೇನು ಹೇಳಿದೆನೆಂದರೆ, ಯಾರು ಮೈನಿಂಗ್ ಲೆಸೆನ್ಸ್ ಪಡೆದಿದ್ದಾರೆ ಅವರೂ ಸಹ ಕಾನೂನುಬಾಹಿವಾಗಿ ಅಕ್ಕಪಕ್ಕದ ಗುಡ್ಡದಿಂದ ಸಾಗಾಣಿಕೆ ಮಾಡುತ್ತಿರುವುದು ದಾಖಲೆಗಳಿಂದ ನಮಗೆ ಸಿಗುತ್ತಿದೆ. ಅದನ್ನು ಬಂದ್ ಮಾಡಿಸಿ ಎನ್ನುತ್ತೀರಿ. ಅದನ್ನು ಬಂದ್ ಮಾಡಿಸುವ ಸಲುವಾಗಿಯೇ ಇಲ್ಲಿ ಚರ್ಚೆ ಮಾಡುತ್ತಿರುವುದು. ಆ ಸಂದರ್ಭದಲ್ಲಿ ಯಾರೇ ಇರಬಹುದು, ಅವರೇನು ಹೇಳಿದರು, ನಿಮ್ಮವರೆಲ್ಲ ಮಾಡುತ್ತಿದ್ದಾರೆ ಎಂದರೆ, ನಾನು ಅದಕ್ಕೆ ದಾಖಲೆ ಕೊಡಿಯಪ್ಪಾ ಎಂದು ಹೇಳುತ್ತಿದ್ದೇನೆ. ಅದು ಬಳ್ಳಾರಿಯವರಿಗೆ ಹೇಳುತ್ತೀರೋ, ಶಿವಮೊಗ್ಗದವರಿಗೆ ಹೇಳುತ್ತಿರೋ, ಚಿಕ್ಕಮಗಳೂರಿನವರಿಗೆ ಹೇಳುತ್ತೀರೋ, ಹೀಗೆ ಯಾರು ಯಾರು ಹೀಗೆ ಮಾಡುತ್ತಿದ್ದಾರೆ ಎಂಬ ಬಗ್ಗೆ ನಿಮ್ಮ

ಹತ್ತಿರ ದಾಖಲೆ ಇದ್ದರೆ, ಮಾಹಿತಿಗಳಿದ್ದರೆ, ಅವುಗಳನ್ನು ಕೊಟ್ಟರೆ ನಾನು ಆ ಬಗ್ಗೆ ತನಿಖೆಯನ್ನು ಮಾಡಿಸುತ್ತೇನೆ. ಇನ್ನು ಮೂರನೆಯ ವಿಚಾರವೆಂದರೆ, ಸಿ.ಬಿ.ಐ.ನಿಂದ ಮಾಡಬೇಕೆ. ಲೋಕಾಯುಕ್ತದಿಂದ ಮಾಡಬೇಕೇ ಎನ್ನುವ ವಿಚಾರ ಸರ್ಕಾರಕ್ಕೆ ಬಿಟ್ಟದ್ದು. ಆದರೆ ನೀವು ಸಲಹೆ ಕೊಡಲು ನಿಮಗೆ ಸಂಪೂರ್ಣವಾದ ಸ್ವಾತಂತ್ರ್ಯ ಇದೆ. ಅಂತಿಮವಾಗಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾದ್ದು ಸರ್ಕಾರ. ಇದುವರೆಗೂ 24 ವರ್ಷದಲ್ಲಿ ಏನೂ ಮಾಡದೆ ಇವತ್ತು ಈ ರೀತಿ ಗುರುತರವಾದಂಥ ಆರೋಪ ಮಾಡುತ್ತಿದ್ದಾರೆ. ನಾವು ಇದರ ಚರ್ಚೆಗೆ ಸಿದ್ಧವಿದ್ದೇವೆ. ಲೋಕಾಯುಕ್ತಕ್ಕೆ ಶಕ್ತಿ ನೀಡಲು ಸಿದ್ದವಿದ್ದೇವೆ. ತನಿಖೆಯಾಗಲಿ ಎಂದು ನಾವು ಹೇಳುತ್ತಿರಬೇಕಾದರೆ, ಈಗ ಲೋಕಾಯುಕ್ತ ಬಿಟ್ಟು ಸಿ.ಬಿ.ಐ., ಸಿ.ಬಿ.ಐ. ಎಂದು ಹೇಳುತ್ತಾ ಕುಳಿತುಕೊಂಡರೆ ಇದು ಯಾವ ಧರ್ಮ ಸ್ವಾಮಿ? ಆದುದರಿಂದ ಇದರ ಚರ್ಚೆ ಪ್ರಾರಂಭವಾದಾಗ ಇದು ಅಡ್ಡದಾರಿ ಹಿಡಿದದ್ದು, ಸನ್ಮಾನ್ಯ ರೇವಣ್ಣನವರು ಮಾತನಾಡುವಾಗ ನಿಮ್ಮ ಶಾಸಕರುಗಳು ಬೇಕಾದರ ಲೂಟಿ ಮಾಡಲಿ ಎಂದರು. ಈ ಮಾತುಗಳನ್ನು ಸಹಿಸಿಕೊಳ್ಳಬೇಕೆ ರೂಲಿಂಗ ಪಾರ್ಟಿಯವರು ಸ್ವಾಮಿ?

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಪ್ರಮುಖವಾದ ವಿಚಾರ ಚರ್ಚೆಗೆ ಬಂದಾಗ ಸದನದಲ್ಲಿ ಈ ರೀತಿ ಆಗತ್ಯಕ್ಕಂಥದ್ದು ವಿಶೇಷ. ನಾವೊಂದು ಆರೋಪ ಮಾಡುತ್ತೇವೆ. ಅದಕ್ಕೆ ಅವರು ಪ್ರತ್ಯುತ್ತರ ಕೊಡತಕ್ಕಂಥದ್ದು ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಇದೆಲ್ಲಾ ನಡೆಯತಕ್ಕಂಥದ್ದೆ. ಆದರೆ ನಮ್ಮ ನಮ್ಮ ಮಧ್ಯದಲ್ಲಿಯೇ ಇರುವಂಥ ಸಂದರ್ಭದಲ್ಲಿ, ಜನಾರ್ಧನ ರೆಡ್ಡಿಯವರು ಹೇಳುವಂಥ ಸಂದರ್ಭದಲ್ಲಿ ನಾನು ಏನು ಹೇಳಿದೆನೆಂದರೆ, ನೋಡಿ ಸುಪ್ರೀಂಕೋರ್ಟ್ ಕಡೆ ಏಕೆ ತೋರಿಸುತ್ತೀರಿ, ಈಗ ಅಧಿಕಾರ ನಿಮ್ಮ ಕೈಯಲ್ಲಿ ಇದೆ. ಅಂಗೈಯಲ್ಲಿರತಕ್ಕಂಥ ಅಧಿಕಾರ ತೋರಿಸಲು ಕನ್ನಡಿ ಏಕೆ ಹುಡುಕುತ್ತೀರಪ್ಪಾ ಎನ್ನತಕ್ಕಂಥ ಮಾತನ್ನು ಹೇಳಿದೆ. ಆಗ ಅವರು ಬಹುಶಃ ಆವೇಶದಲ್ಲಿ ಮಾತನಾಡಬೇಕಾದಾಗ ಅವರಿಗೆ ಏನು ಆಯಿತೋ ನನಗೆ ಗೊತ್ತಾಗಲಿಲ್ಲ, ಅವರೊಬ್ಬ ಜವಾಬ್ದಾರಿಕೆ ಸಚಿವರಾಗಿದ್ದಾರೆ, ಕ್ಯಾಬಿನೆಟ್ ಸಚಿವರಾಗಿದ್ದಾರೆ. ಆದುದರಿಂದ ಸಚಿವರಿಗೇ ಅಧಿಕಾರವಿದೆ. ಮುಖ್ಯಮಂತ್ರಿಗಳಿಗೆ ಅಧಿಕಾರವಿದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ವೇಳೆ ಬೇಡವೆಂದರೂ ಸಚಿವರಾದ ನೀವೇ ಸಿ.ಬಿ.ಐ. ಎನ್‌ಕ್ವೈರಿ ಮಾಡಿಸುವ ಬಗ್ಗೆ ಅನೌನ್ಸ್ ಮಾಡಿ ಎಂದು ನಾನು ಅವರಿಗೆ ಹೇಳಿದೆ. ಅದೆಲ್ಲಾ ಆದಮೇಲೆ ಯಾರ ಹೆಸರನ್ನು ಅವರು ತೆಗೆದುಕೊಂಡರು ಸ್ವಾಮಿ?*

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು):–ಜಯಚಂದ್ರರವರೆ, ಜನಾರ್ಧನ ರೆಡ್ಡಿಯವರು ಯಾವ ಸಮಯದಲ್ಲಿ ಎದ್ದರು ಹೇಳಿ. ಮುಖ್ಯಮಂತ್ರಿಗಳು ನಿಮ್ಮ ಹಿಡಿತದಲ್ಲಿದ್ದಾರೆ ಎನ್ನುವ ಮಾತನ್ನು ಆಡಿದಾಗ, ಮುಖ್ಯಮಂತ್ರಿಗಳನ್ನು ನಿಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದೀರಿ ಎನ್ನುವ ಪದಗಳನ್ನು ಉಪಯೋಗಿಸಿ ಮಾತನಾಡಿದಾಗ ಅವರು ಎದ್ದರು. ರಾಜ್ಯದ ಆಡಳಿತದಲ್ಲಿ ಜನರ ನಿಯಂತ್ರಣದಲ್ಲಿ ನಾನು ಇದ್ದೇನೆ. ಜನಾರ್ಧನ ರೆಡ್ಡಿ, ಮುಖ್ಯಮಂತ್ರಿಗಳು ನಿಮ್ಮ ನಿಯಂತ್ರಣದಲ್ಲಿದ್ದಾರೆ ಎನ್ನುವ ಆರೋಪವನ್ನು ಅವರ ಮೇಲೆ ಮಾಡಿದರೆ ಹೇಗೆ ಹೇಳಿ. ಆ ರೀತಿಯ ಆರೋಪವನ್ನು ಅವರ ಮೇಲೆ ಮಾಡುವ ಅಗತ್ಯವಿತ್ತೆ? ನಾನು ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಯಾರದೇ ನಿಯಂತ್ರಣದಲ್ಲಿ ಇಲ್ಲ. ನಾನು ಸ್ವತಂತ್ರವಾಗಿ ಕೆಲಸವನ್ನು ಮಾಡುತ್ತಿದ್ದೇನೆ. ನೀವು ಏಕೆ ಆ ರೀತಿಯ ಆರೋಪವನ್ನು ಮಾಡಬೇಕಾಗಿತ್ತು?

(ಗೊಂದಲ)

ಶ್ರೀ ಜನಾರ್ಧನ ರೆಡ್ಡಿ: (ಪ್ರವಾಸೋದ್ಯಮ ಸಚಿವರು):*

(ಗೊಂದಲ)

ಅಧ್ಯಕ್ಷರು: ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬಾರದು

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:–ಮಾನ್ಯ ಅಧ್ಯಕ್ಷರೆ, ಪಾರ್ಲಿಮೆಂಟರಿ ಡಿಬೆಟ್‌ನಲ್ಲಿ ಕೊಡುವುದಕ್ಕೂ ತಯಾರಾಗಿರಬೇಕು, ತೆಗೆದುಕೊಳ್ಳುವುದಕ್ಕೂ ತಯಾರಾಗಿರಬೇಕು. ಕೇವಲ ಕೊಡುವುದಷ್ಟೇ ಎಂದರೆ ಹೇಗೆ? ಕೊಟ್ಟಮೇಲೆ ತೆಗೆದುಕೊಳ್ಳುವುದಕ್ಕೂ ತಯಾರಾಗಿರಬೇಕು. ಮೊದಲು ನೀವು ಮುಖ್ಯಮಂತ್ರಿಗಳ ಬಗ್ಗೆ ಮಾತನಾಡದಿದ್ದರೆ ಈ ಪ್ರಶ್ನೆಯೇ ಬರುತ್ತಿರಲಿಲ್ಲ. ಕೇವಲ ನಿಮಗೆ ಕೊಡುವುದಷ್ಟೆ ಗೊತ್ತೆ? ತೆಗೆದುಕೊಳ್ಳುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲವೆ? ಮಾನ್ಯ ಜಯಚಂದ್ರರವರು ಸುಪ್ರೀಂಕೋರ್ಟ್ ಬಗ್ಗೆ ಹೇಳಿದರು, ಪವರ್ಸ್ ಎಲ್ಲಿದೆ ಎಂದು ಸರಿಯಾಗಿಯೇ ಹೇಳಿದರು. ಅಲ್ಲಿಯವರೆವಿಗೂ ಚರ್ಚೆ ಸರಿಯಾಗಿಯೇ ಇತ್ತು. ನೀವು ಏನು ಕೊಟ್ಟಿದ್ದೀರೋ ಅದನ್ನು ನಿಮಗೆ ವಾಪಸ್ ಕೊಟ್ಟಿದ್ದಾರಷ್ಟೆ. ಪಾರ್ಲಿಮೆಂಟರಿ ಡಿಬೆಟ್‌ನಲ್ಲಿ ಕೊಡುವುದಕ್ಕೆ ತಯಾರಿದ್ದ ಮೇಲೆ ತೆಗೆದುಕೊಳ್ಳುವುದಕ್ಕೂ ತಯಾರಾಗಿರಬೇಕು ಸ್ವಾಮಿ. One way traffic ಅಲ್ಲ ಇಲ್ಲಿ. ಎಲ್ಲಾ ರಾಜಕೀಯ ಪಕ್ಷಕ್ಕೂ ರಾಜಕೀಯ ಇತಿಹಾಸವಿದೆ. ಎಲ್ಲಾ ರಾಜಕೀಯ ಪಕ್ಷಕ್ಕೂ ಚರಿತ್ರೆ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):- ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರಿಗೆ ಚರ್ಚೆ ಮಾಡುವುದಕ್ಕೆ ವಿಷಯ ಇಲ್ಲದೇ ಇರುವಾಗ ಕುಂಟುನೆಪ ಹುಡುಕಿಕೊಂಡು ಚರ್ಚೆ ಮಾಡುವುದಕ್ಕೆ ಅಡ್ಡಿ ಮಾಡುತ್ತಿದ್ದಾರೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ*

ಅಧ್ಯಕ್ಷರು: ನಾನು ತೆಗೆದು ಹಾಕಿದ್ದೇನೆಂದು ಹೇಳಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ನೀವು ಹೆಸರು ತೆಗೆದು ಹಾಕುವುದಲ್ಲ. ಅವರು ಹೇಳಿರತಕ್ಕಂಥ ಮಾತು ಎಲ್ಲವೂ ಕೂಡ ಕಡತದಿಂದ ಹೋಗಬೇಕು. ಎರಡನೆಯದಾಗಿ ಬಹುಶಃ ಕರ್ನಾಟಕ ವಿಧಾನಸಭೆಯ ಇತಿಹಾಸದಲ್ಲಿ ಈ ರೀತಿಯಾಗಿ ವರ್ತನೆ ಮಾಡಿ, ಮಾತನಾಡತಕ್ಕಂಥ ಜನ ಈಗ ಬಂದಿರತಕ್ಕಂಥವರೇ ವಿನಃ ಯಾವತ್ತೂ ಬಂದಿರಲಿಲ್ಲ. ಇದು ಕರ್ನಾಟಕದ ಇತಿಹಾಸ ಪೂರ್ವಕವಾಗಿರತಕ್ಕಂಥ ವಿಧಾನಸಭೆಗೆ ಮಾಡಿರತಕ್ಕಂಥ ಅವಮಾನ He is a product of BJP.

ಶ್ರೀ ಬಸವರಾಜ ಬೊಮ್ಮಾಯಿ:-ವಿಧಾನಸಭೆ ಇತಿಹಾಸದಲ್ಲಿ ದೊಡ್ಡ ದೊಡ್ಡದಾಗಿ ಚರ್ಚೆಯಾಗಿದೆ. ಏನೂ ಚರ್ಚೆಯಾಗಿಲ್ಲವೇ? ಎಲ್ಲರ ಬಗ್ಗೆ ಚರ್ಚೆಯಾಗಿದೆ.

(ಗೊಂದಲ)

ಅಧ್ಯಕ್ಷರು: ಎಲ್ಲರ ಹೆಸರು ಬಂದಿದೆ. ಎಲ್ಲರ ಹೆಸರು ಹೇಳಿದ್ದೀರಿ

ಶ್ರೀ ಬಸವರಾಜ ಬೊಮ್ಮಾಯಿ:-ಎಲ್ಲರ ಬಗ್ಗೆ ಕೂಡ ಚರ್ಚೆಯಾಗಿದೆ. ದಾಖಲೆ ತೆಗೆದು ನೋಡಿ. ಸಂದರ್ಭ ಬಂದಾಗ ಎರಡೂ ಕಡೆಯಲ್ಲಿ ಚರ್ಚೆಯಾಗಿದೆ. ಇದೇನು ಪ್ರಥಮ ಬಾರಿಯಲ್ಲ. ಈಗ ಏಕೆ sensitive ಆಗಿದ್ದೀರಿ?

ಅಧ್ಯಕ್ಷರು: ಎಲ್ಲರ ಹೆಸರೂ ಬಂದಿತ್ತು

ಶ್ರೀ ಬಸವರಾಜ ಬೊಮ್ಮಾಯಿ:-Why you are sensitive? ದಾಖಲೆ ತೆಗೆದು ನೋಡಿದರೆ ಬೇಕಾದಷ್ಟು ಬಾರಿ ರಾಷ್ಟ್ರ ನಾಯಕರ ಬಗ್ಗೆ ಚರ್ಚೆಯಾಗಿದೆ, ಹೆಸರುಗಳು ಪ್ರಸ್ತಾಪವಾಗಿದೆ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಬೊಮ್ಮಾಯಿಯವರೇ ನಾನು ಮಾನ್ಯ ಅಧ್ಯಕ್ಷರ ಒಪ್ಪಿಗೆ ಪಡೆದು ನಿಂತಿದ್ದೇನೆ, ಸ್ವಲ್ಪ ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ:-ನಾನೂ ಕೂಡ ಸ್ಪೀಕರ್ ಒಪ್ಪಿಗೆ ಪಡೆದು ನಿಂತಿದ್ದೇನೆ. ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಪಡದೇ ನಾನು ಮಾತನಾಡುತ್ತಿರುವುದು.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ನಾನು ಪ್ರಮುಖವಾದ ವಿಚಾರವನ್ನು

ಸದನದ ಗಮನಕ್ಕೆ ಮತ್ತು ರಾಜ್ಯದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರೇ, ಈ ಜೆಜೆಪಿ ಪಕ್ಷ ಅಧಿಕಾರಕ್ಕೆ ಬಂದಂತಹ ದಿನದಿಂದಲೂ ಇಲ್ಲಿ ರಾಜಕೀಯವಾಗಿರತಕ್ಕಂಥ ವ್ಯತ್ಯಾಸದ ಹಿನ್ನೆಲೆಯಲ್ಲಿ ನಾನೊಬ್ಬ ಪ್ರತ್ಯಕ್ಷ ಸಾಕ್ಷಿಯಾಗಿದ್ದು,

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ* ಇವತ್ತು ನಾನು ಒಂದು ವಿಚಾರ ಹೇಳುತ್ತೇನೆ, ಸಿಬಿಐಗೆ ಏನಾದರೂ ರೆಫರ್ ಮಾಡಬೇಕೆನ್ನುವ ಹಾಗಿದ್ದರೆ ಅವರಿಗೆ ಅಧಿಕಾರ ಇತ್ತು. ಆದರೆ ನಾವು ಆ ಕೆಲಸ ಮಾಡಿಸಲಿಲ್ಲ. ಶ್ರೀಮತಿ ಸೋನಿಯಾ ಗಾಂಧಿ ಹೇಳಿರತಕ್ಕಂಥಾದ್ದು ಏನೆಂದರೆ there is a democratically elected Government, Chief Minister is there, let him take a decision we will not impose decision ಎನ್ನುವಂತಹ ಮಾತನ್ನು ಹೇಳಿದರಲ್ಲ, ಆ ಧಾರಾಳತನ, ಆ ದೂರದೃಷ್ಟಿತ್ವ ಇವರಲ್ಲಿ ಕಾಣುವುದಕ್ಕೆ ಆಗುತ್ತದೆಯೇ ಸ್ವಾಮಿ? ನಾನು ಹೇಳುತ್ತೇನೆ, ಈ ಸಭೆಯಲ್ಲಿ ಈ ರೀತಿಯಾದಂತಹ ವಿಚಾರಗಳು ಆಗಬಾರದು. ದಯಮಾಡಿ ನಾನು ಇವತ್ತಿನಿಂದ ಶ್ರೀಮಾನ್ ಜನಾರ್ಧನ ರೆಡ್ಡಿಯವರು ಎಂದು ಕರೆಯುವುದಿಲ್ಲ. ಸತ್ಯ ಹರಿಶ್ಚಂದ್ರ ಜನಾರ್ಧನ ರೆಡ್ಡಿ ಎಂದೇ ಸಂಬೋಧನೆ ಮಾಡುತ್ತೇನೆ. ಅವರು ನಿಜವಾಗಲೂ ಕೂಡ ಸತ್ಯ ಹರಿಶ್ಚಂದ್ರ ಆಗಿದ್ದರೆ ಸಿಬಿಐ ಎನ್‌ಕ್ವೈರಿಗೆ ಒಪ್ಪಿಕೊಳ್ಳಲಿ, ಸಿಬಿಐ ಎನ್‌ಕ್ವೈರಿಗೆ ಫೋರ್ಸ್ ಮಾಡಲಿ. ಆಮೇಲೆ ನಾನು ಒಪ್ಪುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಇವತ್ತು ಏಕೆ ಇಷ್ಟು ಚರ್ಚೆ ಎಂದು ನನಗೆ ಅರ್ಥವಾಗುತ್ತಿಲ್ಲ. 150 ಕೋಟಿ ರೂಪಾಯಿಯ ಹಗರಣವಿರಬಹುದು, ಲೋಕಾಯುಕ್ತರು ಕೊಟ್ಟಿರತಕ್ಕಂಥ ವರದಿ ಇರಬಹುದು ಅಥವಾ ಕೇಂದ್ರ ಸರ್ಕಾರದ ಮಂತ್ರಿಗಳು ಬರೆದಿರತಕ್ಕಂಥ ಪತ್ರದ ಆಧಾರ ಏನಿದೆ, ಅದರ ಒಟ್ಟಾರೆ ತಾತ್ಪರ್ಯ ಏನೆಂದರೆ ಸಿಬಿಐಗೆ ಕೊಡಿ ಎಂದು ಇರುವುದು. ದಯಮಾಡಿ ಸಿಬಿಐ ಗೆ ಕೊಡಿ. ಈ ಅಕ್ರಮ ಗಣಿಗಾರಿಕೆ, ಅಕ್ರಮ ದಂಧೆ ಮಾನ್ಯ ಕುಮಾರಸ್ವಾಮಿ ಕಾಲದಲ್ಲಿಯಾಗಿರಲಿ, ಧರ್ಮ್‌ಸಿಂಗ್ ಕಾಲದಲ್ಲಿಯಾಗಿರಲಿ, ಯಾರ ಕಾಲದಲ್ಲಿಯೇ ಆಗಿರಲಿ ಅದನ್ನು ಸಿಬಿಐಗೆ ಒಪ್ಪಿಸಿ, ಇವತ್ತು ಅಕ್ರಮ ಗಣಿಗಾರಿಕೆ ಸಾರಾಸಗಟಾಗಿ ಲೂಟಿ ಆಗುತ್ತಿರುವಂತಹ ಸಂದರ್ಭದಲ್ಲಿ ಅದಕ್ಕೆ ಸಿಬಿಐ ಎನ್‌ಕ್ವೈರಿ ಆಗಲಿ.

ಶ್ರೀ ಎಂ. ವಿ. ನಾಗರಾಜು: ಅಕ್ರಮ ಗಣಿಗಾರಿಕೆಗೆ ಲೈಸೆನ್ಸ್ ಕೊಟ್ಟವರು ನೀವೇ, ಇವತ್ತು ನಮ್ಮನ್ನು ಕೇಳುವುದಕ್ಕೆ ಬಂದಿದ್ದೀರಿ. ಇಷ್ಟು ವರ್ಷ ಆಗುತ್ತಿರಲಿಲ್ಲವೇ? ಎರಡು ವರ್ಷ ಆಗಿದೆ ಎಂದು ನಮಗೆ ದಬಾಯಿಸುತ್ತೀರಲ್ಲ. ನಿಮಗೆ ಮಾನ ಮರ್ಯಾದೆ ಇದ್ದರೆ

ನೀವು ಏಕೆ ಕೊಡಲಿಲ್ಲ? ದೇಶವನ್ನು ಲೂಟಿ ಮಾಡಿದಿರಿ. ಬೋಫೋರ್ಸ್ ಹಗರಣ ಲೂಟಿ ಮಾಡಿದಿರಿ. ನೆರೆ ಸಂತ್ರಸ್ತರ ಹಣ ಲೂಟಿ ಮಾಡಿದಿರಿ. ಈ ರಾಜ್ಯದ ಸಂಪತ್ತು ಲೂಟಿ ಮಾಡಿದಿರಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮನವಿ ಮಾಡುತ್ತೇನೆ. ಇಲ್ಲಿ ನಡೆದಂತಹ ಎಲ್ಲಾ ವಿಚಾರಗಳನ್ನು ಕೂಡ ...

ಶ್ರೀ ಎಂ.ವಿ. ನಾಗರಾಜು: ಈಗ ನೀತಿ ಪಾಠ ಹೇಳುತ್ತಾರಲ್ಲ. ನಿಮಗೆ ನಾಚಿಕೆಯಾಗಬೇಕು. ಭಿಕ್ಷೆ ಎತ್ತಿದ ಹಣವನ್ನು ಲೂಟಿ ಮಾಡಿಬಿಟ್ಟಿರಿ. ನಿಮಗೆ ನಾಚಿಕೆಯಾಗಬೇಕು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಅವರೆಲ್ಲ ಎದ್ದು ಮಾತನಾಡುತ್ತಾರೆ. ಎಂದರೆ ಏನು ಸ್ವಾಮಿ ಇದು?

ಅಧ್ಯಕ್ಷರು: House order ನಲ್ಲಿ ಇಲ್ಲದಿದ್ದ ಮೇಲೆ ಏನು ಮಾಡುವುದಕ್ಕೆ ಆಗುತ್ತದೆ? ನೀವು ಮುಗಿಸಿ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾವು ರಾಷ್ಟ್ರದ ರಾಜಕಾರಣದಲ್ಲಿ ಈ ಸರ್ಕಾರದ ಬಗ್ಗೆ ಕಾಂಗ್ರೆಸ್ಸಿನ ನಾಯಕರು ಯಾವರೀತಿಯಾದಂತಹ ನಿಲುವನ್ನು ತೆಗೆದುಕೊಂಡಿದ್ದರು ಎಂದು ಹೇಳಿದ ಮೇಲೆ ಅವರ ಬಗ್ಗೆ ಅಪಮಾನದ ಮಾತುಗಳನ್ನು ಆಡಿರುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅವರ ಮುಖೇನ ಕ್ಷಮೆ ಕೇಳಿಸುವಂತಹ ಕೆಲಸವನ್ನು ಮಾಡಿದರೆ ಅವರಿಗೆ ಘನತೆ ಬರುತ್ತದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದಯಮಾಡಿ ಕ್ಷಮಾಪಣೆ ಕೇಳಿ, ಸಿಬಿಐ ಎನ್‌ಕ್ವೈರಿ ಮಾಡಿ ಅದಕ್ಕೆ ಒಂದು ಅಂತಿಮ ಹಾಡೋಣ. ಇಲ್ಲವಾದರೆ ಇದು ಎಷ್ಟು ದಿವಸವಾದರೂ ಚರ್ಚೆ ಆಗುತ್ತಿರುತ್ತದೆ. ಇದನ್ನು ನಾವು ಹೇಳಿದ್ದಲ್ಲ, ಲೋಕಾಯುಕ್ತರು ಹೇಳಿರುವಂತಹ ಮಾತು. ದಯಮಾಡಿ ಎಲ್ಲವನ್ನೂ ಸೇರಿಸಿ ಇವತ್ತು ಲೋಕಾಯುಕ್ತಕ್ಕೆ ಕೊಡತಕ್ಕಂಥ ಕೆಲಸವನ್ನು ಮಾಡಿ, ಮಾನ್ಯ ಮುಖ್ಯಮಂತ್ರಿಗಳು ....

ಅಧ್ಯಕ್ಷರು: ಆಯಿತು ನೀವು ಹೇಳಿದ್ದನ್ನೇ ಹೇಳುತ್ತಿದ್ದರೆ ನಾನು ಕೇಳುವುದಕ್ಕೆ ಆಗುವುದಿಲ್ಲ. ನೀವು ಎಷ್ಟು ಸಲ ಅದನ್ನು ಹೇಳಿದಿರಿ, 50 ಸಲ ಹೇಳಿದಿರಿ,

ಹೇಳಿದ್ದನ್ನೇ ಹೇಳುವುದರಲ್ಲಿ ಏನು ಅರ್ಥವಿದೆ?

ಶ್ರೀ ಟಿ. ಬಿ. ಜಯಚಂದ್ರ: ಅವರು ಮಾಡಿರತಕ್ಕಂಥಹ ಆರೋಪಕ್ಕೆ ಅವರಾದರೂ ಕ್ಷಮಾಪಣೆ ಕೇಳಲಿ.

ಅಧ್ಯಕ್ಷರು: ತಾವು deputy leader, ತಾವು ಹೇಳಿದ್ದನ್ನೇ ಹೇಳುತ್ತಿದ್ದರೆ ಅದಕ್ಕೆ ಏನರ್ಥ?

ಶ್ರೀ ಟಿ.ಬಿ. ಜಯಚಂದ್ರ: ಹಾಗಾದರೆ ಅವರ ಕೈಯಲ್ಲಿ ಹೇಳಿಸಿ.

ಅಧ್ಯಕ್ಷರು: ಆಯಿತು, ಈಗ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ. ಇವತ್ತು ಯಾರ್‍ಯಾರು ಈ ಸದನದ ಸದಸ್ಯರಲ್ಲದವರ ಹೆಸರು ಹೇಳಿದ್ದಾರೆ, ಅವರ ಬಗ್ಗೆ ಏನೇನು ಶಬ್ಧಗಳು ಪ್ರಯೋಗವಾಗಿವೆ, ಅದೆಲ್ಲವನ್ನು ಕಡತದಿಂದ ತೆಗೆದು ಹಾಕಬೇಕೆಂದು ಆದೇಶ ಮಾಡಿದ್ದೇನೆ.

(ಗೊಂದಲ)

ಅಧ್ಯಕ್ಷರು: ಕ್ಷಮೆ ಕೇಳುವುದಕ್ಕೆ .....

ಶ್ರೀ ಎಸ್. ಸುರೇಶ್ ಕುಮಾರ್: ಕ್ಷಮೆ ಅಲ್ಲ, ಮಾನ್ಯ ಜಯಚಂದ್ರರವರೇ, ನಿನ್ನೆ ಮತ್ತು ಇವತ್ತು ನೀವು ಬಹಳ ಚೆನ್ನಾಗಿ ಮಾತನಾಡಿದ್ದನ್ನು ನಾನು ಮೆಚ್ಚಿಕೊಂಡೆನು. ಮಾನ್ಯ ರೇವಣ್ಣನವರು ಕೂಡ ಏನೋ ಮಾತನಾಡುತ್ತಿದ್ದರು. ನಾನು ಸುಮ್ಮನೆ ಕುಳಿತುಕೊಂಡು ಇದನ್ನು observe ಮಾಡುತ್ತಿದ್ದೆನು. ಇದು ಈ ಮಟ್ಟಕ್ಕೆ ಬರಬಾರದಾಗಿತ್ತು. ಇಡೀ ಸದನದಲ್ಲಿ Revanna is the only man who is having the last laugh. ಐದು ಗಂಟೆಗೆ ಅವರು ನನಗೆ ಇವತ್ತು ಮಾತನಾಡುವುದಕ್ಕೆ ಆಗುವುದಿಲ್ಲ. ಸದನವನ್ನು ನಾಳೆಗೆ ಮುಂದೂಡಿ ಎಂದು ಹೇಳಿದರು. He has succeeded in getting his absence at 6.10. ನಾನು ರೇವಣ್ಣನವರನ್ನು ಬುದ್ಧಿವಂತ ಎಂದು ತಿಳಿದುಕೊಂಡಿದ್ದೆನು. ಆದರೆ ಇಷ್ಟು ಬುದ್ಧಿವಂತರು ಎಂದು ನನಗೆ ಗೊತ್ತಿರಲಿಲ್ಲ. ಎಲ್ಲರನ್ನು ಕೂಡ ಮೂರ್ಖರನ್ನಾಗಿ ಮಾಡಿ ಅವರ ಗುರಿಯನ್ನು ಅವರು ಇವತ್ತು ಈಡೇರಿಸಿಕೊಂಡಿದ್ದಾರೆ. ನಾನು ಕೇಳುವುದು ಇಷ್ಟೇ, ಮಾನ್ಯ ಸಭಾಧ್ಯಕ್ಷರು ಒಂದು ಮಾತನ್ನು ಹೇಳಿದ್ದಾರೆ. ಯಾವುದೇ ವಿಚಾರ ಇರಲಿ ಇವತ್ತು ಗಂಭೀರವಾಗಿ ಚರ್ಚೆ ನಡೆಯುತ್ತಿತ್ತು. ಇದು ಈ ಮಟ್ಟಕ್ಕೆ ಬರಬಾರದಾಗಿತ್ತು. ಆ ರೀತಿ ಇವತ್ತು ಎಲ್ಲರಿಗೂ ಕೂಡ ಅನಿಸಿದೆ. ಮಾನ್ಯ ಸಭಾಧ್ಯಕ್ಷರು ಹೇಳಿದಂತೆ ಇವತ್ತು ಯಾರ್‍ಯಾರು ಈ ಸದನದ ಸದಸ್ಯರಲ್ಲ, ಅವರ ಬಗ್ಗೆ ಮಾತುಗಳು

ಬಂದಿದೆ, ಆ ಮಾತು ಆಡಬಾರದಾಗಿತ್ತು, ಅದನ್ನು expunge ಮಾಡಿದ್ದಾರೆ. ಅದನ್ನು ಒಪ್ಪಿಕೊಂಡು ಈಗ ಸದನವನ್ನು ನಡೆಸೋಣ.

(ಗೊಂದಲ)

ಶ್ರೀ ಸಿ. ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೇ, ಈಗಾಗಲೇ ಪ್ರೆಸ್‌ನಲ್ಲಿ ತೆಗೆದುಕೊಂಡಾಯಿತು.

ಅಧ್ಯಕ್ಷರು: ಇಲ್ಲ ಪತ್ರಿಕೆಯಲ್ಲಿ ಬರಬಾರದೆಂದು ಹೇಳಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಒಂದು ಮಾತು ಹೇಳುತ್ತೇನೆ. ಮಾನ್ಯ ಸುರೇಶ್ ಕುಮಾರ್ ಮಾತನಾಡುವಾಗ ಕೆಲವು ಮಾತುಗಳನ್ನು ಆಡಬಾರದಾಗಿತ್ತು ಎಂದು ವಿಷಾದ ವ್ಯಕ್ತಪಡಿಸುವಂತಹ ರೀತಿಯಲ್ಲಿ ಹೇಳಿದ್ದಾರೆ. ಆದರೆ ತಾವು ಇವತ್ತು ಆದೇಶ ಕೊಟ್ಟಾಗ ಪ್ರೆಸ್ ಮೀಡಿಯಾದವರು ಇದನ್ನು ಒಪ್ಪಿದರು. ನಿಮ್ಮ ಈ ಟಿ.ವಿ. ಮೀಡಿಯಾಗಳಿಗೆ ಏನು ಮಾಡುತ್ತೀರಿ ಸ್ವಾಮಿ, ಅಲ್ಲಿ ಮೆಸೇಜ್ ಹೊರಟುಹೋಯಿತು.

ಅಧ್ಯಕ್ಷರು: ನಾನು ಈಗಾಗಲೇ ಯಾವುದೂ ದಾಖಲೆಗೆ ಹೋಗಬಾರದೆಂದು ಹೇಳಿದ್ದೇನೆ. ಎಲ್ಲಾ ನೀವು ಹೇಳಿದಂತೆ ಎಂದರೆ ಹೇಗೆ? ನಾನು ಮೊದಲಿಗೆ ಯಾವುದೂ ದಾಖಲೆಗೆ ಹೋಗಬಾರದೆಂದು ಹೇಳಿದ್ದೇನೆ. ಅವರಿಗೂ ಹೇಳಿದ್ದೇನೆ. ನೀವು ಎಲ್ಲಕ್ಕೂ ಈ ರೀತಿ ವಾದ ಮಾಡಿದರೆ ಹೇಗೆ? ಧರಣಿಗೆ ಬರುವುದಕ್ಕಿಂತ ಮುಂಚೆಯೇ ಯಾವುದನ್ನು ದಾಖಲೆಗೆ ತೆಗೆದುಕೊಳ್ಳಬಾರದೆಂದು ಹೇಳಿದ್ದೇನೆ***.

ಶ್ರೀ ಟಿ. ಬಿ. ಜಯಚಂದ್ರ: ಅದನ್ನು ಹೇಳಿದ್ದೀರಿ.

ಅಧ್ಯಕ್ಷರು: ಮತ್ತೆ ಇನ್ನು ಏನು ಮಾಡಬೇಕಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಅದರ ಜೊತೆಗೆ ಈ ರೀತಿಯಾದಂಥ ಹೇಳಿಕೆಗಳನ್ನು ನೀಡುವಂಥ ಇವರು ಸಚಿವ ಸಂಪುಟದ ಸಹೋದ್ಯೋಗಿಗಳು ಆಗಿದ್ದಾರೆ. ಇವರು ಮಾತುಗಳನ್ನು ಆಡಿದಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ರಾಷ್ಟ್ರದ ನಾಯಕರುಗಳ ಬಗ್ಗೆ ಲಘುವಾಗಿ ಮಾತನಾಡುವಂಥ ಮಂತ್ರಿಮಂಡಲವನ್ನು ಇಟ್ಟುಕೊಂಡಿದ್ದೀರಲ್ಲಾ ಎನ್ನುವ ಮಾತನ್ನು ಬೇರೆಯವರು ಆಡುತ್ತಾರೆ. ನೀವು ಅವರ ಪರವಾಗಿ ಇರುವಂಥದ್ದಕ್ಕೆ ವಿಷಾದವನ್ನು ವ್ಯಕ್ತಪಡಿಸಿ, ನಿಮ್ಮ ಘನತೆಗೆ ಹೆಚ್ಚು ಗೌರವ ಬರುತ್ತದೆ.

ಅಧ್ಯಕ್ಷರು: ನಾನು ನೋಡಿದ್ದೇನೆ, ರಾಷ್ಟ್ರ ನಾಯಕರ ಬಗ್ಗೆ ಇಲ್ಲಿ ಮಾತನಾಡಿರುವಂಥದ್ದು ಪ್ರಥಮ ಬಾರಿ ಏನೂ ಅಲ್ಲ. ಎಲ್ಲರೂ ಇಲ್ಲಿ ಮಾತನಾಡಿದ್ದೀರಿ. ಆ ಕಡೆಯವರು ರಾಷ್ಟ್ರ ನಾಯಕರ ಬಗ್ಗೆ ಮಾತನಾಡಿದ್ದಾರೆ.

*ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

ನಾವು ಕೇಳಿದ್ದೇವೆ. ಇಲ್ಲಿ ಶ್ರೀಮತಿ ಸುಷ್ಮಾ ಸ್ವರಾಜ್ ಬಗ್ಗೆ ಏನೇನು ಮಾತುಗಳು ಬಂದಿದೆಯೆಂಬುದನ್ನು ನಾನು ಕೇಳಿದ್ದೇನೆ. ಸುಮ್ಮನೆ ಏಕೆ? ಇದರ ಬಗ್ಗೆ ನಾನು ಏನು ಮಾತನಾಡುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೆ, ಕಳೆದ ಅರ್ಧ ಗಂಟೆಯಿಂದ ನಡೆದಂಥ ಚರ್ಚೆಯು ನನಗೆ ತುಂಬಾ ನೋವು ತಂದಿದೆ. ಜವಾಬ್ದಾರಿ ಇರುವಂಥ ಜೆ.ಡಿ.ಎಸ್. ನಾಯಕರಾದ ಮಾನ್ಯ ರೇವಣ್ಣನವರು ನಿಮ್ಮ ಶಾಸಕರು ಏನು ಬೇಕಾದರೂ ಲೂಟಿ ಮಾಡಲಿ ಏನು ತನಿಖೆಯು ಬೇಡವೆಂದಾಗ ಈ ಎಲ್ಲಾ ವಿಷಯಗಳು ಪ್ರಸ್ತಾಪವಾಯಿತು. ಮಾನ್ಯ ಜಯಚಂದ್ರರವರು ಎದ್ದು ನಿಂತುಕೊಂಡು ಮುಖ್ಯಮಂತ್ರಿಯವರು ನಿಮ್ಮ ಹಿಡಿತದಲ್ಲಿಟ್ಟುಕೊಂಡಿದ್ದೀರಾ ಎನ್ನುವಂಥದ್ದು ಇದು ಅಗತ್ಯವಿರಲಿಲ್ಲ. ಇದು ಆಯಿತು, ನಾನು ಎರಡೂ ಕಡೆ ಅದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆ. ದಯಮಾಡಿ ಸುಸೂತ್ರವಾಗಿ ಕಾರ್ಯಕಲಾಪಗಳನ್ನು ನಡೆಸೋಣ. ಈ ಸದನದಲ್ಲಿ ಯಾವುದೇ ಹೆಸರುಗಳನ್ನು ಪ್ರಸ್ತಾಪ ಮಾಡುವ ಅಗತ್ಯವಿಲ್ಲ. ದಯಮಾಡಿ ಧರಣಿಯಲ್ಲಿ ನಿರತರಾಗಿರುವ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ತೆರಳಿ ಕಲಾಪ ನಡೆಯಲು ಅವಕಾಶ ಮಾಡಿಕೊಡಿ, ನಾನು ವಿಷಾದ ವ್ಯಕ್ತಪಡಿಸುತ್ತೇನೆ.

(ಈ ಹಂತದಲ್ಲಿ ಧರಣಿ ನಿರತ ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು)

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ತಮ್ಮ ಚರ್ಚೆಯನ್ನು ಮುಂದುವರೆಸಿ, ಮತ್ತೆ ಸಮಯವನ್ನು ಕೇಳಬೇಡಿ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಾವು ಮಾನ್ಯ ರೇವಣ್ಣನವರ ಮನಸ್ಸಿನ ಇಂಗಿತವನ್ನು ಅರ್ಥ ಮಾಡಿಕೊಂಡಿದ್ದೇವೆ. ನಿಮ್ಮ ಪರವಾಗಿ ಸಭಾಧ್ಯಕ್ಷರು ಹೇಳುತ್ತಾರೆ, ದಯವಿಟ್ಟು ತಮ್ಮ ಚರ್ಚೆಯನ್ನು ನಾಳೆ ಮುಂದುವರೆಸಿ.

ಅಧ್ಯಕ್ಷರು: ಆಯಿತು, ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 13 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 8ನೇ ಜುಲೈ ಮಾಹೆ 2010ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)